
# ಅಖಿಲ ಭಾರತ ಪತ್ರಿಕೆ

## ಆಗಸ್ಟ್ 2019

# ಯುಗಪರಿವರ್ತನೆಯ ಯೋಗಿ

ಬೆಲೆ : 15/-



ಶ್ರೀ ಅರವಿಂದರು

(ಫೋಟೋ ಕೃಪೆ: ಜ್ಯೋತಿಸ್ ಜಿ. ಗುರುಮೂರ್ತಿ ಕೆನಡಾ)

**ಅಖಿಲ ಭಾರತ ಪತ್ರಿಕೆ**
**ಆಗಸ್ಟ್ 2019**

ಸಂಪುಟ: 29 ಸಂಚಿಕೆ: 08

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಪರಿವಿಡಿ

# “ಯುಗಪರಿವರ್ತನೆಯ ಯೋಗಿ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಯುಗಪರಿವರ್ತನಾಶೀಲ ರಾಷ್ಟ್ರೀಯವಾದಿ** 10
ಅನು: ಶ್ರೀ ಪುಟ್ಟು ಕುಲಕರ್ಣಿ

**ಸ್ಮೃತಿಗಳು** 45
ಅನು: ಪ್ರೊ. ವೀರಭದ್ರಪ್ಪ ಕೆ.

**“ವಂದೇ ಮಾತರಂ” ಲೇಖನಗಳು** 53
ಅನು: ನಾಗಜ್ಯೋತಿ ಎಲಿಗಾರ

**“ಕರ್ಮಯೋಗಿನ್” ಲೇಖನಗಳು** 57
ಅನು: ಡಾ. ಮಹಾದೇವ ಸಕ್ರಿ

**“ಧರ್ಮ” ಲೇಖನಗಳು** 63
ಅನು: ಡಾ॥ ಬಿ.ಆರ್. ಭೀಡ

**ವಾರ್ತಾಪತ್ರ** 72

**ಟಿಪ್ಪಣಿ:** ಆಗಸ್ಟ್ ತಿಂಗಳ ಅಖಿಲ ಭಾರತ ಪತ್ರಿಕೆ ವಿಶೇಷ ಸಂಚಿಕೆಯಾಗಿದ್ದು “ಶ್ರೀ ಅರವಿಂದರ ದರ್ಶನ” ಎಂಬ ಲೇಖನವನ್ನು ಓದುಗರ ಹೆಚ್ಚಿನ ಮಾಹಿತಿಗಾಗಿ ಪುಟ 5ರಲ್ಲಿ ಸೇರಿಸಲಾಗಿದೆ.

## ಸಂಪಾದಕರ ಟಿಪ್ಪಣಿ

1905 ರಲ್ಲಿ 'ವಂಗ ಭಂಗ' (ಬಂಗಾಲ ವಿಭಜನೆ) ಆದಾಗಲೇ, ಶ್ರೀ ಅರವಿಂದರು ಭಾರತದ 'ಸ್ವಾತಂತ್ರ್ಯ ಹೋರಾಟ'ದಲ್ಲಿ ಧುಮುಕಿದ್ದರು. ಅದೂ ಕೇವಲ ಐದೇ ವರ್ಷದ ಅತ್ಯಲ್ಪ ಅವಧಿಯಾಗಿದ್ದರೂ, ಸ್ವಾತಂತ್ರ್ಯ ಹೋರಾಟಕ್ಕೆ ಒಂದು ನಿರ್ಣಯಾತ್ಮಕವಾದ ತಿರುವನ್ನು ತಂದುಕೊಡುವಲ್ಲಿ ಮುಖ್ಯ ಘಟನೆಯಾಗಿತ್ತು. ಅಷ್ಟು ಚಿಕ್ಕ ಅವಧಿಯೇ ಶ್ರೀ ಅರವಿಂದರಿಗೆ ಸಾಕಾಗಿತ್ತು. ಅವರು ರಾಷ್ಟ್ರದ ಕಲ್ಪನಾ ಶಕ್ತಿಯನ್ನು ಜ್ವಲನಶೀಲಗೊಳಿಸಿ, ದೇಶದ ಜನ ಸಮುದಾಯವನ್ನು ತಮ್ಮ ಬರಹಗಳಿಂದ ಹಾಗೂ ಭಾಷಣಗಳ ಮೂಲಕ ಜಾಗ್ರತಗೊಳಿಸಿ, ಅದು ವಿದ್ಯುತ್–ಕಾಂತೀಯತೆಯ ತೇಜೋಮಯತೆಯಿಂದ ಮತ್ತೂ ಪ್ರಜ್ವಲಗೊಂಡು ಬೆಳಗುವಂತೆ ಮಾಡಿದ್ದರು.

ಭಾರತದ ಸ್ವಾತಂತ್ರ್ಯದ ಹೋರಾಟಕ್ಕಾಗಿ ಒಂದು (Occult atmosphere) ವಾತಾವರಣದ ಅವಶ್ಯಕತೆ ಇದೆ ಎಂದು ಅದನ್ನೂ ಸೃಷ್ಟಿಸಿದ್ದರು. ಜೊತೆಗೆ ಈ ಕ್ರಾಂತಿಮಯ ಪರಿವರ್ತನೆಯ ಚರಮಾತಿ ಚರಮದ ಹಂತದಲ್ಲಿ ಹಾಗೂ ಅಲ್ಲಿಂದ ಮುಂದೆ ಮತ್ತೂ ಮತ್ತೂ ಮಹತ್ತರವಾದ ವಲಯಕ್ಕೆ ಸಾಗಲು, ಜನತೆಯನ್ನು ಆ ಗಮ್ಯತೆಯತ್ತ ಒಯ್ಯಲು ಕಾಲವೂ ಕಾಯುತ್ತಿತ್ತು. ಸ್ವಾತಂತ್ರ್ಯ ಹೋರಾಟದ ಚಳುವಳಿಗಳ ಹಂತದಲ್ಲಿ, ಇಷ್ಟೊಂದು ಅತ್ಯಲ್ಪ ಅವಧಿಯಲ್ಲಿ ಈ ರೀತಿಯ ವಿಶಿಷ್ಠ ಸಾಧನೆ ಎನ್ನುವದು ಕೆಲವೇ ಕೆಲವು ವಿಭೂತಿ ಪುರುಷರಿಗೆ ಮಾತ್ರ ಸಾರ್ಥಯವಾಗುತ್ತದೆ. ಹೀಗಾಗಿ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಸಲುವಾಗಿ ರೂಪಿಸಲ್ಪಟ್ಟಿದ್ದ "ಪಥಗಳು" ಅತ್ಯಂತ ಸುಸ್ಪಷ್ಟತೆಯಿಂದ ಕೂಡಿದ್ದವು. ಇತಿಹಾಸದ ಒಂದು ಚಿಕ್ಕ ಅಂಶದಂತೆ ಇದು ಕಂಡರೂ, ಅವರ ಆ ಯುಗ ಪರಿವರ್ತನೆಯ ಬರಹಗಳು (ಲೇಖನಗಳು) ತದನಂತರದಲ್ಲಿಯೂ ಸಹಿತ ಅನ್ವಯಗೊಳ್ಳುವಂತೆಯೇ ಸಾರ್ವಕಾಲಿಕ ಮೌಲ್ಯವನ್ನು ಹೊಂದಿದ್ದವು. ಆನತೆಯನ್ನು ಜಾಗ್ರತಿಗೊಳಿಸುವ, ತಮದಲ್ಲಿ ಸಿಲುಕಿ, ನಿದ್ರಾವಸ್ಥೆಯಲ್ಲಿ ಬದುಕುತ್ತಿದ್ದ ಹೃದಯಗಳನ್ನು ಹಾಗೂ ಮನಸ್ಸುಗಳನ್ನು ಬಡಿದೆಚ್ಚರಿಸಿ, ಪ್ರಕಾಶಮಾನವಾಗುವಂತೆ ಮಾಡಿದ್ದವು. ಮತ್ತೆ ಭಾರತದ ಭವಿಷ್ಯಕ್ಕಾಗಿ ಎಲ್ಲರ ಆತ್ಮಗಳನ್ನೂ ಜಾಗರಿಸಿ, ಕಾರ್ಯಪ್ರವೃತ್ತರಾಗುವಂತೆ ಮಾರ್ಗದರ್ಶನವನ್ನು ಮಾಡುತ್ತಿವೆ.

ಈ ಸಂಚಿಕೆಯಲ್ಲಿ ಶ್ರೀ ಅರವಿಂದರ ಜೀವನದ ಘಟನಾವಳಿಗಳನ್ನು ಅದರಲ್ಲೂ ಭಾರತೀಯ ಇತಿಹಾಸದ ತಲ್ಲಣಮಯವಾದ ಅವಧಿಯಲ್ಲಿ, ಹಾಗೂ ವಿಶ್ವದ ಭವಿಷ್ಯಕ್ಕಾಗಿ ಬಿತ್ತಲ್ಪಟ್ಟಿರುವ ಶ್ರೇಷ್ಠ ಘಟನೆಗಳ ಹಿನ್ನೆಲೆಯಲ್ಲಿ ರೂಪಿಸಲಾಗಿದೆ.

## ಸಂಪಾದಕೀಯ

**"ಕ್ರಾಂತಿ" ಎನ್ನುವ ಪದಕ್ಕೆ "ಅರ್ಥವಿಲ್ಲ"** ಎನ್ನುವ ಮಾತಿದೆ. ವಿಕಸನದ ಹಂತದಲ್ಲಿ ತೀವ್ರ ಪಲ್ಲಟಗಳನ್ನು ಸೃಷ್ಟಿಸಿ ಅಂತಹ ತುಮುಲಾತ್ಮಕ ಘಟನೆಗಳ (Regressive Reforms) ಮೂಲಕ ಆದ ಬದಲಾವಣೆಯನ್ನು "ಕ್ರಾಂತಿ" ಎಂದು ಪರಿಭಾವಿಸುವ ಯೋಚನಾ ವಿಧಾನಗಳಿವೆ. ಆದರೆ ಸಂಘಟನಾತ್ಮವಾದ ಸುಸಂಬದ್ಧವಾದ ಸುಧಾರಣೆಯ ಪ್ರಯತ್ನಗಳು "ಪ್ರಗತಿಶೀಲ ಪರಿವರ್ತನಾ" (Progressive Reforms) ಎಂದು ಕರೆಯಲಾಗುತ್ತಿದೆ. ಅದೂ ಅಲ್ಲದೆ ಆಂಗ್ಲ ಭಾಷೆಯ (Revolve) ಎನ್ನುವದು ಆವರ್ತನೆಯ ಹಂತದಲ್ಲಿಯೇ ಅರ್ಥೈಸಲ್ಪಟ್ಟಿದೆ. ಈ ರೀತಿಯ ಪರಿವರ್ತನಾಶೀಲ ವಿಕಾಸದ ಹಂತದಲ್ಲಿ ಶ್ರೀ ಅರವಿಂದರನ್ನು "ಯುಗಪರಿವರ್ತನೆಯ ಯೋಗಿ" (A Yogi-Revolutionist) ಎಂದೇ ಕರೆಯಲಾಗುತ್ತಿದೆ.

ರೂಪಾಂತರ ಎನ್ನುವದು ನಿತ್ಯ–ನಿರಂತರವಾಗಿ ನಡೆಯುತ್ತಿರುವ ನೈಸರ್ಗಿಕ ವಿದ್ಯಮಾನ.ಅದು ಎಂದಿಗೂ 'ಕ್ರಾಂತಿ' ಎನ್ನುವ ಹಂತದಲ್ಲಿ ಘಟಿಸುವದಿಲ್ಲ. ಹೀಗಾಗಿಯೇ ಎಸ್. ರಾಧಾಕೃಷ್ಣನ್ ಅವರೂ ಕಮ್ಯುನಿಷ್ಟ ಹೋರಾಟವನ್ನು "ದೇವರಿಲ್ಲದ ಧರ್ಮ"ವೆಂದು ಕರೆದಿದ್ದರು. ಇಲ್ಲಿ ಶ್ರೀ ಅರವಿಂದರನ್ನು "ಯುಗಪರಿವರ್ತಕ–ಯೋಗಿಯ" ಗೌರವದಲ್ಲಿ ರೂಪಿಸಿದ ಲೇಖನಗಳಿವೆ. ಅವರೊಬ್ಬ "ಸ್ವಯಂಪರಿಪೂರ್ಣತಾ–ಶಕ್ತಿ"(Plenipoteniary)ಯನ್ನು ಹೊಂದಿದ ಯೋಗಿಯಾಗಿದ್ದಾರೆ. ಭಾರತದ ರಾಜಕೀಯ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ವಲಯದ ಮೇಲೆ ಇಡೀ ದೇಶದಾದ್ಯಂತವೂ ಪ್ರಭಾವ ಬೀರಿ, ನವೀನವಾದ ಯುಗವೊಂದನ್ನು ರೂಪಿಸುವಲ್ಲಿ ಶ್ರೀ ಅರವಿಂದರು ಧ್ರುವತಾರೆಯಂತೆ ಮಿನುಗುತ್ತಿದ್ದಾರೆ. ಭಾರತ ದೇಶದ ಸಂಪೂರ್ಣ ಸ್ವಾತಂತ್ರ್ಯದ ಬಗೆಗೆ ಅವರ ಚಿಂತನಗಳು ಇದೀಗ ಸರ್ವಸಮ್ಮತವಾಗುತ್ತಿವೆ. ಸಾಂಸ್ಕೃತಿಕ ನೆಲೆಯ ಆಧಾರದಲ್ಲಿ ರೂಪಿತಗೊಂಡಿರುವ ಶಿಕ್ಷಣ ವ್ಯವಸ್ಥೆ ಮಾತ್ರ ಆಯಾ ದೇಶದ ಮನೋವಿಕಸನಕ್ಕೆ, ಆತ್ಮವಿಕಸನಕ್ಕೆ ಬೇಕಾದ, ಅವಶ್ಯವಿದ್ದ ವಾತಾವರಣವನ್ನು ಸಹಜವಾಗಿ ರೂಪಿಸುತ್ತದೆ. ಆದರೆ ಈ ನೈಸರ್ಗಿಕವಾದ ಪ್ರವಾಹವನ್ನು ತಡೆಹಿಡಿದು, ಬೇರೆಯದೇ ಉದ್ದೇಶಗಳಿಗಾಗಿ – ಅದೂ ಸೀಮಿತ ಉದ್ದೇಶಗಳಿಗಾಗಿ ಹೇರಲ್ಪಟ್ಟ ಪದ್ಧತಿಗಳಿಂದಾಗಿ ಉಂಟಾಗುವ 'ಆತ್ಮಗ್ಲಾನಿ'ಯ ಕುರಿತು ಶ್ರೀ ಅರವಿಂದರಿಗೆ

ತುಂಬ ಚಿಂತೆ ಇತ್ತು. ಭಾರತವನ್ನು ಈ 'ಆತ್ಮಗ್ಲಾನಿ'ಯಿಂದ ಮುಕ್ತಗೊಳಿಸಲೇಬೇಕು, ಅದಕ್ಕಾಗಿ ನವನವೀನ ಸಮಾಜವನ್ನು, ಸುದೃಢವಾದ ವ್ಯವಸ್ಥೆಯನ್ನು, ಚೈತನ್ಯಯುಕ್ತವಾದ ವಿಕಸನವನ್ನು ಹಾಗೂ ವೈಶ್ವಿಕ ಆಯಾಮವನ್ನೂ ಸಹಿತ ರೂಪಿಸುವ ಚಿಂತನಾ ವಿಧಾನವನ್ನು ರೂಪಿಸಿದರು. ಅವರ ಈ ಚಿಂತನಗಳಿಗೆ ಆ ಅವಧಿಯ ಘಟನೆಗಳು ಸೂಕ್ತವಾಗಿ ಸ್ಪಂದಿಸದಿದ್ದರೂ, ಇದೀಗ ಅವರ ಚಿಂತನಗಳಿಗೆ ಮಹತ್ವ ದೊರೆಯುತ್ತಿದೆ; ಅಳವಡಿಸಿಕೊಳ್ಳಲು ಈ ಜಗತ್ತು ಪ್ರಯತ್ನಿಸುತ್ತದೆ.

ಈ ಹಿನ್ನೆಲೆಯಲ್ಲಿ ಈ ಸಂಚಿಕೆಯಲ್ಲಿ ರಾಜಕೀಯ, ಸಾಮಾಜಿಕ, ಪತ್ರಿಕಾರಂಗದ ಹಾಗೂ ಆಧ್ಯಾತ್ಮಿಕ ವಲಯದಲ್ಲಿ ಶ್ರೀ ಅರವಿಂದರ ಜೀವನದ ನೇರಾನೇರ ಘಟನೆಗಳನ್ನು ಕಾಣಬಹುದು. ಅದೇ ರೀತಿಯಲ್ಲಿ ಆಧ್ಯಾತ್ಮ ಚಿಂತನೆಯ ವಲಯವೂ ಸಹಿತ ಅವರನ್ನು ಹೇಗೆ ಕಾಣುತ್ತಿದೆ ಎನ್ನುವ ಒಂದು ಅಪರೂಪದ ಹಿಂದಿ ಲೇಖನದ "ಶ್ರೀ ಅರವಿಂದರ ದರ್ಶನ" ಎನ್ನುವ ಅನುವಾದವನ್ನು ಇಲ್ಲಿ ನೀಡಲಾಗಿದೆ. ಇದು ಮೂಲ ಹಿಂದಿ ಭಾಷೆಯ "ಭಾರತೀಯ ತತ್ತ್ವಶಾಸ್ತ್ರ"; ವಿಮರ್ಶಾತ್ಮಕ ಅಧ್ಯಯನದಿಂದ ಆಯ್ದ ಭಾಗ [ಪುಟ 842, 43, 44]; ಹಿಂದಿ ಲೇಖಕರು; ಪ್ರೋ. ಚಂದ್ರಧರ ಶರ್ಮಾ. ಇದನ್ನು ಕನ್ನಡಕ್ಕೆ ಗದುಗಿನ ತೋಂಟದಾರ್ಯ ಮಠದ ಗುರುಗಳಾಗಿರುವ ಡಾ॥ ಸಿದ್ಧರಾಮ ಸ್ವಾಮಿಗಳು ಅನುಸ್ಪಂದನಗೊಳಿಸಿದ್ದಾರೆ. 2019 ರಲ್ಲಿ ಈ ಪುಸ್ತಕವು ಪ್ರಕಟಗೊಂಡಿದೆ.

# ಶ್ರೀ ಅರವಿಂದರ ದರ್ಶನ

ಶ್ರೀ ಅರವಿಂದರು (1872–1950) ಆಧುನಿಕ ದಿನಮಾನದ ಮಹಾನ್ ದೇಶಭಕ್ತ, ಪರಮೋಚ್ಚ ವಿದ್ವಾಂಸ, ಮೌಲಿಕ ಚಿಂತಕ, ತಪಸ್ವಿ, ದಾರ್ಶನಿಕ, ಶ್ರೇಷ್ಠಕವಿ, ಮಹಾಯೋಗಿ. ಅವರು ಪಾಂಡಿಚೇರಿಯಲ್ಲಿ ಆಶ್ರಮವನ್ನು ಸ್ಥಾಪಿಸಿ ಅನೇಕ ವರ್ಷಗಳವರೆಗೆ ಅಲ್ಲಿಯೇ ಸಾಧನಾ ನಿರತರಾಗಿದ್ದರು. ಅವರ ಎಲ್ಲ ಕೃತಿಗಳು ಇಂಗ್ಲೀಷಿನಲ್ಲಿವೆ[1]. ಅವೆಲ್ಲ ಭಾರತದ ಬಹುತೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ. ಅವರ ಕೃತಿಗಳಲ್ಲಿ ಮಹತ್ವಪೂರ್ಣವಾದ ಮತ್ತು ಶ್ರೇಷ್ಠವಾದ ಕೃತಿ 'ದಿವ್ಯ ಜೀವನ'ವಾಗಿದೆ. ಶ್ರೀ ಅರವಿಂದರು (The Life Divine) ಔಪಷದನಿಕ (ಉಪನಿಷತ್) ಋಷಿಗಳಿಂದ ಪ್ರೇರಣೆ ಪಡೆದಿದ್ದಾರೆ ಮತ್ತು ವೇದಾಂತ ಪರಂಪರೆಯನ್ನು ವಿಕಸಿತಗೊಳಿಸಿದ್ದಾರೆ. ಅವರ ದರ್ಶನವನ್ನು ಪೂರ್ಣಾದ್ವೈತ (Integral Advaitism) ಎಂದು ಕರೆಯಲಾಗಿದೆ.

ಶ್ರೀ ಅರವಿಂದರ ಪ್ರಕಾರ ಪರಮತತ್ತ್ವವು ಬ್ರಹ್ಮವಾಗಿದ್ದು, ಅದು ನಿತ್ಯ, ನಿರಪೇಕ್ಷ ಮತ್ತು ಅನಂತವಾಗಿದೆ. ಇದು ನಿರ್ವಿಕಲ್ಪ, ಅಲಕ್ಷಣೀಯ ಮತ್ತು ಸ್ವತಂತ್ರವಾಗಿದೆ. ಇದು ವಿಧ್ಯಾತ್ಮಕ ಮತ್ತು ನೇತ್ಯಾತ್ಮಕ ಹೀಗೆ ಎರಡೂ ದೃಷ್ಟಿಯಿಂದ ಅನಿರ್ವಚನೀಯವಾಗಿದೆ. ಆದರೆ ಇದು ಅಜ್ಞೇಯವಲ್ಲ. ಏಕೆಂದರೆ ನಮ್ಮ ಆತ್ಮತತ್ವವು ದಿವ್ಯಬ್ರಹ್ಮನಿಂದ ಅಭಿನ್ನವಾಗಿದೆ. 'ಸಚ್ಚಿದಾನಂದ' ಎನ್ನುವದು ಬ್ರಹ್ಮನ ಸರ್ವಶ್ರೇಷ್ಠ ಮತ್ತು ವಿಧಿರೂಪದ (ವಿಧ್ಯಾತ್ಮಕ) ವರ್ಣನೆಯಾಗಿದೆ. ಇದು ನಿರ್ವಿಕಲ್ಪ ಮತ್ತು ಸವಿಕಲ್ಪ, ನಿರ್ವಿಶೇಷ ಮತ್ತು ಅವಿಶೇಷ, ನಿರ್ಗುಣ ಮತ್ತು ಸಗುಣ, ಏಕ ಮತ್ತು ಅನೇಕ ರೂಪಗಳಲ್ಲಿ ಅಭಿವ್ಯಕ್ತವಾಗುತ್ತದೆ ಮತ್ತು ಅವುಗಳಿಗೆ ಅತೀತವೂ ಆಗಿದೆ. ಸಚ್ಚಿದಾನಂದ ಬ್ರಹ್ಮನು ತನ್ನ ಚಿತ್‌ಶಕ್ತಿಯ ಮೂಲಕ ಆನಂದಾತಿರೇಕದಿಂದ ಈ ಜಗತ್ತಿನ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತಾನೆ. ಬ್ರಹ್ಮನ ಸ್ವಾನಂದದ ಹೊರತಾಗಿ ಈ ಅಭಿವ್ಯಕ್ತಿಗೆ ಬೇರೆ ಯಾವುದೇ ಕಾರಣವಿಲ್ಲ. ತೈತ್ತಿರೀಯ ಉಪನಿಷತ್ತಿನಲ್ಲಿ – ಆನಂದದಿಂದಲೇ ಈ ಎಲ್ಲ ವಸ್ತುಗಳು ಉತ್ಪತ್ತಿಯಾಗುತ್ತಿವೆ ಎಂದು ಹೇಳಲಾಗಿದೆ. ಶ್ರೀ ಅರವಿಂದರ ಪ್ರಕಾರ ಈ ಜಗತ್ತಿನ ಅಸ್ತಿತ್ವವು (ಸತ್ತಾ) ಶಿವನ ಆನಂದಾತಿರೇಕದಿಂದ ಉಂಟಾದ ನೃತ್ಯವಾಗಿದೆ. ಇದು ಅನಂತವಾಗುವ ಕ್ರಿಯೆಯಿಂದ ಈಶ್ವರನ ಶರೀರವನ್ನು ಅಸಂಖ್ಯ ರೂಪಗಳಲ್ಲಿ ಅಭಿವ್ಯಕ್ತಗೊಳಿಸುತ್ತಿರುತ್ತದೆ, ಆದರೆ ಇದರಿಂದಾಗಿ ಆ ದಿವ್ಯ ಸತ್ತೆಯಲ್ಲಿ ತ್ರಿಕಾಲದಲ್ಲಿಯೂ ಯಾವುದೇ ವಿಕಾರವುಂಟಾಗುವದಿಲ್ಲ.[2]

ಶ್ರೀ ಅರವಿಂದರು ಬ್ರಹ್ಮನ ಸ್ವಚೈತನ್ಯವನ್ನು (ಇದು ಏಕಕಾಲಕ್ಕೆ ಅವನ ಸ್ವಾಭಿವ್ಯಕ್ತಿಯ ಶಕ್ತಿಯೂ ಆಗಿದೆ) 'ಅತಿಮಾನಸ'ವೆಂದು ಕರೆದಿದ್ದಾರೆ. ಇದು ತನ್ನ ಅವಿಕೃತ ಮತ್ತು ಅವಿನಶ್ವರ ತತ್ತ್ವವನ್ನು ವಿನಶ್ವರ ರೂಪಗಳಲ್ಲಿ ಪ್ರಕ್ಷಿಪ್ತಗೊಳಿಸುವ ಸ್ವಚೇತನ ಸತ್ ಆಗಿರುತ್ತದೆ. ಅತಿಮಾನಸವು ಶುದ್ಧಜ್ಞಾನ ಮತ್ತು ಶುದ್ಧಶಕ್ತಿಯ ಅದ್ಭುತವಾದ ಸಮನ್ವಯವಾಗಿದೆ. ಅತಿಮಾನಸವು ದಿವ್ಯ ಸಚ್ಚಿದಾನಂದನ ಸ್ವಂತದ ಜ್ಞಾನವಾಗಿದೆ ಮತ್ತು ಏಕಕಾಲಕ್ಕೆ ಅವನ ಸ್ವಾಭಿವ್ಯಕ್ತಿಯ ಶಕ್ತಿಯೂ ಆಗಿದೆ. ಅತಿಮಾನಸದಿಂದಾಗಿ ಬ್ರಹ್ಮನಲ್ಲಿ ಆತ್ಮಪರಿಸೀಮನ (Self-limitation) ಮತ್ತು ಆತ್ಮವ್ಯಕ್ತಿಭಾವಕರಣ(Self-individualization)ದ ಪ್ರಕ್ರಿಯೆ ಪ್ರಾರಂಭವಾಗುತ್ತದೆ.[3]

ಸಚ್ಚಿದಾನಂದ ಬ್ರಹ್ಮನು ಒಂದೇ ಆಗಿದ್ದರೂ ಆನಂದೋಲ್ಲಾಸದ ಕಾರಣಗಳಿಂದಾಗಿ ಆತ್ಮಪರಿಸೀಮನ ಮತ್ತು ಆತ್ಮವ್ಯಕ್ತಿಭಾವಕರಣದ ಪ್ರಕ್ರಿಯೆಯನ್ನು ತನ್ನ ಮೇಲೆ ಆರೋಪಿಸಿಕೊಂಡು ತನ್ನನ್ನು ಅಸಂಖ್ಯ ಆನಂದಸ್ವರೂಪ ನಿತ್ಯಜೀವಗಳ ರೂಪದಲ್ಲಿ ಅಭಿವ್ಯಕ್ತಗೊಳಿಸುತ್ತಾನೆ. ಈ ಆನಂದ ಸ್ವರೂಪ ಜೀವಗಳಿಗೆ ಸಚ್ಚಿದಾನಂದನೊಂದಿಗೆ ತಮ್ಮ ಸ್ವಾಭಾವಿಕ ಅದ್ವೈತದ ಜ್ಞಾನವು ಸದಾ ಇರುತ್ತದೆ. ಇವು ನಿತ್ಯ, ದಿಕ್ಕಾಲಾತೀತ, ಮತ್ತು ಸೃಷ್ಟಿಯ ಪ್ರಕ್ರಿಯೆಯಿಂದ ಅಸ್ಪಷ್ಟ(ಸ್ಪರ್ಶರಹಿತ)ವಾಗಿರುತ್ತವೆ. ಇವುಗಳೇ ನಮ್ಮ ಮಾನವರ ವಾಸ್ತವಿಕ ಜೀವಾತ್ಮಗಳಾಗಿವೆ. ಆದರೆ ಇವು ದಿವ್ಯಲೋಕದಲ್ಲಿಯೇ ಇರುತ್ತವೆ ಮತ್ತು ಮರ್ತ್ಯಲೋಕಕ್ಕೆ ಇಳಿಯುವದಿಲ್ಲ. ಹಾಗಿದ್ದರೂ ಪ್ರತಿಯೊಬ್ಬ ದಿವ್ಯಜೀವಾತ್ಮನು ಮರ್ತ್ಯಲೋಕದಲ್ಲಿ ತನ್ನ ಒಂದು ದಿವ್ಯ ಕಿರಣ ಅಥವಾ ಕಿಡಿ(ಸ್ಫುಲಿಂಗ)ಯನ್ನು ಕಳಿಸುತ್ತಾನೆ. ಈ ಕಿರಣಕ್ಕೆ ಶ್ರೀ ಅರವಿಂದರ "ಚೈತ್ಯಸತ್ತಾ" ಎಂದು ಹೆಸರು ಕೊಟ್ಟಿದ್ದಾರೆ. ಈ ಚೈತ್ಯಪುರುಷ ಮಾನವನ ಅಂತರಾತ್ಮವಾಗಿದೆ. ಇದು ತನ್ನ ದಿವ್ಯ ಜೀವಾತ್ಮನ ಪ್ರತಿನಿಧಿಯಾಗಿದ್ದು, ಮನುಷ್ಯನಿಗೆ ಇದರ ಅರಿವಿರದಿದ್ದರೂ ಇದು ದಿವ್ಯ ಜೀವಾತ್ಮನೊಂದಿಗೆ ಸದಾ ಸಂಪರ್ಕ ಹೊಂದಿರುತ್ತದೆ. ಜಡ(ಅನ್ನಮಯ), ಪ್ರಾಣ(ಮನೋಮಯ) ಮತ್ತು ಮನಸ್ಸು(ಮನೋಮಯ) ಈ ಮೂರೂ ಸಾಧನಗಳೇ ನಮಗೆ ಲಭ್ಯವಾಗಿರುತ್ತವೆ, ಮತ್ತು ನಮ್ಮ ಅಂತರಾತ್ಮವು ಈ ಸಾಧನಗಳನ್ನು ಪರಿಷ್ಕೃತಗೊಳಿಸಿ ಸಾಧ್ಯವಿದ್ದಷ್ಟೂ ದಿವ್ಯ ಜೀವಾತ್ಮನ ಜ್ಞಾನ ಮತ್ತು ಆನಂದವನ್ನು ಪ್ರಾಪ್ತಮಾಡಿಕೊಳ್ಳಬಯಸುತ್ತದೆ. ಆದರೆ ಅತಿಮಾನಸದ ಪ್ರಾಪ್ತಿಯಿಂದಲೇ ದಿವ್ಯ ಜೀವಾತ್ಮನ ಜ್ಞಾನ ಮತ್ತು ಆನಂದದ ಅನುಭವವು ಸಾಧ್ಯವಾಗುತ್ತದೆ.

ದಿವ್ಯ ವಿಕಾಸವಾದದ ಸಿದ್ಧಾಂತವು ಶ್ರೀ ಅರವಿಂದರ ದರ್ಶನದ ಕೇಂದ್ರ ಬಿಂದುವಾಗಿದೆ. ವಿಕಾಸದ ಅರ್ಥವು ಕೆಳಗಿನಿಂದ ಮೇಲಕ್ಕೆ ಏರುವ ಅಥವಾ ಆರೋಹಣವಾಗಿರುತ್ತದೆ. ಜಡತತ್ವದಿಂದ ಪ್ರಾಣದ ವಿಕಾಸವಾಯಿತು; ಪ್ರಾಣದಿಂದ ಮನಸ್ಸಿನ ವಿಕಾಸವಾಯಿತು. ಮನಸ್ಸಿನಲ್ಲಿ ಮನಸ್ಸು, ಅಹಂಕಾರ ಮತ್ತು ಬುದ್ಧಿ ಈ ಮೂರರ ಸಮಾವೇಶವಾಗುತ್ತದೆ. ಈವರೆಗಿನ ವಿಕಾಸವು ಬೌದ್ಧಿಕ ಮಟ್ಟದವರೆಗೆ ಮಾತ್ರ ಆಗಿದೆ. ಆದರೆ ವಿಕಾಸ ಅಥವಾ ಆರೋಹಣಕ್ಕೆ ಮೊದಲು ಅವರೋಹಣ ಕ್ರಿಯೆಯು ಭಾವರೂಪದಿಂದ ಪೂರ್ಣಗೊಳ್ಳ–ಬೇಕಾಗುವದು ಅವಶ್ಯಕವಾಗಿದೆ. ಪರಮತತ್ತ್ವವು ಸಚ್ಚಿದಾನಂದವಾಗಿದ್ದು ಸತ್, ಚಿತ್–ಶಕ್ತಿ ಮತ್ತು ಆನಂದ ಈ ಮೂರು ಪ್ರರೂಪಗಳ ಸಮನ್ವಯವಾಗಿದೆ. ಅತಿಮಾನಸದ ಮೂಲಕ ಕ್ರಮವಾಗಿ ಮನಸ್ಸು, ಪ್ರಾಣ ಮತ್ತು ಜಡದಲ್ಲಿ ಸಚ್ಚಿದಾನಂದದ ಭಾವನಾತ್ಮಕ ಅವರೋಹಣವು ಪೂರ್ಣಗೊಂಡಿದೆ. ಜಡತತ್ತ್ವವು ಅವರೋಹಣದ ಕೊನೆಯ ಬಿಂದುವಾಗಿದೆ. ಆದ್ದರಿಂದ ಇದು ಆರೋಹಣದ ಮೊದಲ ಬಿಂದುವಾಗುತ್ತದೆ. ಜಡದಿಂದ ಪ್ರಾಣದ, ಪ್ರಾಣದಿಂದ ಮನಸ್ಸಿನ ದ್ರವ್ಯಾತ್ಮಕ ವಿಕಾಸವು ಆಗಿದೆ. ಆದರೆ ವಿಕಾಸದ ಪ್ರಕ್ರಿಯೆಯು ಬೌದ್ಧಿಕ ಮಟ್ಟದಲ್ಲಿ ನಿಲ್ಲುವಂತಹುದಲ್ಲ. ಈಗ ವಿಕಾಸವು ಅತಿಮಾನಸದೆಡೆಗೆ ಮುಂದುವರೆಯುತ್ತಿರುತ್ತದೆ. ಅತಿಮಾನಸದಲ್ಲಿ ಮನಸ್ಸಿನ ಆರೋಹಣ ಮತ್ತು ಮನಸ್ಸಿನಲ್ಲಿ ದ್ರವ್ಯಾತ್ಮಕ ರೂಪದಿಂದ ಅತಿಮಾನಸದ ಅವರೋಹಣವು ಒಂದು ತಾರ್ಕಿಕ ಅವಶ್ಯಕತೆಯಾಗಿದೆ. ಅವಿದ್ಯೆ, ವಿಖಂಡನ(ನಾಶ), ಪೃಥಃಕರಣ (ಬೇರ್ಪಡುವಿಕೆ), ವಿಶ್ಲೇಷಣೆ ಇವು ಮನಸ್ಸಿನ ಧರ್ಮವಾಗಿದೆ. ಅತಿಮಾನಸವು ಶುದ್ಧವಿದ್ಯೆ ಮತ್ತು ಪೂರ್ಣ ಸಮನ್ವಯಾತ್ಮಕ ಜ್ಞಾನ ಹಾಗೂ ಶುದ್ಧ ಆನಂದವಾಗಿದೆ. ಅತಿಮಾನಸದ ಈ ಭೂಮಿಕೆಯಲ್ಲಿ ಇಳಿದು ಬಂದ ಮೇಲೆ ಈ ಭೂಮಿಯ ಮೇಲೆ ಅಜ್ಞಾನ, ದುಃಖ, ರೋಗ, ಶೋಕ, ಮರತ್ಯುಗಳ ಬದಲಾಗಿ ಜ್ಞಾನ, ಆನಂದ ಮತ್ತು ಅಮರತ್ವದ ಸಾಮ್ರಾಜ್ಯವು ನಿರ್ಮಾಣಗೊಳ್ಳುತ್ತದೆ. ಆಗ ಭೂಲೋಕವು "ಸ್ವರ್ಗ ಮತ್ತು ಜೀವನ ಆನಂದದ ಚುಂಬನ"ವಾಗುವದು.

ಶ್ರೀ ಅರವಿಂದರ ಪ್ರಕಾರ ವಿಕಾಸದ ಪ್ರಕ್ರಿಯೆಯು ಏಕಕಾಲಕ್ಕೆ ಉನ್ನಯನ, ಪ್ರಸಾರಣ ಮತ್ತು ಸಮನ್ವಯ ಪ್ರಕ್ರಿಯೆಯಾಗಿರುವದರಿಂದ ಇದು ಸಾಧ್ಯವಾಗುತ್ತದೆ. ಜಡವು ಪ್ರಾಣದಲ್ಲಿ ಮತ್ತು ಪ್ರಾಣವು ಮನಸ್ಸಿನಲ್ಲಿ ಉನ್ನತಿ ಹೊಂದುತ್ತದೆ. ಜೊತೆಗೆ ಪ್ರಾಣವನ್ನು ಧರಿಸುವದಕ್ಕಾಗಿ ಜಡದಲ್ಲಿ ಮತ್ತು ಮನಸ್ಸನ್ನು ಧರಿಸುವದಕ್ಕಾಗಿ ಪ್ರಾಣದಲ್ಲಿ ಪ್ರಸಾರಣ(ವಿಕಸನ) ಉಂಟಾಗುತ್ತದೆ; ಹಾಗೆಯೇ ಸಮನ್ವಯದ ಪ್ರಕ್ರಿಯೆಯು ಕೂಡ ಇನ್ನೂ ಮಹತ್ವಪೂರ್ಣವೆನಿಸುತ್ತದೆ.

ಇದರ ಕಾರಣದಿಂದಲೇ ಪ್ರಾಣದ ಉನ್ಮೇಷದಿಂದ ಜಡವು ಮತ್ತು ಮನಸ್ಸಿನ ಉನ್ಮೇಷದಿಂದ ಪ್ರಾಣವು ನಾಶ ಅಥವಾ ದುರ್ಬಲಗೊಳ್ಳುವದಿಲ್ಲ. ಬದಲಾಗಿ ಉನ್ನತ ಸ್ಥಾನದೊಂದಿಗೆ ಸಮನ್ವಿತವಾಗಿ ಸಮೃದ್ಧವೂ, ಅಧಿಕ ಶಕ್ತಿಶಾಲಿಯೂ ಆಗುತ್ತದೆ. ಜೈವಿಕ ವಿಕಾಸದಿಂದ ಭೌತಿಕ ಮಟ್ಟ ಮತ್ತು ಮಾನಸಿಕ ವಿಕಾಸದಿಂದ ಜೈವಿಕ ಮತ್ತು ಭೌತಿಕ ಮಟ್ಟಗಳು ಹೆಚ್ಚು ಸಮೃದ್ಧಗೊಳ್ಳುತ್ತವೆ. ಹೀಗಾಗಿ ಅತಿಮಾನಸದ ಅವತರಣದಿಂದ ಬೌದ್ಧಿಕ, ಜೈವಿಕ ಮತ್ತ ಭೌತಿಕ ಮಟ್ಟಗಳಲ್ಲಿ ಆಮೂಲಾಗ್ರ ಪರಿವರ್ತನೆಯುಂಟಾಗುವದು. ಹಾಗೆಯೇ ಅತಿಮಾನಸದಿಂದ ಸಮನ್ವಿತಗೊಂಡು ಇವು ದಿವ್ಯಜ್ಞಾನ ಮತ್ತು ಆನಂದಯುಕ್ತವಾಗಿ ಪ್ರಕಟಗೊಳ್ಳುವವು.

ಶ್ರೀ ಅರವಿಂದರ ಪ್ರಕಾರ ಜಗತ್ತು ಬ್ರಹ್ಮನ ಅಭಿವ್ಯಕ್ತಿಯಾಗಿರುವದರಿಂದ ಸತ್ಯವಾಗಿದೆ. ಮಾಯೆಯು ಬ್ರಹ್ಮನ ಸತ್ಯ ಶಕ್ತಿಯಾಗಿದ್ದು, ಇದು ಏಕವನ್ನು ಅನೇಕ, ಅಸೀಮವನ್ನು ಸಸೀಮ ಮತ್ತು ಅಕ್ಷರವನ್ನು ಕ್ಷರ ರೂಪದಲ್ಲಿ ಅಭಿವ್ಯಕ್ತಗೊಳಿಸುತ್ತದೆ. ಇದು ಸಚ್ಚಿದಾನಂದ ಲೀಲೆ ಅಥವಾ ಕ್ರೀಡೆಯಾಗಿದೆ. ಲೀಲಾಮಯನು ತನ್ನನ್ನು ಸೀಮಿತ, ಭೇದ ಮತ್ತು ವಿಭಾಗಗಳಲ್ಲಿ ಪ್ರಕಟಗೊಳಿಸಿಕೊಂಡರೂ ಈ ಎಲ್ಲವುಗಳಲ್ಲಿ ಅದೇ ಅಸೀಮ, ಅಭಿನ್ನ, ಅವಿಭಾಗ ಸಚ್ಚಿದಾನಂದನೇ ಪ್ರಕಟಗೊಳ್ಳುತ್ತಿರುತ್ತಾನೆ. ಅವನು ನಮ್ಮ ಸೀಮಿತ ಬುದ್ಧಿ, ಸವಿಕಲ್ಪ ತರ್ಕಗಳಿಗೆ ಅತ್ಯಂತ ಅಗೋಚರ ಮತ್ತು ಅಚಿಂತ್ಯನಾಗಿರುತ್ತಾನೆ. ಶ್ರೀ ಅರವಿಂದರ ಪ್ರಕಾರ ಈ ರಹಸ್ಯವನ್ನು 'ಅನಂತದ ತರ್ಕ'ದಿಂದ ಹೃದಯಂಗವಾಗಿಸಬಹುದಾಗಿದೆ. ಸಾಂತ ಬೌದ್ಧಿಕ ತರ್ಕದಿಂದ ಇದು ಸಾಧ್ಯವಾಗುವದಿಲ್ಲ. ಅವರ ಪ್ರಕಾರ 'ಅನಂತದ ತರ್ಕ'ವು ಸಾಂತಬುದ್ಧಿಗೆ ಜಾದೂ ಸ್ವರೂಪದ್ದಾಗಿದೆ.

**ಕೃಪೆ:** ಇದು ಮೂಲ ಹಿಂದಿ ಭಾಷೆಯ "ಭಾರತೀಯ ತತ್ತ್ವಶಾಸ್ತ್ರ"; ವಿಮರ್ಶಾತ್ಮಕ ಅಧ್ಯಯನದಿಂದ ಆಯ್ದ ಭಾಗ [ಪುಟ 842,43,44]; ಹಿಂದಿ ಲೇಖಕರು; ಪ್ರೋ. ಚಂದ್ರಧರ ಶರ್ಮಾ.

**ಕನ್ನಡಕ್ಕೆ:** ಗದುಗಿನ ತೋಂಟದಾರ್ಯ ಮಠದ ಗುರುಗಳಾಗಿರುವ ಡಾ.ಸಿದ್ಧರಾಮ ಸ್ವಾಮಿಗಳು. ಪ್ರಕಟಣೆ 2019

---

1 (ಒಂದು ಕೃತಿ ಸಂಸ್ಕೃತದಲ್ಲಿದೆ "ಭವಾನೀ ಭಾರತೀ") 2 (ದಿವ್ಯ ಜೀವನ 1; ಪುಟ 119) 3 ದಿವ್ಯಜೀವನ ಪುಟ 177



ಶ್ರೀ ಅರವಿಂದರು ಇಂಗ್ಲೆಂಡಿನಲ್ಲಿ ಇದ್ದಾಗಲೇ, ತಮ್ಮ ಜೀವನವನ್ನು ತಮ್ಮ ರಾಷ್ಟ್ರಕ್ಕಾಗಿ ಸಮರ್ಪಣೆ ಮಾಡಲು ಹಾಗೂ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಮೀಸಲಿಡಲು ನಿರ್ಧರಿಸದ್ದರು. ಭಾರತಕ್ಕೆ ಬಂದ ತಕ್ಷಣದಲ್ಲಿಯೇ ರಾಜಕಾರಣದ ವಿಷಯದ ಬಗೆಗೆ (ತಮ್ಮ ಮೂಲ ಹೆಸರನ್ನು ಕಾಣಿಸದೆ) ಲೇಖನಗಳನ್ನು ಬರೆಯಲು ಪ್ರಾರಂಭಿಸಿದ್ದರು. ಈ ಮೂಲಕ ಬರಲಿರುವ ಭವಿಷ್ಯದ ಕುರಿತು ಹಾಗೂ ಚಿಂತನೆಗಳ ಕುರಿತು, ರಾಷ್ಟ್ರವನ್ನು ಜಾಗ್ರತಗೊಳಿಸಲು ಯತ್ನಿಸಿದ್ದರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/67 – ಶ್ರೀ ಅರವಿಂದರು**

# ಯುಗಪರಿವರ್ತನಾಶೀಲ ರಾಷ್ಟ್ರೀಯವಾದಿ

– ಅನುವಾದ: ಪುಟ್ಟು ಕುಲಕರ್ಣಿ

## ರಾಷ್ಟ್ರೀಯವಾದದ ನೇತಾರ

ಬಡೋದಾ ಸಂಸ್ಥಾನದಲ್ಲಿ ಇದ್ದಾಗಲೇ, ಬಹುತೇಕವಾಗಿ ಆ ಅವಧಿಯಲ್ಲಿ ರಾಜಕೀಯ ಚಟುವಟಿಕೆಗಳಿಂದ ದೂರವೇ–ಮೌನವಾಗಿಯೇ ಇದ್ದರು. ಏಕೆಂದರೆ ಬಡೋದಾ ಸಂಸ್ಥಾನದಲ್ಲಿ ಅವರು ಇದ್ದ ಸ್ಥಾನಮಾನವೂ ಸಹಿತ ಈ ರೀತಿಯ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಇತ್ತು. ಆದರೆ 1905 ಜರುಗಿದ 'ಬಂಗಾಲ ವಿಭಜನೆ(ವಂಗ–ಭಂಗ)' ಘಟನೆ ಹಾಗೂ ಅದನ್ನು ವಿರೋಧಿಸಿ ಮೂಡಿದ ಜನಹೋರಾಟದ ವಾತಾವರಣದಿಂದಾಗಿ, ಶ್ರೀ ಅರವಿಂದರು ಬಡೋದಾ ಸಂಸ್ಥಾನದಲ್ಲಿ ನಿರ್ವಹಿಸುತ್ತಿದ್ದ ಸ್ಥಾನವನ್ನು ತ್ಯಜಿಸುವಂತೆಯೂ ಹಾಗೂ ನೇರವಾಗಿ ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸುವಂತೆ – ಧುಮುಕುವಂತೆ ಮಾಡಿತು. ಅವರು 1906 ರಲ್ಲಿ ಬಡೋದೆಯಿಂದ ನಿರ್ಗಮಿಸಿ, ಆ ಅವಧಿಗೆ ಹೊಸದಾಗಿ ಪ್ರಾರಂಭಗೊಂಡ ಬೆಂಗಾಲ ನ್ಯಾಶನಲ್ ಕಾಲೇಜಿನ ಪ್ರಾಚಾರ್ಯರೆಂದು ಕಲಕತ್ತಾಕ್ಕೆ ತೆರಳಿದ್ದರು.

ಶ್ರೀ ಅರವಿಂದರ ಜೀವನದ ಈ ವರ್ಷಗಳು – ಅಂದರೆ 1902 ರಿಂದ 1910 ರವರೆಗೆ ಪೂರ್ಣವಾಗಿ ರಾಜಕೀಯಕ್ಕೇ ಮೀಸಲಾಗಿವೆ. ಈ ಅವಧಿಯ ಮೊದಲರ್ಧ ಭಾಗದಲ್ಲಿ ಅವರು ನೇಪಥ್ಯದಲ್ಲಿಯೇ ಇದ್ದು ಕಾರ್ಯ ನಿರ್ವಹಿಸುತ್ತಿದ್ದರು. ಇನ್ನುಳಿದ ಸಹವರ್ತಿಗಳನ್ನು ಸ್ವದೇಶೀ ಚಳುವಳಿಯ (Indian Sinn-Fein) ಹಿನ್ನೆಲೆಯಲ್ಲಿ ತರಬೇತುಗೊಳಿಸುತ್ತಿದ್ದರು. ಬಂಗಾಲ ಭಾಗದಲ್ಲಿ ಈ ವಂಗ–ಭಂಗದ ಹಿನ್ನೆಲೆಯಲ್ಲಿ "ವಿರೋಧಿ" ಅಲೆಯೂ ಪ್ರಾರಂಭಗೊಂಡಿತ್ತು. ಸಾರ್ವಜನಿಕರು ನೇರಾನೇರವಾಗಿ ಹೋರಾಟದಲ್ಲಿ ಪಾಲ್ಗೊಂಡು ಅದರಲ್ಲೂ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಹ ವಾತಾವರಣ ನಿರ್ಮಾಣವಾಗಿತ್ತು. ಅಲ್ಲಿಯವರೆಗೂ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಅನುಸರಿಸಿಕೊಂಡು ಬಂದಿದ್ದ ಹಾಗೂ ಅದೇ ಕಾಂಗ್ರೆಸ್ಸಿನ ಮೂಲಕವೂ ರೂಪುಗೊಂಡಿದ್ದ "ಮಂದಗಾಮೀ ಧೋರಣೆಯ ಪರಿವರ್ತನೆಯ" (Moderate Reformism) ಪಥದಿಂದ ಹೊಸ ದಿಕ್ಕಿನೆಡೆಗೆ ಸಾಗಿತ್ತು. 1906ರಲ್ಲಿ ಶ್ರೀ ಅರವಿಂದರು ಈ ನವೀನ ಮಾರ್ಗದ ಉದ್ದೇಶಕ್ಕಾಗಿಯೇ

ಬಂಗಾಲಕ್ಕೆ ಆಗಮಿಸಿ, ಆ ಹೊಸ ಪಕ್ಷಕ್ಕೆ ಸೇರಿದ್ದರು. ಆ ಪಂಗಡವು ಸಂಖ್ಯಾ ಬಲದಲ್ಲಿ ಕ್ಷೀಣವಾಗಿದ್ದಲ್ಲದೇ, ತನ್ನ ಪ್ರಭಾವವನ್ನು ಬೀರುವದರಲ್ಲಿಯೂ ಸಹಿತ ಸಾಮರ್ಥ್ಯ ಹೊಂದಿರಲಿಲ್ಲ. ಇಂತಹ ಒಂದು "ಗುಂಪು" ಕಾಂಗ್ರೆಸ್ಸಿನಲ್ಲಿ ಹೊಸದಾಗಿ ರಚಿತಗೊಂಡಿತ್ತು. ಅಲ್ಲದೇ ಇಲ್ಲಿಯವರೆಗೂ ಕಾಂಗ್ರಸ್ ಪಕ್ಷ ಅನುಸರಿಸಿಕೊಂಡು ಬರುತ್ತಿದ್ದ ಮಂದಗಾಮೀ ಧೋರಣೆಯ ನೀತಿಗೆ ಭಿನ್ನವಾದ ಹೊಸ ದೃಷ್ಟಿಕೋನವನ್ನು ಹೊಂದಿತ್ತು.

ಈ ಉದ್ದೇಶದಿಂದಲೇ, ಶ್ರೀ ಅರವಿಂದರು 1906ರಲ್ಲಿ ಬಂಗಾಲಕ್ಕೆ ಆಗಮಿಸಿದ್ದು. ಈ "ನೂತನ ಪಕ್ಷ"ವನ್ನು ಸೇರಿದ್ದು. ಈ ಪಕ್ಷದ ಪ್ರಮುಖ ಉದ್ದೇಶವೆಂದರೆ "ಆಂದೋಲನ" "ವಿರೋಧ"ವಾಗಿತ್ತು. ಮೇಲ್ನೋಟಕ್ಕೆ ಸಂದಿಗ್ಧದಂತೆ ಕಾಣುವ ಅಸಹಕಾರದ ಆಂದೋಲನವೇ ಈ ಪಕ್ಷದ ರಾಜಕೀಯ ಸಿದ್ಧಾಂತವೂ ಆಗಿತ್ತು; ಕಾಂಗ್ರೆಸ್ಸಿನ ವಾರ್ಷಿಕ ಸಮ್ಮೇಳನದ ಅವಧಿಯಲ್ಲಿ, ಮಂದಗಾಮೀ ಧೋರಣೆಯನ್ನು ಅನುಸರಿಸುತಿದ್ದ ಮೂಲ ಕಾಂಗ್ರೆಸ್ಸಿನ ನಾಯಕರ ಸಂಗಡ ಅದರಲ್ಲೂ ವಿಷಯ ಸಮಿತಿಯ ರಹಸ್ಯ ಪರದೆಯಲ್ಲಿಯೇ ರಹಸ್ಯವಾಗಿಯೇ ಕಾರ್ಯ ನಿರ್ವಹಿಸುತ್ತಿದ್ದ ಮುಖಂಡರ ಸಂಗಡ ಆಗಾಗ ಮನಸ್ತಾಪ ನಡೆಸಿಕೊಂಡು ಹೋಗುವದಕ್ಕಿಂತ ಹೆಚ್ಚಿನದೇನನ್ನೂ ಈ ಪಕ್ಷವು ಮಾಡುವ ಕ್ರಿಯೆಯನ್ನು ತೆಗೆದುಕೊಂಡಿರಲಿಲ್ಲ.

ಶ್ರೀ ಅರವಿಂದರು ಪಕ್ಷದ ಬಂಗಾಲ ಭಾಗದ ಪ್ರಮುಖರನ್ನು ಒಳಗೊಂಡಂತೆ, ಒಂದು ರಾಷ್ಟ್ರೀಯ ಪಕ್ಷವನ್ನಾಗಿ ರೂಪಿಸಲು, ಸಾರ್ವಜನಿಕವಾಗಿಯೇ ಕಾಣಿಸಿಕೊಂಡು, ಒಂದು ನಿದಿಷ್ಟಪಡಿಸಿದ ಸವಾಲನ್ನು ಎದುರಿಸುವ ಕಾರ್ಯಕ್ರಮವನ್ನು ರೂಪಿಸಕೊಂಡೇ ಗುರುತಿಸಿಕೊಳ್ಳುವದಕ್ಕೆ ಎಲ್ಲರನ್ನೂ ಮನವೊಲಿಸಿದ್ದರು. ಅದಕ್ಕೆ ಜನಪ್ರಿಯ ಮರಾಠಾ ಮುಖಂಡರಾಗಿದ್ದ ಬಾಲಗಂಗಾಧರ ತಿಲಕರನ್ನು ಮುಖಂಡರನ್ನಾಗಿಸಿ ಮತ್ತು ಈಗಾಗಲೇ ಪ್ರಾಬಲ್ಯ ಹೊಂದಿದ್ದ ಮರಾಠಾ ಮಂಡಳವು, ಕಾಂಗ್ರಸ್ ಪಕ್ಷದಲ್ಲಿ ಪ್ರಾಬಲ್ಯ ಹೊಂದಿದ್ದ "ಮಂದಗಾಮೀ ಧೋರಣೆಯ" (ಉದಾರವಾದೀ ನೀತಿಯ ಹಾಗೂ ರಾಜಶಾಸನವನ್ನು ಸುಧಾರಣಾವಾದದ ಹಿನ್ನೆಲೆಯಲ್ಲಿ ಅನುಸರಿಸುತ್ತಿದ್ದ ಪಂಗಡದವರ ಹಿಡಿತದಿಂದ ಕಾಂಗ್ರೆಸ್ಸನ್ನು ತಪ್ಪಿಸುವ ದಿಸೆಯಲ್ಲಿ ಹೋರಾಟ ಮಾಡಿ ಪ್ರಸಿದ್ಧವಾಗಿತ್ತು. ಇದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರಸ್ ಪಕ್ಷದಲ್ಲಿ ಉದ್ಭವಿಸಿದ "ಮಂದಗಾಮೀ" ಹಾಗೂ "ತೀವ್ರಗಾಮೀ" ಪಂಗಡಗಳ

ನಡುವೆ ನಡೆದ ಐತಿಹಾಸಿಕ ಹೋರಾಟವೂ ಆಗಿದೆ. ಈ ಹೊಸ "ರಾಷ್ಟ್ರೀಯವಾದಿ"ಗಳನ್ನು ಮೂಲ ಅದರ ವಿರೋಧಿಗಳು "ಉಗ್ರಗಾಮೀ" ಎಂದೂ ಕರೆಯುತ್ತಿದ್ದರು. ಆದರೆ ಕೇವಲ ಎರಡೇ ಎರಡು ವರ್ಷಗಳಲ್ಲಿ ಈ ನವರಾಷ್ಟ್ರೀಯವಾದದ ಚಿಂತನಗಳು, ಭಾರತದ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನೇ ಬದಲಿಸಿಬಿಟ್ಟವು.

*

## ಉಗಮಗೊಂಡ ನೂತನ ರಾಷ್ಟ್ರೀಯ ಪಕ್ಷ

ಈ ರೀತಿಯಾಗಿ ಉಗಮಗೊಂಡ ಈ ನೂತನ ಪಕ್ಷವು ಜನತೆಯ ಮುಂದೆ ಇಟ್ಟದ್ದು ಅತ್ಯಂತ ಆಕರ್ಷಣೀಯವಾದ "ಸ್ವರಾಜ್ಯ(ಸ್ವಾತಂತ್ರ್ಯ) ನಮ್ಮ ಜನ್ಮಸಿದ್ಧ ಹಕ್ಕು" ಎಂಬುದಾಗಿತ್ತು. ಇದು ವಸಾಹತುಶಾಹೀ ವ್ಯವಸ್ಥೆಯಲ್ಲಿ ಸ್ವಯಂ ಆಡಳಿತದ ಸೌಹಾರ್ದಯುತ ವ್ಯವಸ್ಥೆಯನ್ನು ಹೊಂದುವ ವಿಚಾರಕ್ಕಿಂತ ಸಂಪೂರ್ಣ ಬೇರೆಯದೇ ಆದ ದೃಷ್ಟಿಕೋನವನ್ನು ಹೊಂದಿತ್ತು. ಮೇಲ್ನೋಟಕ್ಕೇ ಕಾಣುವಂತೆ ಇದು ಒಂದು ಶತಮಾನ ಅಥವಾ ಎರಡು ಶತಮಾನಗಳ ಕಾಲದಷ್ಟು ಸುದೀರ್ಘವಾದ ಅವಧಿಯಲ್ಲಿ, ನಿಧಾನವಾಗಿಯೇ ಬದಲಾವಣೆಯ ಮೂಲಕ ಪ್ರಗತಿ ಕಾಣುವ ಹಾಗೂ ಅರ್ಥವಾಗುವ ತೆರದಲ್ಲಿ ಇತ್ತು. ಇದು ಸಮರ್ಪಣಾ ಮನೋಭಾವದ ಆತ್ಮಶಕ್ತಿಯಲ್ಲಿ ರೂಪಿಸಲ್ಪಟ್ಟು ಆ ಮೂಲಕವೇ ಕಾರ್ಯಕ್ರಮಗಳನ್ನೂ ಅನುಷ್ಠಾನಗೊಳಿಸುವ ಮಾರ್ಗವಾಗಿತ್ತು. ಅದು ಅಷ್ಟೊಂದು ಸವಿವರವಾಗಿ ಅಲ್ಲದಿದ್ದರೂ "ಸ್ವರಾಜ್ಯವೇ ನಮ್ಮ ಹಕ್ಕು" ಎನ್ನುವ ಸಿದ್ಧಾಂತವನ್ನು ಮತ್ತೂ ಸಮಗ್ರಗೊಳಿಸಿ, ಕೆಲವು ವರ್ಷಗಳ ನಂತರ ಅದನ್ನು ಒಂದು ಸೂಕ್ತ ನೀತಿಯನ್ನಾಗಿಸಿಕೊಳ್ಳಲಾಯಿತು. ಇದನ್ನೇ ಐರ್ಲಂಡ್ ಕೂಡಾ ಅತ್ಯಂತ ಯಶಸ್ವಿಯಾಗಿ ಅಳವಡಿಸಿಕೊಂಡಿತ್ತು.

ಈ ಸಿದ್ಧಾಂತದ ಮೂಲ ತತ್ತ್ವ ಹಾಗೂ ಧ್ಯೇಯವೆಂದರೆ "ಸ್ವ–ಸಹಾಯ". ಇದು ಒಂದು ಆಯಾಮದಲ್ಲಿ ರಾಷ್ಟ್ರದ, ಒಕ್ಕೂಟವೊಂದರ ಸಾಮರ್ಥ್ಯಗಳನ್ನೂ ಪರಿಣಾಮಕಾರಿಗೊಳಿಸುವದ್ದಾಗಿದೆ. ಇನ್ನೊಂದು ಆಯಾಮದಲ್ಲಿ ಸರಕಾರದೊಡನೆ ಸಂಪೂರ್ಣ ಅಸಹಕಾರ ನೀತಿಯನ್ನು ಅನುಸರಿಸುವ ಮಾರ್ಗವನ್ನೂ ಆಯೋಜಿಸಿಕೊಂಡಿತ್ತು.

ಬ್ರಿಟೀಷ್ ಮತ್ತು ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವದು, ಆ ಮೂಲಕ ಸ್ವದೇಶೀ ಉತ್ಪನ್ನಗಳಿಗೆ ಪ್ರೋತ್ಸಾಹದ ಮೂಲಕ ಆ ವಿದೇಶಿ ವಸ್ತಗಳಿಗೆ

ಸ್ಥಳೀಯವಾಗಿಯೇ ಪರ್ಯಾಯಗಳನ್ನು ಒದಗಿಸಲು ಯೋಜನೆಯಾಗಿತ್ತು. ಬ್ರಿಟೀಷ ಕಾನೂನಿನ ಅನ್ವಯವಾಗಿ ನಡೆಯುತ್ತಿದ್ದ ನ್ಯಾಯಾಲಯಗಳನ್ನು ಬಹಿಷ್ಕರಿಸಿವದು ಮತ್ತು ಅದಕ್ಕೆ ಬದಲಾಗಿ "ಮಧ್ಯಸ್ಥ ನ್ಯಾಯಾಲಯ"ಗಳನ್ನು ಸ್ಥಾಪಿಸುವದು, ಹಾಗೂ ಸರಕಾರೀ ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಬಹಿಷ್ಕರಿಸಿ ದೇಶಾದ್ಯಂತ ರಾಷ್ಟ್ರೀಯ ಶಾಲಾ–ಕಾಲೇಜುಗಳ ಸ್ಥಾಪನೆ ಮಾಡುವದು, ಜೊತೆಗೆ ಯುವ ಸಮುದಾಯದ ಸಂಘಟನೆಗಳನ್ನು ರಚಿಸುವ ಮೂಲಕ ಅವರಿಗೆ ಪೊಲೀಸ್ ಹಾಗೂ ರಕ್ಷಣಾ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುವಂತೆ ತರಬೇತುಗೊಳಿಸುವದು ಒಂದು ಯೋಜನೆಯಾಗಿತ್ತು. ಮತ್ತೆ ಎಲ್ಲೆಲ್ಲಿ ಅವಶ್ಯವಿದೆಯೋ ಅಲ್ಲೆಲ್ಲವೂ ಮೌನ ಪ್ರತಿರೋಧದ ಪ್ರಕಟಿಸುವದನ್ನು ಕೂಡಲೇ ಆಯೋಜಿಸುವ ವಿಚಾರ ಹೊಂದಿತ್ತು.

ಶ್ರೀ ಅರವಿಂದರು ಕಾಂಗ್ರೆಸ್ಸನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲೂ ಆಶಿಸಿದ್ದರು. ಆ ಮೂಲಕ ಒಂದು ಕೇಂದ್ರೀಕೃತವಾದ ಸಯೋಜಿತವಾದ ರಾಷ್ಟ್ರೀಯ ಕಾರ್ಯಕ್ರಮವೊಂದನ್ನು ಆಯೋಜಿಸುವ ಮೂಲಕ ನಿರ್ದೇಶನ ಕೊಡುವ ನೀತಿಯೊಂದನ್ನು ರೂಪಿಸಲು ಆಶಿಸಿದ್ದರು. ಆ ಮೂಲಕ ದೇಶದೊಳಗೆ ಒಂದು ಆಂತರಂಗಿಕವಾದ ಸ್ಥಾನಿಕ ರಾಷ್ಟ್ರದ (ರಾಜ್ಯದ) ವ್ಯವಸ್ಥೇಯನ್ನು ರೂಪಿಸಲೂ ಆಶಿಸಿದ್ದರು. ಈ ಮೂಲಕ ಸ್ವಾತಂತ್ರ್ಯ ಹೋರಾಟವನ್ನು, ಜಯ ಲಭಿಸುವವರೆಗೂ ಮುಂದುವರೆಸಿಕೊಂಡು ಹೋಗಲು ಯೋಜಿಸಲಾಗಿತ್ತು. ಇದನ್ನೂ ಕಾಂಗ್ರಸ್ ಪಕ್ಷಕ್ಕೆ ತಿಳಿಸಿ, ಆ ರೀತಿಯಲ್ಲಿ ಪಕ್ಷವೂ ಕಾರ್ಯಪ್ರವೃತ್ತವಾಗುವಂತೆ ಅವರ ಮನವೊಲಿಸಲು ಹಾಗೂ ಅದನ್ನು ಒಂದು ಅಧಿಕೃತ ಅಂಗ ಸಂಸ್ಥೆಯೆಂದು ನಿಗದಿಗೊಳಿಸಲು ಹಾಗೂ ಹೊಸದಾಗಿ ಪ್ರಾರಂಭ ಮಾಡಿದ ದಿನಪತ್ರಿಕೆಗೆ ಧನ ಸಹಾಯ ಒದಗಿಸುವಂತೆ ಕೇಳಿಕೊಂಡಿದ್ದರು. ಆ ಪತ್ರಿಕೆಯೇ "ವಂದೇ ಮಾತರಂ". ಆ ಸಂದರ್ಭದಲ್ಲಿ ಶ್ರೀ ಅರವಿಂದರೇ ಆ ಪತ್ರಿಕೆಯ ಸಂಪಾದಕರೂ ಆಗಿದ್ದರು. ಇವರ ಈ ಸುಯೋಜಿತ ನೀತಿಯಿಂದಾಗಿ "ವಂದೇ ಮಾತರಂ" ಪ್ರಾರಂಭವಾದ 1907ನೇ ಇಸ್ವಿಯಿಂದ, ಅದು ಪ್ರಕಟಣೆಯನ್ನು ನಿಲ್ಲಿಸುವವರೆಗೂ ಅಂದರೆ 1908ರವರೆಗೂ, ಈ ಮಧ್ಯದಲ್ಲಿ ಶ್ರೀ ಅರವಿಂದರು ಸೆರೆಮನೆ ವಾಸ ಅನುಭವಿಸುವ ಅವಧಿಯವರೆಗೂ – ಶ್ರೀ ಅರವಿಂದರು ನಿರ್ದೇಶಿಸಿದಂತೆಯೇ ಪ್ರಕಟಗೊಳ್ಳುತ್ತಿತ್ತು. ಅದು ಪ್ರಕಟವಾದ ಕೂಡಲೇ ದೇಶಾದ್ಯಂತ ಓದುಗರನ್ನು ಗಳಿಸಿಕೊಂಡಿತ್ತು. ಈ ಪತ್ರಿಕೆಯು ಅತ್ಯಲ್ಪ ಕಾಲದಲ್ಲಿಯೇ ಭಾರತೀಯ

ರಾಜಕೀಯ ಚಿಂತನಗಳಿಗೆ ಒಂದು ಅವಿಸ್ಮರಣೀಯವಾದ ಸ್ಥಾನವನ್ನು ಅಸ್ತಿತ್ವವನ್ನೂ ನೀಡಿದೆ. ಅದು ಮೂಲಭೂತವಾಗಿಯೇ ಅನುಷ್ಠಾನಿಸಲ್ಪಟ್ಟ ಹಾಗೂ ರಕ್ಷಿಸಲ್ಪಟ್ಟ ವಿಷಯಗಳನ್ನು – ಈ ಮಧ್ಯದ ಅವಧಿಯಲ್ಲಿ ಮತ್ತೂ ಮುಂದಿನ ದಿನಮಾನಗಳಲ್ಲಿಯೂ ತನ್ನ ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದೆ.

ಆದರೆ ಈ ವ್ಯವಸ್ಥೆಯಲ್ಲಿ ರೂಪಿತಗೊಂಡ ಹೋರಾಟವು, ತೀವ್ರ ಭಾವೋದ್ವೇಗದಿಂದ ಹಾಗೂ ಅಂತಹದೇ ಘಟನಾವಳಿಗಳಿಂದ ಕೂಡಿದ್ದು, ಬರಲಿರುವ ಭವಿಷ್ಯಕ್ಕೆ ಅತ್ಯಂತ ಪ್ರಮುಖ ಕಾರಣವಾದವು. ಹೀಗಾಗಿ ಅವು ಇತಿಹಾಸದಲ್ಲಿ ಕಳೆದುಹೋಗಲಿಲ್ಲ. ಅಭಿವೃದ್ಧಿಗೊಳ್ಳಲು ಬೇಕಾದ ವಿಷಯವು ಇನ್ನೂ ಪಕ್ವತೆಯನ್ನು ತಲುಪದೇ ಉಳಿದುಕೊಂಡಿದೆ.

*

**ಆ ನ್ಯಾಯಾಂಗದ ವಿಚಾರಣೆ ಮತ್ತು ರೂಪಾಂತರಣ**

1907ರಲ್ಲಿ ದೇಶದ್ರೋಹದ ಆಪಾದನೆಯಲ್ಲಿ ಶ್ರೀ ಅರವಿಂದರನ್ನು ಅಭಿಯೋಗಕ್ಕೆ (Prosecution) ಒಳಪಡಿಸಲಾಯಿತು. ತದನಂತರದಲ್ಲಿ ಅದರಿಂದ ಅವರು ಬಿಡುಗಡೆ ಹೊಂದಿದ್ದರು. ಅಲ್ಲಿಯವರೆಗೂ ಓರ್ವ ಸಂಘಟಕ ಮತ್ತು ಲೇಖಕರಂತೆ ಮಾತ್ರ ಇದ್ದ ಅವರು, ಈ ಘಟನೆಯಿಂದ ಅನುಗೃಹಿತರಾದಂತೆ – ಆ ಮೂಲಕ ಸೆರೆಮನೆವಾಸದ ಅಥವಾ ತದನಂತರದಲ್ಲಿ ಕಣ್ಮರೆಯಾಗಿ ಇದ್ದ ಅವಧಿಯಲ್ಲಿಯೂ, ಇತರೆ ಕೆಲವು ಮುಖಂಡರಿಂದಾಗಿ ಅವರೆಲ್ಲ ಸಮ್ಮತಿಸಿ ಶ್ರೀ ಅರವಿಂದರನ್ನು ಬಂಗಾಲದಲ್ಲಿ ಪಕ್ಷದ ಪ್ರಧಾನರೆಂದು ಗೌರವ ಸಲ್ಲಿಸಿದ್ದರು. ಪ್ರಪ್ರಥಮ ಬಾರಿಗೆ ಬಹಿರಂಗವಾಗಿ ಭಾಷಣ ನೀಡಲು ಹಾಗೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಒಂದು ಅವಕಾಶ ದೊರೆತಂತಾಯಿತು. ಸೂರತದಲ್ಲಿ 1907ರಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಅಲ್ಲಿಯೇ ತೀವ್ರ ತೆರನಾದ ವೈಚಾರಿಕ ಸಂಘರ್ಷವು ಏರ್ಪಟ್ಟು, ಕಾಂಗ್ರೆಸ್ ಎರಡು ಹೋಳುಗಳಾಗಿ – ಸಮನಾದ ಎರಡು ವಿಭಾಗವಾಗಿ ವಿಭಜನೆ ಹೊಂದಿತು. ಮೇ 1908ರಲ್ಲಿ ಅವರು 'ಅಲಿಪೂರ ಪಿತೂರಿ'ಯ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದರು. ಆಗ ಶ್ರೀ ಅರವಿಂದರ ಸೋದರನಾದ ಬರೀಂದ್ರರ ಮುಂದಾಳತ್ವದಲ್ಲಿ ಜರುಗುತ್ತಿದ್ದ ಕ್ರಾಂತಿಕಾರೀ ಗುಂಪಿನ ಕಾರ್ಯಗಳಿಂದಾಗಿ ಈ ಪ್ರಕರಣ ದಾಖಲಿಸಲ್ಪಟ್ಟಿತ್ತು. ಆದರೆ ಈ ಕ್ರಾಂತಿಕಾರೀ ಘಟನೆಗಳಲ್ಲಿ ಶ್ರೀ ಅರವಿಂದರ ಪಾತ್ರವನ್ನು ಯಾವ

ರೀತಿಯಿಂದಲೂ ಪುರಾವಿಸಲು ಸಾಧ್ಯವಾಗಲಿಲ್ಲ. ಅದಕ್ಕೆ ಸಾಕ್ಷ್ಯಗಳೂ ಲಭ್ಯವಿರಲಿಲ್ಲ. ಹೀಗಾಗಿ ಅವರು ಆ ಆಪಾದನೆಯಿಂದ ಬಿಡುಗಡೆಗೊಳಿಸಲ್ಪಟ್ಟರು. ಆದರೆ ವಿಚಾರಣಾಧೀನ ಕೈದಿಯಾಗಿ ಒಂದು ವರ್ಷ ಅಲಿಪೂರ ಸೆರೆಮನೆಯಲ್ಲಿ ಸೆರೆವಾಸವನ್ನು ಅನುಭವಿಸಿ 1907ರ ಮೇ ತಿಂಗಳಲ್ಲಿ ಬಿಡುಗಡೆಗೊಳಿಸಲ್ಪಟ್ಟಿದ್ದರು. ಅಷ್ಟೊತ್ತಿಗಾಗಲೇ ಅವರು ಸ್ಥಾಪಿಸಿದ್ದ ಪಕ್ಷವು ಸಹಿತ ಛಿದ್ರಗೊಂಡಿತ್ತು. ಸೆರೆಮನೆಯ ವಾಸದಿಂದಾಗಿ, ಗಡಿಪಾರು ಶಿಕ್ಷೆಯ ಕಾರಣದಿಂದಾಗಿ ಅದಕ್ಕಿಂತ ಮಿಗಿಲಾಗಿ ತಮಗೆ ತಾವೇ ವಿಧಿಸಿಕೊಂಡಂತೆ, ಇತರ ಎಲ್ಲ ಮುಖಂಡರು ಈ ಎಲ್ಲ ಹೋರಾಟಗಳಿಂದ ದೂರವೇ ಉಳಿದುಕೊಂಡರು. ಪಕ್ಷವು ಅಸ್ತಿತ್ವದಲ್ಲಿ ಇದ್ದರೂ ಧ್ವನಿಹೀನವಾಗಿತ್ತು. ನಿರುತ್ಸಾಹಗೊಂಡಿತ್ತು. ಮತ್ತು ಸತತ ಪರಿಶ್ರಮದ ಕಾರ್ಯಗಳನ್ನು ಮಾಡಲು ಅಸಮರ್ಥವಾಗಿತ್ತು. ಹೀಗಾಗಿ ಶ್ರೀ ಅರವಿಂದರು ಹೆಚ್ಚು–ಕಡಿಮೆ ಒಂದು ವರ್ಷದ ಕಾಲ ಏಕಾಂಗಿಯಾಗಿಯೇ ಉಳಿದುಕೊಂಡೇ, ಏಕೈಕ ನಾಯಕರಾಗಿಯೇ ತಮ್ಮ ಹೋರಾಟವನ್ನು ಮುಂದುವರೆಸಿಕೊಂಡು ಬಂದರು.

ಈ ಮೂಲಕವಾಗಿ ಭಾರತದಲ್ಲಿ ರಾಷ್ಟ್ರೀಯವಾದಿಗಳ ಚಳುವಳಿಯನ್ನು ಅವರು ಮುಂದುವರೆಸಿಕೊಂಡೇ ಸಾಗಿದರು. ಆ ಪ್ರಯತ್ನದಲ್ಲಿಯೇ ಒಂದು ಆಂಗ್ಲ ಸಾಪ್ತಾಹಿಕವೊಂದನ್ನು – "ಕರ್ಮಯೋಗಿನ್" ಪ್ರಾರಂಭ ಮಾಡಿದರು. ಅದೇ ಸಮಯಕ್ಕೆ ಬಂಗಾಲಿ ಭಾಷೆಯಲ್ಲಿಯೂ "ಧರ್ಮ" ಎನ್ನುವ ಸಾಪ್ತಾಹಿಕವನ್ನೂ ಪ್ರಾರಂಭ ಮಾಡಿದ್ದರು. ಆದರೆ ಕೊನೆಕೊನೆಗೆ ಶ್ರೀ ಅರವಿಂದರು ಹೇಳುತ್ತಿರುವ ನೀತಿ–ನಿಯಮಗಳನ್ನು ಈ ದೇಶವು ಅರ್ಥೈಸಿಕೊಳ್ಳಲು ಇನ್ನೂ ತರಬೇತಿ ಹೊಂದಿಲ್ಲವೆನ್ನುವದನ್ನು ಅವರು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು.

ಹೀಗಾಗಿ ಜನರಿಗೆ ಸೂಕ್ತವಾದ ತರಬೇತಿ, ಮಾರ್ಗದರ್ಶನವನ್ನು ಕೊಡಬೇಕು ಎನ್ನುವ ಆಶಯದಲ್ಲಿ ಅಷ್ಟೊಂದು ಸಂಕೀರ್ಣವಲ್ಲದ ಆದರೆ ಪ್ರಬುದ್ಧವಾದ ವಿಚಾರಗಳ ಮೂಲಕ "ಸ್ವಯಂಶಾಸನ ವಿಧಾನ"(ಹೋಮ್ ರೂಲ್ಸ ಚಳುವಳಿ)ವನ್ನು ಅಥವಾ ಮಹಾತ್ಮಾ ಗಾಂಧೀಜಿಯವರ ಮೂಲಕವಾಗಿ ನಿರ್ಮಾಣಗೊಂಡಿದ್ದ, ಅಹಿಂಸಾ ತತ್ವದ ಹಿನ್ನೆಲೆಯಲ್ಲಿ ರೂಪುಗೊಂಡಿದ್ದ ಮೌನ ವಿರೋಧದ ಚಳುವಳಿಯ ಸ್ವರೂಪದಲ್ಲಿ ನಡೆದ ದಕ್ಷಿಣ ಆಫ್ರಿಕೆಯ ಹೋರಾಟದ ಮಾದರಿಯ ಮೂಲಕವೂ ಪ್ರಾರಂಭಿಸಲು ಯೋಚಿಸಿದ್ದರು. ಆದರೆ ಅಂತಹ ಒಂದು ಅವಕಾಶ ಅವರಿಗೆ ದೊರೆಯಲೇ ಇಲ್ಲ. ಅದೂ ಅಲ್ಲದೇ ಜನ ಸಮುದಾಯದಲ್ಲಿ ಅವರು ಪೂರ್ವನಿರ್ಧರಿತ ಮುಖಂಡರಲ್ಲ ಎನ್ನುವ ಸ್ಥಿತಿಯನ್ನೂ ಮನಗಂಡಿದ್ದರು.

ಇವೆಲ್ಲಕಿಂತ ಮುಖ್ಯವಾಗಿ ವಿಚಾರಣಾಧೀನ ಕೈದಿಯಾಗಿ 12 ತಿಂಗಳು ಅಲೀಪುರ ಸೆರೆಮನೆ ವಾಸದಲ್ಲಿನ ಅವಧಿಯಿಂದಾಗಿ, ಅವರು ಸಂಪೂರ್ಣವಾಗಿ ಯೋಗದ ಅಧ್ಯಯನದಲ್ಲಿಯೇ ತೊಡಗಿಕೊಳ್ಳುವಂತಾಗಿತ್ತು. ಅವರ ಅಂತರಾತ್ಮದ ಕರೆಯೂ ಸಹಿತ ಸಂಪೂರ್ಣವಾಗಿ ಯೋಗದ ವಿಷಯದಲ್ಲಿಯೇ ತಲ್ಲೀನರಾಗುವಂತೆ ಪ್ರೇರೇಪಿಸುತ್ತಿತ್ತು. ಹೀಗಾಗಿ ಅವರು ಈ ಸ್ವಾತಂತ್ರ್ಯ ಹೋರಾಟದಿಂದ ದೂರ ಉಳಿಯಲು ನಿರ್ಧರಿಸಿ, ರಾಜಕೀಯದಿಂದಲೂ ದೂರವೇ ಉಳಿದರು. ಅದು ಕೆಲ ಅವಧಿಯವರೆಗಾದರೂ ದೂರ ಇರಬೇಕಾದ ತುಡಿತದಿಂದ ಶ್ರೀ ಅರವಿಂದರು ಈ ಎಲ್ಲ ಬಾಹ್ಯ ಕಾರ್ಯಗಳಿಂದ ದೂರವೇ ಇದ್ದರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/6–8**

**ಒಂದು ಪೂರ್ವ ದೃಷ್ಟಾಂತ**

1907ರಿಂದಲೇ ಭಾರತಕ್ಕೆ ಒಂದು ಭರವಸೆದಾಯಕವಾದ ಹಾಗೂ ಆಶಾದಾಯಕವಾದ ಯುಗವಾಗಿರುವದನ್ನು ಕಾಣುತ್ತೇವೆ; ಅದರಲ್ಲಿ ಬದುಕನ್ನೂ ಸಾಗಿಸುತ್ತಿದ್ದೇವೆ. ಕೇವಲ ಭಾರತದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ಅಲ್ಲೋಲ–ಕಲ್ಲೋಲಮಯದ ಹಾಗೂ ಕ್ರಾಂತಿಕಾರೀ ಪರಿವರ್ತನೆಗಳನ್ನು ಕಂಡಿದೆ. ಊರ್ಧ್ವವೆಂದು ಪರಿಗಣಿತವಾದದ್ದು ಅಧೋ ಸ್ಥಾನಕ್ಕೆ ಬಂದಿದೆ; ಅಧೋ ಸ್ಥಾನದಲ್ಲಿದ್ದದ್ದು ಊರ್ಧ್ವ ಸ್ಥಾನಕ್ಕೆ ಏರಿದೆ. ತುಳಿತಕ್ಕೆ ಒಳಗಾದ ಮತ್ತು ಖಿನ್ನತೆಗೆ ಸಿಲುಕಿದ ಎಲ್ಲವೂ ಉನ್ನತೀಕರಣಗೊಳಿಸಲ್ಪಟ್ಟಿವೆ. ರಾಷ್ಟ್ರವಾಗಲೀ ಮತ್ತು ಮಾನವೀಯತೆ–ಯಾಗಲೀ ಒಂದು ನವೀನ ಚೇತನದಿಂದ ಆವರಣಗೊಳಿಸಲ್ಪಟ್ಟಿದೆ. ನವನವೀನ ಚಿಂತನಗಳು, ಹೊಸ ಹೊಸ ಸಂಶೋಧನಾ ಪ್ರಯತ್ನಗಳು ಎಲ್ಲವೂ ನೂತನ ಗುರಿಗಳನ್ನೇ ತಲುಪುವಂತೆ ಘಟಿಸುತ್ತ ಬಂದಿವೆ. ಈ ಮಧ್ಯದ ಅವಧಿಯಲ್ಲಿಯೇ ಭಾರತವೂ ಸಹಿತ ಸ್ವತಂತ್ರಗೊಳ್ಳುತ್ತದೆ.

**SABCL (ಶ್ರೀ ಅರವಿಂದರ ಜನ್ಮ ಶತಮಾನೋತ್ಸವದ ಸಂಗ್ರಹ) 26/390**

**– ಶ್ರೀ ಅರವಿಂದರು**

## ಶ್ರೀ ಅರವಿಂದರ ರಾಜಕೀಯ ಚಟುವಟಿಕೆಗಳ ಮೂರು ಆಯಾಮಗಳು

ಶ್ರೀ ಅರವಿಂದರ ರಾಜಕೀಯ ಚಿಂತನಗಳಿಗೆ ಮತ್ತು ಕಾರ್ಯಗಳಿಗೆ ಮೂರು ಆಯಾಮಗಳಿವೆ. ಮೊದಲನೆಯದಾಗಿ, ಅವರು ಪ್ರಾರಂಭಿಸಿದ್ದ ಕ್ರಿಯೆಯಂತೆಯೇ ಸಶಸ್ತ್ರ ಹೋರಾಟದ ರಹಸ್ಯ ಪೂರ್ಣವಾದ ಕ್ರಾಂತಿಕಾರಿ ಪ್ರಚಾರದ ಹಾಗೂ ಸಂಘಟನೆಯ ಮೂಲಕ ಅದರ ಆಂತರ್ಯವಾಗಿರುವ ಹಾಗೆ "ಸಶಸ್ತ್ರ ಹೋರಾಟ".

ಎರಡನೆಯದು, ಜನ ಸಮುದಾಯದಲ್ಲಿ, ಇಡೀ ದೇಶಾದ್ಯಂತವೂ ಸ್ವಾತಂತ್ರ್ಯಕ್ಕೆ ಸನ್ನದ್ಧಗೊಳ್ಳುವ ಹಾಗೆ ಚಿಂತನಶೀಲರಾಗುವಂತೆ ಪ್ರಚಾರಾಂದೋಲನದ ರೂಪಣೆ. ಶ್ರೀ ಅರವಿಂದರು ಯಾವಾಗ ಈ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರೋ, ಆಗ ಬಹುತೇಕ ಜನರು, ಇವರ ಈ ಹೊಸ ನೀತಿಯನ್ನು, ಅಸಾಧ್ಯವಾದ ಹಾಗೂ ಅಸ್ವಾಭಾವಿಕದಂತೆ ತೋರುತ್ತಿದ್ದ ಕ್ರಿಯೆಯೆಂದು ಕಡೆಗಣಿಸಲ್ಪಟ್ಟಿತ್ತು. ಅದನ್ನು ಉನ್ಮತ್ತ(ಭ್ರಮಾಧೀನ) ಎಂದೇ ಪರಿಗಣಿಸಲ್ಪಟ್ಟಿತ್ತು. ಏಕೆಂದರೆ ಬ್ರಿಟೀಶ ಸಾಮ್ರಾಜ್ಯವು ಅತ್ಯಂತ ಬಲಶಾಲಿಯಾಗಿದ್ದು, ಅದರ ಎದುರು ಭಾರತವು ತುಂಬ ಅಶಕ್ತಿಯ ಸ್ಥಿಯಲ್ಲಿದೆ ಎನ್ನುವ ವಿಷಣ್ಣ ಮನೋಭಾವವೇ ತುಂಬಿತ್ತು. ಅಷ್ಟೇ ಅಲ್ಲದೇ ಆಡಳಿತ ವ್ಯವಸ್ಥೆಯೂ ಸಹಿತ ಎಲ್ಲವನ್ನೂ ನಿಶ್ಶಸ್ತ್ರಗೊಳಿಸಿದ್ದೂ ಅಲ್ಲದೆ ಜನತೆಯನ್ನು ನಿರ್ವೀರ್ಯನ್ನಾಗಿಸಿತ್ತು. ಸಾಹಸದ ಅಥವಾ ಸಾಧನೆಯ ಕನಸನ್ನೂ ಸಹಿತ ಕಾಣದ ಹತಾಶ ಮನೋಸ್ಥಿತಿ ದೇಶವನ್ನು ಆವರಿಸಿತ್ತು.

ಮೂರನೆಯದು – ಸುಸಂಘಟಿತವಾಗಿರುವ ಜನ ಸಮುದಾಯದ ಸಂಘಟನೆಯೊಂದು ಈ ಎಲ್ಲ ವಿಚಾರಗಳನ್ನು ಮುಂದುವರೆಸಲು ಮತ್ತು ವಿದೇಶೀ ಆಡಳಿತವನ್ನು ಅಸಹಕಾರ ಹಾಗೂ ಮೌನ ಪ್ರತಿರೋಧದೊಂದಿಗೆ ಕಡೆಗಣಿಸುವ ವ್ಯವಸ್ಥೆಯೊಂದು ಇದಾಗಿತ್ತು.

*

## ಮೌನ ಪ್ರತಿರೋಧ, ಶಾಂತಿವಾದ ಹಾಗೂ ಹಿಂಸೆಯ ಮುಕ್ತಾಯ

ಶ್ರೀ ಅರವಿಂದರು ಎಂದಿಗೂ ಅಸಮರ್ಥ ನೈತಿಕವಾದಿಯೂ ಆಗಿರಲಿಲ್ಲ; ಅಥವಾ ಅಶಕ್ತ ಶಾಂತಿವಾದಿಯೂ ಆಗಿರಲಿಲ್ಲ. ಒಂದು ಹಂತದಲ್ಲಿ ಮೌನ–ಪ್ರತಿರೋಧನೆ (Passive Resistance) ರಾಷ್ಟ್ರೀಯ ಚಳುವಳಿಗೆ ಅತ್ಯುತ್ತಮವಾದ

ನೀತಿ ಎಂದೇ ಅಳವಡಿಸಿಕೊಳ್ಳಲ್ಪಟ್ಟಿತ್ತು. ಅದಕ್ಕೇ ಸೀಮಿತಗೊಂಡಂತೆ ಸ್ವಾತಂತ್ರ್ಯ ಹೋರಾಟದ ರಾಜಕೀಯ ಚಟುವಟಿಕೆಗಳನ್ನು ರೂಪಿಸಲಾಗಿತ್ತೇ ವಿನಾ, ಅಹಿಂಸಾ ತತ್ವದ ಪ್ರವಾದಿ ಹೇಳಿಕೆಯ ಭಾಗವಾಗಿಯಂತೂ ಅಲ್ಲ. ಅದು ಶಾಂತಿವಾದದ ಚಿಂತನಾ ವಿಧಾನದ ಔನ್ನತ್ಯದಲ್ಲಿನ ಒಂದು ಅಂಶವಾಗಿತ್ತು; ಆದರೆ ಅದು ಆಧ್ಯಾತ್ಮಿಕವಾಗಿರಲೇಬೇಕು, ಇಲ್ಲವಾದಲ್ಲಿ ಕನಿಷ್ಠ ಪಕ್ಷ ಮನೋವೈಜ್ಞಾನಿಕ ತಳಹದಿಯನ್ನಾದರೂ ಹೊಂದಿರಬೇಕು; ಮಾನವನ ಸ್ವಭಾವದಲ್ಲಿ ಯಾವುದೇ ಪರಿವರ್ತನೆ (ಬದಲಾವಣೆ) ಇಲ್ಲದೇನೆ ಅದು ಫಲಪ್ರದವಾಗಿ ಫಲಿತಾಂಶವಾಗಿ ಬರುವದಿಲ್ಲ. ಒಂದು ವೇಳೆ ಅದು ಬೇರೆ ಏನನ್ನಾದರೂ (ನೈತಿಕ ತತ್ವಗಳು ಅಥವಾ ಅಹಿಂಸೆಯ ಪ್ರವಾದೀ ಹೇಳಿಕೆಗಳು ಅಥವಾ ಅಂತಹ ಇವರ ಹೇಳಿಕೆಗಳು) ಆಧರಿಸಿಕೊಂಡು ರೂಪಿಸಲ್ಪಟ್ಟಿರಲಿಲ್ಲ. ಒಂದು ವೇಳೆ ಆ ರೀತಿಯಲ್ಲಿ ಅದು ರೂಪುಗೊಂಡಿದ್ದರೆ ಆಗ ಅದು ಖಂಡಿತವಾಗಿಯೂ ವಿಫಲವಾಗುವದು. ಅದಕ್ಕಿಂತ ಮಿಗಿಲಾಗಿ ಮೊದಲಿದ್ದ ಸ್ವರೂಪವನ್ನೇ ಮತ್ತೂ ಮತ್ತೂ ಮೊದಲಿಗಿಂತ ದುರ್ಬಲಗೊಳಿಸಬಹುದು.

ಅಂತಾರಾಷ್ಟ್ರೀಯ ಒಪ್ಪಂದದೊಂದಿಗೆ ಹಾಗೂ ಅಂತಾರಾಷ್ಟ್ರೀಯ ಸೈನಿಕ ಬಲದೊಂದಿಗೆ “ಯುದ್ಧ”ದ ಪ್ರಯತ್ನದ ಬಗೆಗೆ ಅವರು ಹೆಚ್ಚು ಆಸಕ್ತಿಯನ್ನು ಹೊಂದಿದ್ದರು. ಯಾವುದು ಈಗ ಹೊಸ ಆದೇಶ (ನೂತನ ಆದೇಶ) ಎಂದು ಇದೀಗ ಪರಿಗಣಿಸಲ್ಪಡುತ್ತಿದೆಯೋ, ರೂಪುಗೊಳ್ಳುತ್ತಿದೆಯೋ, ಆ ವಿಷಯದ ಪರವಾಗಿ ಇದ್ದರು. ಒಂದು ವೇಳೆ ಇದು ಸಾಧ್ಯವೆಂದಾದಲ್ಲಿ ಆಗಲೂ ಸಹಿತ ಇದು ಅಹಿಂಸೆ ಎಂದು ಅದನ್ನು ಕರೆಯಲು ಸಾಧ್ಯವಿರಲಿಲ್ಲ. ಅದು ಅರಾಜಕ ಶಕ್ತಿಯೊಂದನ್ನು ಕಾನೂನು ಸಮ್ಮತವಾಗಿರುವ ಅದೇ ತೆರನಾದ ಶಕ್ತಿಯನ್ನು ಕೆಳಗಿಳಿಸುವ ಘಟನೆಯಾಗುತ್ತದೆ. ಆದಾಗ್ಯೂ ಸಹಿತವಾಗಿ, ಇದು ಚಿರಂತನವಾಗಿಯೇ ಉಳಿಯುತ್ತದೆ ಎಂದು ಹೇಳಲೂ ಬರುವದಿಲ್ಲ. ದೇಶ–ದೇಶಗಳಲ್ಲಿ ಈ ತೆರನಾದ ಶಾಂತಿಯ ಅವಕಾಶಗಳನ್ನು ಸುರಕ್ಷಿತಗೊಳಿಸಬಹುದು, ಆದರೆ, ಆಗಿಂದಾಗ್ಗೆ ಭುಗಿಲೇಳುವ ಅಂತರ್ಯುದ್ಧಗಳು ಹಾಗೂ ಕ್ರಾಂತಿಗಳು ಹಾಗೂ ರಾಜಕೀಯ ಪಲ್ಲಟಗಳು ಮತ್ತು ದಬ್ಬಾಳಿಕೆಗಳು, ಮತ್ತೆ ಕೆಲವೊಮ್ಮೆ ರಕ್ತಪಾತವನ್ನೇ ಬಯಸುವ ರೀತಿಯ ಸಂಗತಿಯೇ ವಿಶ್ವ ಶಾಂತಿಗೂ ಸಹಿತ ಅನ್ವಯವಾಗುತ್ತದೆ.

*

## ಪರಿವರ್ತನೆಯ ಬೀಜಾರೋಪಣ

ಭಾರತಕ್ಕೆ ಬಂದ ಮೊದಮೊದಲಿನ ಕೆಲವು ವರ್ಷಗಳಲ್ಲಿ, ಶ್ರೀ ಅರವಿಂದರು ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದೇ ದೂರವೇ ಉಳಿದಿದ್ದರು. (ಆದರೆ "ಇಂದು ಪ್ರಕಾಶ" ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು). ಆಗಲೇ ಭಾರತ ದೇಶದ ಸ್ಥಿತಿ–ಗತಿಗಳನ್ನು ಅಭ್ಯಸಿಸುತ್ತಾ, ಆ ಮೂಲಕ ಹೆಚ್ಚು ಪ್ರಬುದ್ಧವಾಗಿ ನಿರ್ಣಯಕ್ಕೆ ಬರಲು ಹಾಗೂ ಯಾವ ರೀತಿಯಲ್ಲಿ ಮುಂದಿನ ಕಾರ್ಯಗಳನ್ನು ಪ್ರಾರಂಭಿಸಲು ನಿರ್ಧರಿಸಿದ್ದರು. ಈ ದಿಸೆಯಲ್ಲಿ ಅವರು ಪ್ರಥಮ ಪ್ರಯತ್ನದಲ್ಲಿ ಬಡೋದಾ ಸೈನ್ಯದಲ್ಲಿ ಕಾರ್ಯ ಮಾಡುತ್ತಿದ್ದ ಬಂಗಾಲೀ ಸೈನಿಕ ಜತಿನ್ ಬ್ಯಾನರ್ಜಿಯನ್ನು ತಮ್ಮ ಪರವಾಗಿ ಬಂಗಾಲದಲ್ಲಿ ಲೆಫ್ಟಿನೆಂಟ್ ಎಂದು ಕಳಿಸಿದ್ದರು. ಅದೂ ಬರಲಿರುವ 30 ವರ್ಷಗಳ ಅವಧಿಯಲ್ಲಿ ಒಂದು ಫಲಪ್ರದವಾದ ಫಲಿತಾಂಶವನ್ನು ರೂಪಿಸುವ ಸಲುವಾಗಿ ಒಂದು ಸುಯೋಜಿತ ಕಾರ್ಯಕ್ರಮವನ್ನು ಪ್ರಾರಂಭಿಸುವ ಹೊಣೆಗಾರಿಕೆಯನ್ನು ಅವನಿಗೆ ವಹಿಸಿದ್ದರು. ಆದರೆ ಅದು ಈಡೇರಲು ತದನಂತರದ ಅವಧಿಯಲ್ಲಿ 50 ವರ್ಷಗಳ ಕಾಲ ಬೇಕಾಯಿತು. ಅದೂ ಸುದೀರ್ಘ ಅವಧಿಯ ಸ್ವಾತಂತ್ರ್ಯ ಹೋರಾಟದ ಸ್ವರೂಪದಲ್ಲಿ ಪ್ರಕಟಗೊಂಡು ಸಂಪೂರ್ಣ ಯಶಸ್ವಿಯಾಯಿತು. ಇದೆಲ್ಲವನ್ನೂ ತುಂಬ ರಹಸ್ಯಮಯವಾಗಿಯೇ ಅನುಷ್ಠಾನಿಸಲು ಅಥವಾ ಎಷ್ಟು ಸಾಧ್ಯವೋ ಅಷ್ಟು ಪ್ರಕಟಗೊಳಿಸಬಹುದಾದ ಕಾರ್ಯಗಳಲ್ಲಿ ಅದೂ ಹಲವು ವಿಧದ ಪೂರ್ವನಿರ್ಧರಿತ ಹಾಗೂ ಗುಪ್ತವಾಗಿಯೇ, ಪರಿವರ್ತನೀಯ ಪ್ರಚಾರಾಂದೋಲನವನ್ನು ಬಂಗಾಲದಾದ್ಯಂತ ವಿಸ್ತರಿಸುವ ಆಶಯ ಹೊಂದಿತ್ತು. ಇವೆಲ್ಲವನ್ನೂ ದೇಶದ ತರುಣ ವರ್ಗದಿಂದಲೇ ಈಡೇರಬೇಕಾಗಿದ್ದರಿಂದ, ಜೊತೆಗೆ ಹಿರಿಯರಿಂದ ಸಹಾನುಭೂತಿ, ಹಣಕಾಸಿನ ನೆರವು, ಸಹಕಾರಗಳನ್ನು ಪಡೆದುಕೊಳ್ಳುವದಾಗಿತ್ತು. ಅದರಲ್ಲೂ ಯಾರು ಉದಾತ್ತ ದೃಷ್ಟಿಕೋನವನ್ನು ಹೊಂದಿದ್ದಾರೋ ಅಂತಹವರನ್ನು ಈ ವಿಷಯಕ್ಕೆ ಸಂಪೂರ್ಣವಾಗಿ ತೊಡಗಿಸುವ ಆಶಯವನ್ನು ಹೊಂದಿತ್ತು. ಎಲ್ಲ ಪಟ್ಟಣ–ನಗರಗಳಲ್ಲಿ ಕೇಂದ್ರಗಳನ್ನೂ ಸ್ಥಾಪಿಸಿ, ಜೊತೆಜೊತೆಗೆ ಗ್ರಾಮಗಳಲ್ಲಿಯೂ ಸಹಿತ ಅದರ ಕಾರ್ಯವನ್ನು ವಿಸ್ತರಿಸುವ ಯೋಜನೆಯನ್ನು ಹೊಂದಿತ್ತು. ಯುವ ಪೀಳಿಗೆಯ ಸಂಘಟನೆಗಳನ್ನು ಸಾಂಸ್ಕೃತಿಕ, ಬೌದ್ಧಿಕ, ಅಥವಾ ಸೈನಿಕ ಉದ್ದೇಶಗಳು ಆಧರಿಸಿಯೇ ಅವರನ್ನು ಪ್ರವೃತ್ತಗೊಳಸಿಬೇಕಾಗಿತ್ತು. ಈಗಾಗಲೇ ಯಾರು ಈ ಹಂತದಲ್ಲಿ ಇರುವವರೋ

ಅವರನ್ನೂ ಸಹಿತ ಈ ಪರಿವರ್ತನೀಯ ಕಾರ್ಯಗಳಲ್ಲಿ ಸಹಭಾಗಿಯಾಗುವಂತೆ ನಿಗದಿ ಪಡಿಸುವದನ್ನೂ ಗುರಿಯಾಗಿಸಿಕೊಂಡಿತ್ತು.

ತರುಣ ಪೀಳಿಗೆಗೆ ಮಿಲಿಟರಿ ಕಾರ್ಯಗಳ ಹಂತದಲ್ಲಿಯೇ ತರಬೇತಿಯನ್ನು ನೀಡುವ ಮೂಲಕ ಜೊತೆಗೆ ಹಲವು ವಿಧದ ತರಬೇತಿಯನ್ನು ನೀಡುವ ಮೂಲಕ, ಕುದುರೆ ಸವಾರಿ, ದೈಹಿಕ ವ್ಯಾಯಾಮ, ಕಸರತ್ತು, ವಿವಿಧ ಬಗೆಯ ಆಟೋಟಗಳು, ಡ್ರಿಲ್.. ನಂತಹ ಸುಸಜ್ಜಿತವಾದ ತರಬೇತಿಗಳ ಮೂಲಕ ಚಳುವಳಿಯನ್ನು ಸಮರ್ಥಶೀಲಗೊಳಿಸುವದಾಗಿತ್ತು.

ಯಾವಾಗ ಈ ಚಿಂತನದ ಬೀಜಾರೋಪಣವಾಯಿತೋ, ಆಗಲೇ ಅದು ಅತ್ಯಂತ ತೀವ್ರವಾಗಿಯೇ ಅದು ಜನಪ್ರಿಯತೆಯನ್ನೂ ಗಳಿಸಿಕೊಂಡಿತು; ಈಗಾಗಲೇ ರೂಪುಗೊಂಡಿದ್ದ ತರುಣ ವರ್ಗದ ಸಂಘಟನೆಗಳು, ಚಿಕ್ಕ–ಚಿಕ್ಕ ಗುಂಪುಗಳು ಯಾವುದೇ ನಿಗದಿತ ಚಿಂತನಾ ಕ್ರಮಾಂಕವಿರದೇ ಅಥವಾ ನಿರ್ಧರಿತ ಕಾರ್ಯಕ್ರಮಗಳೂ ಇರದೇ ಇದ್ದ ಸಂಗತಿಗಳನ್ನು ಗಮನಿಸಿ, ಅದರಲ್ಲೂ ಈ ಪರಿವರ್ತನೀಯ ಕ್ರಾಂತಿಕಾರಕವಾದ ದಿಕ್ಕಿನೆಡೆಗೆ ಯಾವುದೇ ಕಲ್ಪನೆಯೂ ಇರದ ಸಂಗತಿಯನ್ನೂ ಮನಗೊಂಡು, ಅವರನ್ನು ಈ ದಿಕ್ಕಿನತ್ತ ತಿರುಗಿಸುವದಕ್ಕಾಗಿ ಹಾಗೂ ಸುಸಂಘಟಿತವಾದ ಪಥದಲ್ಲಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು; ಮೊದಮೊದಲು ಕೆಲವೇ ಕೆಲವು ಜನರಿದ್ದವರು ಶೀಘ್ರಾತಿ ಶೀಘ್ರದಲ್ಲಿ ಅದರ ಸಂಖ್ಯೆ ಹೆಚ್ಚುತ್ತ ಬಂದಿತು.

*

**ವಂಗ–ಭಂಗ (ಬಂಗಾಲ ವಿಭಜನೆ) ಮತ್ತು ಯುಗಾಂತರ**

ವಂಗ–ಭಂಗದ ಕಾರಣದಿಂದಾಗಿ ಹೊರಹೊಮ್ಮಿದ ಆಕ್ರೋಶವು, ವಿದ್ರೋಹದ ವಿಸ್ಫೋಟವಾಗಿ ಪರಿವರ್ತನಗೊಂಡಿತ್ತು. ಇದು ತೀವ್ರವಾದಿಗಳ ಪಕ್ಷದವರನ್ನು ಮತ್ತು ರಾಷ್ಟ್ರೀಯವಾದಿ ಚಳುವಳಿಯನ್ನು ಗಟ್ಟಿಗೊಳಿಸುವಂತೆ ಪ್ರೇರೇಪಿಸಿತು. ಶ್ರೀ ಅರವಿಂದರ ಚಟುವಟಿಕೆಗಳೂ ಸಹಿತ ಇದೇ ಗತಿಯತ್ತ ಪರಿವರ್ತನಗೊಂಡವು. ಜೊತೆಗೆ ರಹಸ್ಯ ಕಾರ್ಯಾಚರಣೆಯು ಕೊಂಚ ಹಿಂದೆ ಸರಿದು ಅದನ್ನು ಕೇವಲ ಪೂರಕ – ಚಟುವಟಿಕೆಯ ಹಂತದಲ್ಲಿ ನಿಗದಿಗೊಳಿಸಲಾಯಿತು. ಸ್ವದೇಶೀ ಚಳುವಳಿಯ ವಾತಾವರಣವನ್ನು ಶ್ರೀ ಅರವಿಂದರು ಬಳಸಿಕೊಂಡರೂ ಸಹಿತ, ಸ್ವದೇಶೀ ಚಳುವಳಿಯ ಈ

ಕ್ರಿಯೆಗಳನ್ನು ಮುಂದಿನ ದಿನಗಳಲ್ಲಿಯೂ ಜನಪ್ರಿಯಗೊಳಿಸಲು ಹಿಂಸಾತ್ಮಕ ವಿದ್ರೋಹದ ಘಟನೆಗಳೂ ಈ ಅವಧಿಯಲ್ಲಿ ಘಟಿಸಿದವು.

ಮಿಸ್ಟರ್ ಬ್ರೇನ್ ಅವರ ಹೇಳಿಕೆಯ ಪ್ರಕಾರ, ಶ್ರೀ ಅರವಿಂದರು ಪತ್ರಿಕೆಯೊಂದನ್ನು ಪ್ರಾರಂಭಿಸಲು ನಿರ್ಧರಿಸಿದರು. ಈ ಪತ್ರಿಕೆಯೇ "ಯುಗಾಂತರ". ಇದು ನೇರಾನೇರವಾಗಿ ವಿದ್ರೋಹಕ್ಕೆ ಕರೆಕೊಟ್ಟು, ಬ್ರಿಟೀಶ ಆಡಳಿತವನ್ನು ಸಂಪೂರ್ಣ ತಿರಸ್ಕರಿಸುವ ಉದ್ದೇಶದ ಲೇಖನಗಳನ್ನೇ ಗೆರಿಲ್ಲಾ ಮಾದರಿಯ (ಛದ್ಮಯುದ್ಧದ ಮಾದರಿ) ರೀತಿಯಲ್ಲಿಯೇ ಪ್ರತಿಭಟನೆಗೆ ಆಹ್ವಾನ ನೀಡುವ ಲೇಖನಗಳಿಂದಲೇ ಕೂಡಿತ್ತು. ಪ್ರಾರಂಭದ ಹಂತದಲ್ಲಿ ಬಹುತೇಕ ಲೇಖನಗಳನ್ನು ಶ್ರೀ ಅರವಿಂದರೇ ಬರೆಯುತ್ತಿದ್ದರು. ಅದಕ್ಕಿಂತ ಮುಖ್ಯವಾಗಿ ಪತ್ರಿಕೆಯ ಮೇಲೆ ಅವರದೇ ಆದ ಒಂದು ನಿಯಂತ್ರಣವನ್ನು ಹೊಂದಿದ್ದರು. ಪತ್ರಿಕೆಯ ಉಪಸಂಪಾದಕ ಮಂಡಳಿಯಲ್ಲಿ ಇದ್ದ ಸ್ವಾಮಿ ವಿವೇಕಾನಂದರ ಸೋದರನು ಸ್ವಯಂಪ್ರೇರಿತನಾಗಿ ತಾನೇ ಪತ್ರಿಕೆಯ ಲೇಖನಗಳಿಗೆ ಹೊಣೆಗಾರನಾದ ಸಂಪಾದಕನೆಂದು ಸ್ವಯಂ ಘೋಷಿಸಿಕೊಂಡು ಬಂಧನಕ್ಕೂ ಒಳಗಾಗಿದ್ದರು. ಆಗ ಶ್ರೀ ಅರವಿಂದರ ಆದೇಶದಂತೆ, ಬ್ರಿಟೀಷ ನ್ಯಾಯಾಲಯಗಳನ್ನು ಬಹಿಷ್ಕರಿಸುವ ಹಾಗೂ ಬ್ರಿಟೀಷ ಆಡಳಿತವನ್ನು ಸಂಪೂರ್ಣವಾಗಿ ನಿರಾಕರಿಸುವ ವಿಷಯಗಳನ್ನು ಒಳಗೊಂಡ ಲೇಖನಗಳೇ ಅಲ್ಲಿ ಪ್ರಕಟಗೊಳ್ಳುತ್ತಿದ್ದವು. ಅದರಲ್ಲೂ ಬ್ರಿಟೀಷ ನ್ಯಾಯಾಲಯದಲ್ಲಿ, ವಿದೇಶಿ ಸರಕಾರವನ್ನು ಸಮರ್ಥಿಸುತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಈ ಪತ್ರಿಕೆ ಹೊಂದಿರುವದು ಮನವರಿಕೆಯಾದದ್ದರಿಂದ, ಓದುಗರಲ್ಲಿ ಈ ಪತ್ರಿಕೆಯ ಬಗೆಗೆ ಘನತೆ ಹೆಚ್ಚಿತ್ತು. ಪತ್ರಿಕೆಯ ಪ್ರಚಾರವೂ ಸಹಿತ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಬಂದಿತು. ಅದರ ಲೇಖಕರ ಬಳಗದಲ್ಲಿ ಅದರಲ್ಲೂ ಪ್ರಧಾನ ಲೇಖಕರ ಹಾಗೂ ನಿರ್ದೇಶಕರ ಸ್ಥಾನದಲ್ಲಿ ಆ ಅವಧಿಯಲ್ಲಿ ಬಂಗಾಲದಲ್ಲೆಲ್ಲ ಪ್ರಸಿದ್ಧರಾದ ಸಾಮರ್ಥ್ಯಶಾಲಿಯಾದ ಮೂವರು ಯುವ ಬರಹಗಾರರು ಇದ್ದರು. ಹೀಗಾಗಿ ಈ ಪತ್ರಿಕೆಯು ಬಂಗಾಲದಲ್ಲೆಲ್ಲ ತುಂಬ ಪ್ರಭಾವಕಾರಿಯಾಗಿಯೇ ಪ್ರಚಾರದಲ್ಲಿತ್ತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಈ "ರಹಸ್ಯ ಸಂಸ್ಥೆಯ"ಯು ಎಂದಿಗೂ ಭಯೋತ್ಪಾದನೆಯನ್ನಾಗಲೀ ಅಥವಾ ಉಗ್ರಗಾಮೀ ಧೋರಣೆಯನ್ನಾಗಲೀ ತನ್ನ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಿಲ್ಲ. ಆದರೆ ಅಂತಹ ಅಂಶ ಮಾತ್ರ ಬಂಗಾಲದಲ್ಲಿ ಬೇರೊಂದು ರೂಪದಲ್ಲಿ ಪ್ರಗತಿ

ಕಾಣುತ್ತ ಬಂದಿತು. ಅದು ಆ ಪ್ರಾಂತ್ಯದ ಭಾಗದಲ್ಲಿಯೇ ಬಲವಾದ ವಿರೋಧವನ್ನೂ ಹಾಗೂ ಪ್ರತಿಕ್ರಿಯೆಗಳಿಗೂ ಕಾರಣವಾಯಿತು.

*

**ಇಂದು ಪ್ರಕಾಶ**

"ಇಂದು ಪ್ರಕಾಶ" ಪತ್ರಿಕೆಯ ಲೇಖನಗಳನ್ನು ಬರೆಯುವ ಮೂಲಕ ಶ್ರೀ ಅರವಿಂದರು ತಮ್ಮ ಸಾರ್ವಜನಿಕ ಜೀವನ ವಿಧಾನವು ಪ್ರಾರಂಭಗೊಂಡಿತು. ಈ ಪತ್ರಿಕೆಯಲ್ಲಿ ಲೇಖನಗಳನ್ನು ಶ್ರೀ ಕೆ. ಜಿ. ದೇಶಪಾಂಡೆಯವರು ಸಂಪಾದಕರಾಗಿದ್ದಾಗ ಬರೆಯಲ್ಪಟ್ಟವೆ. ಶ್ರೀ ಅರವಿಂದರು ಕೆಂಬ್ರಿಜ್‌ನಲ್ಲಿ ಇದ್ದಾಗ ಶ್ರೀ ದೇಶಪಾಂಡೆಯವರು ಸ್ನೇಹಿತರಾಗಿದ್ದರು. "ಪುರಾತನಕ್ಕೆ ನೂತನ ಜ್ಯೋತಿಗಳು" (New lamps for Old) ಎನ್ನುವ ಶಿರೋನಾಮೆಯಲ್ಲಿನ ಲೇಖನಗಳು ಆಗಿನ ಕಾಂಗ್ರೆಸ್ ಪಕ್ಷದ ಯಾಚನಾ ಸದೃಶದ (ಪ್ರಾರ್ಥನೆಯ ರೀತಿಯಲ್ಲಿ) ವಿಧಾನವನ್ನು ಹಾಗೂ ಅವರು ಅನುಸರಿಸುತ್ತಿದ್ದ ವಿರೋಧದ ನೀತಿಯನ್ನು ಕಡೆಗಣಿಸಲಾಗಿತ್ತು. ಅದರ ಬದಲಾಗಿ, ಸ್ಫೂರ್ತಿದಾಯಕವಾದ ನೇತೃತ್ವವೊಂದನ್ನು, ಸ್ವ–ಸಹಾಯ ಹಾಗೂ ನಿರ್ಭಯತಾ ಮನೋಭಾವದಿಂದ ಇರುವಂತೆ ರೂಪಣೆಗೊಳಿಸಲು ಯೋಜಿಸಲಾಗಿತ್ತು. ಆದರೆ ಈ ರೀತಿಯ ಮುಕ್ತ ಅಭಿಪ್ರಾಯ ಹಾಗೂ ಅಖಂಡನೀಯವಾದ ಟೀಕೆಗಳು ಕಾಂಗ್ರೆಸ್ಸಿನ ಉದಾರವಾದೀ ನಾಯಕರಿಂದ ತಿರಸ್ಕರಿಸಲ್ಪಟ್ಟದ್ದೂ ಅಲ್ಲದೇ ಆ ನಾಯಕರಿಂದ ಪತ್ರಿಕೆಯ ಸಂಪಾದಕರನ್ನು ಬೆದರಿಸುವ ಹಂತಕ್ಕೂ ತಲುಪಿತ್ತು. ಆ ಮೂಲಕ ಪತ್ರಿಕೆಯು ಇಂತಹ ಅಭಿಪ್ರಾಯಗಳನ್ನು ಪ್ರಕಟಿಸುವದನ್ನು ತಡೆ ಹಿಡಿಯುವ ಕ್ರಿಯೆಯೂ ಜರುಗಿತು. ಹೀಗಾಗಿ ಸಂಪಾದಕರು ಪತ್ರಿಕೆಯ ಮೊದಲಿನ ಧೋರಣೆಯಿಂದ ಬದಲಾಗಿ, ಸರ್ವೇ ಸಾಮಾನ್ಯ ಸಂಗತಿಗಳಾದ ಆದರೆ ಅಷ್ಟೇ ಅವಶ್ಯಕವಾದ ಕಾಂಗ್ರೆಸ್ಸಿನ ಈ ಬೂರ್ಜ್ವಾ ನೀತಿ ಹಾಗೂ ಮಧ್ಯಮ ವರ್ಗದ ಮಾದರಿ (ಮಂದಗಾಮೀ ವಿಚಾರಧಾರೆಯ) ಆಚೆ ವಿಸ್ತರಿಸುವ ಹಾಗೂ ಅದನ್ನೇ ಜನತೆಗೆ ತಿಳಿಸಿಕೊಡುವ ಕಾರ್ಯಕ್ಕೆ ತೊಡಗಿಸಿಕೊಂಡಿತು.

ಅಂತಿಮವಾಗಿ ಶ್ರೀ ಅರವಿಂದರು ಈ ರೀತಿಯ ಸಾರ್ವಜನಿಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸಿದರು. 1905ರವರೆಗೂ ರಹಸ್ಯವಾಗಿಯೇ ಕಾರ್ಯ ನಿರ್ವಹಿಸಿದ್ದರು. ಈ ಮಧ್ಯದಲ್ಲಿ ಶ್ರೀ ಅರವಿಂದರು

ಲೋಕಮಾನ್ಯ ತಿಲಕರನ್ನು ಸಂಪರ್ಕಿಸಿದ್ದರು. ಏಕೆಂದರೆ ಭಾರತದ ಈ ಪರಿವರ್ತನಾಶೀಲ ಪಕ್ಷಕ್ಕೆ ಓರ್ವ ಸಮರ್ಥನಾದ ನಾಯಕರೆಂದು ತಿಲಕರನ್ನು ಗೌರವಿಸುತ್ತಿದ್ದರು. ಅಹಮದಾಬಾದ್ ಕಾಂಗ್ರೆಸ್ ಸಭೆಯ ಅವಧಿಯಲ್ಲಿ ಅವರನ್ನು ಭೇಟಿಯಾಗಿದ್ದರು. ಸಭೆ ನಡೆದ ಸಭಾಂಗಣದಿಂದ ತಿಲಕರು ಶ್ರೀ ಅರವಿಂದರನ್ನು ಹೊರಗೆ ಕರೆದೊಯ್ದು, ಅವರ ಸುಧಾರಣಾವಾದಿ ಚಳುವಳಿಯ ಕುರಿತು ಮತ್ತು ಅವರದೇ ವಿನ್ಯಾಸದಲ್ಲಿ ಮಹಾರಾಷ್ಟ್ರದಲ್ಲಿ ನಡೆದ ವಿದ್ಯಮಾನಗಳ ಕುರಿತೂ ಒಂದು ತಾಸಿಗೂ ಹೆಚ್ಚು ಕಾಲ ಮಾತನಾಡಿದ್ದರು.

*

## ಸ್ವದೇಶೀ ಮತ್ತು ಸ್ವರಾಜ್ಯ

ಶ್ರೀ ಅರವಿಂದರು ಯೋಜಿಸಿದ್ದ ಈ ಪರಿವರ್ತನಾಶೀಲ ಕರ್ತವ್ಯವು ಹಾಗೂ ಅದರ ಚಟುವಟಿಕೆಗಳು, ನಂತರದಲ್ಲಿ ರಾಷ್ಟ್ರೀಯವಾದೀ ಪಕ್ಷದಲ್ಲಿ ಒಂದು ಪ್ರಮುಖ ನೀತಿಯಾಗಿ ಸ್ಥಾನ ಪಡೆದುಕೊಂಡವು. ಶ್ರೀ ಅರವಿಂದರು ಯುವ ಸಮುದಾಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ, ಆಯಾ ಶಾಖೆಗಳಲ್ಲಿ/ಕೇಂದ್ರಗಳಲ್ಲಿ ಸ್ವದೇಶೀ ಚಿಂತನದ ಪ್ರಚಾರಕ್ಕೆ ತೊಡಗುವಂತೆ ಪ್ರಯತ್ನಿಸಿದ್ದರು. ಆ ಸಂದರ್ಭದಲ್ಲಿ ಈ ಸ್ವದೇಶೀ ಚಿಂತನವು ಇನ್ನೂ ಶೈಶವಾವಸ್ಥೆಯಲ್ಲಿಯೇ ಇದ್ದಿತ್ತು. ಕೆಲವೇ ಕೆಲವು ಆಸಕ್ತರ ಒಲವಿನ ವಿಷಯವಾಗಿತ್ತು. ಇವರ ಪೈಕಿ ಸಾಮರ್ಥ್ಯಶಾಲಿಯಾದ ಓರ್ವ ವ್ಯಕ್ತಿ ಮಾರಾಠಾ ಆಗಿದ್ದು, ಅವನ ಹೆಸರು ಸಖಾರಾಮ ಗಣೇಶ ದೇವುಸ್ಕರ ಆಗಿತ್ತು. (ಅವರ ಪೂರ್ವಜರು ತುಂಬ ತುಂಬ ಹಿಂದೆ ಬಂಗಾಲಕ್ಕೆ ವಲಸೆ ಬಂದಿದ್ದರು). ಇವರು ಶಿವಾಜಿಯ ಚರಿತ್ರೆಯನ್ನು ಬಂಗಾಲ ಭಾಷೆಯಲ್ಲಿ ಬರೆದಿದ್ದರು. ಅದರಲ್ಲಿ ಪ್ರಪ್ರಥಮವಾಗಿ ಈ “ಸ್ವರಾಜ್” ಎನ್ನುವ ಪದದ ಬಳಕೆಯನ್ನು ಲೇಖಿಸಿದ್ದರು. ತದನಂತರದಲ್ಲಿ ಇದನ್ನೇ ರಾಷ್ಟ್ರೀಯವಾದಿಗಳೂ ತಮ್ಮ ಸ್ವಾತಂತ್ರ್ಯದ ಹೋರಾಟಕ್ಕೆ ಅಳವಡಿಸಿಕೊಂಡರು. ಹೀಗಾಗಿ “ಸ್ವರಾಜ್” ಎನ್ನುವದು ರಾಷ್ಟ್ರೀಯ ಕರ್ತವ್ಯಗಳಲ್ಲಿ ಚತುರ್ಮುಖ ಆಯಾಮ ಹೊಂದಿದ ಸಂಸ್ಥೆಯ “ಧ್ಯೇಯ”ವೂ ಆಯಿತು.

ಅವರೇ “ದೇಶರ್ ಕಥಾ” ಎನ್ನುವ ಪುಸ್ತಕವೊಂದನ್ನು ಪ್ರಕಾಶನಗೊಳಿಸಿದ್ದರು. ಅದರಲ್ಲಿ ಬ್ರಿಟೀಷರು ನಡೆಸಿದ ಭಾರತದ ವಾಣಿಜ್ಯ ಹಾಗೂ ಉದ್ಯಮದ ಶೋಷಣೆಯನ್ನು ಕುರಿತೇ ಬರೆದಿದ್ದರು. ಈ ಪುಸ್ತಕವಂತೂ ಬಂಗಾಲದಾದ್ಯಂತ

ಮನೆಮನೆಯಲ್ಲಿಯೂ ಬ್ರಿಟೀಷ ನೀತಿಯ ಕುರಿತು ಪ್ರತಿಭಟನಾ ಭಾವವನ್ನು ಹೆಚ್ಚಿಸಿತ್ತು. ಅದಕ್ಕಿಂತ ಹೆಚ್ಚಾಗಿ ಈ ಸ್ವದೇಶಿ ಚಳುವಳಿಗೆ ಸಹಾಯ ಮಾಡಲು, ಏನನ್ನಾದರೂ ಮಾಡಲು ಸಮುದಾಯವನ್ನು ಜಾಗೃತಿಗೊಳಿಸಿತ್ತು. ಸ್ವತಃ ಶ್ರೀ ಅರವಿಂದರೇ ದೇಶದ ಮೇಲೆ ಹೇರಿರುವ ಈ ವಿದೇಶಿ ಆರ್ಥಿಕ ನೀತಿಯ ನೊಗಭಾರವನ್ನು ಕಳಚುವ ದಿಸೆಯಲ್ಲಿಯೇ ಮಗ್ನರಾಗಿದ್ದರು. ಆ ಮೂಲಕ ಭಾರತದ ವಾಣಿಜ್ಯ, ವ್ಯಾಪಾರ, ಹಾಗೂ ಉದ್ದಿಮೆಗಳನ್ನು ಅಭಿವೃದ್ಧಿ ಪಡಿಸುವ ಈ ರೀತಿಯ ಪರಿವರ್ತನ ನೀತಿಗೆ ಇದೊಂದು ಅನುಷಂಗಿಕವಾದ ಸಂಗತಿಯನ್ನಾಗಿಸಲು ಪ್ರಯತ್ನಿಸಿದ್ದರು.

*

**ಜಾಗೃತಿ**

ಅತ್ಯಂತ ಕಡಿಮೆ ಅವಧಿಯಲ್ಲಿಯೇ ಶ್ರೀ ಅರವಿಂದರು ಭಾರತದ ರಾಜಕಾರಣದ ರಂಗದಲ್ಲಿ ತುಂಬ ಪ್ರಭಾವಶಾಲಿಯಾಗಿಯೇ ಗುರುತಿಸಲ್ಪಟ್ಟಿದ್ದಾರೆ. ಹೀಗಿದ್ದರೂ 1910ರಲ್ಲಿ ಈ ಎಲ್ಲ ರಾಜಕೀಯ ಚಟುವಟಿಕೆಗಳಿಂದ ತಮ್ಮನ್ನು ಸಂಪೂರ್ಣವಾಗಿ ದೂರಗೊಳಿಸಿಕೊಂಡು, 1910ರಲ್ಲಿ ಪಾಂಡಿಚೇರಿಗೆ ಬಂದಿದ್ದರು. ಅವರ ಹಾಜರಾತಿಯಿಲ್ಲದೇ ಇದ್ದದ್ದರಿಂದಾಗಿ ಅವರು ರೂಪಿಸಿದ್ದ ಅದೆಷ್ಟೋ ಕಾರ್ಯಗಳು ಈಡೇರಲೇ ಇಲ್ಲ. ಆದರೆ ಭಾರತದ ರಾಜಕಾರಣವನ್ನೇ ದಿಕ್ಕನ್ನೇ ಬದಲಿಸುವ ಹಾಗೂ ಭಾರತದ ಜನ ಸಮುದಾಯದಲ್ಲಿ ಶಕ್ತಿ ತುಂಬುವ ಮೂಲಕ ಪರಿವರ್ತನೆಯನ್ನು ತರುವಲ್ಲಿ ಬೇಕಾದಷ್ಟು ಪರಿಕರಗಳನ್ನು ಒದಗಿಸಿತ್ತು. ಈ ಮೂಲಕ ಇಡೀ ಭಾರತವೇ "ಸ್ವಾತಂತ್ರ್ಯವೇ ತಮ್ಮ ಗುರಿ" ಎನ್ನುವ ಹಂತಕ್ಕೆ ತಲುಪಿತ್ತು. ಅಸಹಕಾರ ಹಾಗು ಪ್ರತಿರೋಧವೆ ಅದರ ವಿಧಾನವೆನ್ನುವ ಭಾವವೂ ಜನಜನಿತವಾಗಿತ್ತು. ಅದೂ ಅಲ್ಲದೇ ಈ ಅಪಕ್ವ ರೀತಿಯಲ್ಲಿಯೇ ಅದರ ಅನ್ವಯವೂ ಕೂಡ ವಿದ್ರೋಹದ/ವಿಸ್ಫೋಟದ ಸಣ್ಣ ಸಣ್ಣ ಘಟನೆಗಳಲ್ಲಿ, ಇವೂ ಸಹಿತ ಸ್ವಾತಂತ್ರ್ಯ ಕಡೆಗೆ ಸಾಗುವತ್ತ ಬೇಕಾದಷ್ಟು ಸಮರ್ಥನೆಯನ್ನೂ ಒದಗಿಸಿದವು.

ಶ್ರೀ ಅರವಿಂದರ ಚಿಂತನಾ ಮಾರ್ಗದಲ್ಲಿಯೇ ಮುಂದಿನ ದಿನಗಳ ಘಟನಾವಳಿಗಳು ದೊಡ್ಡ ಪ್ರಮಾಣದಲ್ಲಿಯೇ ಘಟಿಸಲ್ಪಟ್ಟವು. ಅಂತಿಮವಾಗಿ, ಭಾರತದ ಕಾಂಗ್ರೆಸ್ ಪಕ್ಷವೂ ಸಹಿತ ಈ "ರಾಷ್ಟ್ರೀಯವಾದೀ ಪಕ್ಷದಿಂದ"

ವಶಪಡಿಸಿಕೊಳ್ಳಲ್ಪಟ್ಟಿತು. ಆ ಮೂಲಕ "ಸ್ವಾತಂತ್ರ್ಯ ನಮ್ಮ ಹಕ್ಕು" ಎನ್ನುವ ಭಾವದಿಂದಾಗಿ, ಅದರ ಸಲುವಾಗಿ ಕಾರ್ಯಕ್ಕಿಳಿಯಲು ಸುಸಂಘಟಿತರಾಗಿ ಇಡೀ ಭಾರತದ ಜನತೆಯೇ ಒಳಗೊಳ್ಳುವಂತಾಯಿತು. ಆದರೆ, ಕೆಲವೇ ಕೆಲವು ಮಹಮ್ಮದೀಯರಿಂದಾಗಿ ಹಾಗೂ ತುಳಿತಕ್ಕೊಳಗಾದ ಕೆಲವು ವರ್ಗಗಳ ನಾಯಕರು ಇದನ್ನು ಒಪ್ಪಿಕೊಳ್ಳದೇ ಹೋದದ್ದೂ ಇದೆ. ಈ ಮಧ್ಯದಲ್ಲಿಯೇ ಪ್ರಪ್ರಥಮವಾಗಿ ಒಂದು ರಾಷ್ಟ್ರೀಯ ಸರಕಾರ – ಅದು ಸ್ವತಂತ್ರವಲ್ಲದಿದ್ದರು ಸಹಿತವೊಂದನ್ನು ಭಾರತದಲ್ಲಿ ಸ್ಥಾಪಿಸಲಾಯಿತು. ಹಾಗೂ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುವ ಸಲುವಾಗಿ ಭಾರತಕ್ಕೆ ಭರವಸೆಯೂ ಮೂಡುವಂತಾಯಿತು.

ಈ ಮೊದಲೇ ನೋಡಿದಂತೆ, ಶ್ರೀ ಅರವಿಂದರು ನೇಪಥ್ಯದಲ್ಲಿಯೇ ಇದ್ದು, ಕಾಂಗ್ರೆಸ್ ಪಕ್ಷದ ರಾಜಕೀಯ ವಿಷಯದಲ್ಲಿ ಭಾಗಿಯಾಗಿದ್ದರು. ಬಡೋದಾ ಸಂಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದ ಕಾರ್ಯವನ್ನು ತ್ಯಜಿಸುವ ಯೊಚನೆಯೂ ಆಗ ಅವರಿಗೆ ಇರಲಿಲ್ಲ. ಅದರ ಬಗೆಗೆ ನಿರ್ಧಾರವನ್ನೂ ಮಾಡಿರಲಿಲ್ಲ. ಆದಾಗ್ಯೂ ವೇತನರಹಿತವಾದ ದೀರ್ಘಾವಧಿ ರಜೆಯನ್ನು ಅವರು ತೆಗೆದುಕೊಂಡಿದ್ದರು. ಏಕೆಂದರೆ ತಮ್ಮ ಚಿಂತನದ ಕಾರ್ಯಗಳನ್ನು ರಹಸ್ಯವಾಗಿಯೇ ಅನುಷ್ಠಾನಿಸಲು ಅವರು ನಿಶ್ಚಯಿಸಿದ್ದರು. ಈ ಹಿನ್ನೆಲೆಯಲ್ಲಿ ಬಾರಿಸಾಲ್ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆದರೆ ಆ ಸಮ್ಮೇಳನವನ್ನು ಪೊಲೀಸರು ತಡೆಹಿಡಿದಿದ್ದರು. ನಂತರ ಅಲ್ಲಿಂದ ಪೂರ್ವ ಬಂಗಾಲಕ್ಕೆ ಹೋಗಿದ್ದರು. ಅವರ ಸಂಗಡ ಅವರ ಆತ್ಮೀಯರಾಗಿ ಸಹವರ್ತಿಯಾದ ಬಿಪಿನ್ ಪಾಲರೊಡನೆ ಕಾಂಗ್ರೆಸ್ಸಿನ ತೀವ್ರಗಾಮೀ ಪಂಗಡದೊಂದಿಗೆ ಸಕ್ರಿಯರಾಗಿದ್ದರು.ಬಇದೇ ಅವಧಿಯಲ್ಲಿ "ವಂದೇ ಮಾತರಂ"(ಪತ್ರಿಕೆ)ಯನ್ನು ಸಂಪಾದಿಸುವ ಕಾರ್ಯದಲ್ಲಿ ಅವರೊಡನೆ ಸಹವರ್ತಿಯಾಗಿ ಕಾರ್ಯ ನಿರ್ವಹಿಸಿದರು. ಬಂಗಾಲದಲ್ಲಿ ಸ್ಥಾಪನೆಗೊಂಡ ಹೊಸ ಪಕ್ಷ(ಸಂಘಟನೆ)ವೊಂದರಲ್ಲಿಯೂ ಸಕ್ರಿಯರಾಗಿ ಭಾಗವಹಿಸಿದರು. ಕಲಕತ್ತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ – ಅದೂ ಕೇವಲ ತೀವ್ರಗಾಮೀ ಅನುಯಾಯಿಗಳ ಸಮ್ಮೇಳನಕ್ಕೆ – ಭಾಗವಹಿಸಿದ್ದರು. ಈ ತೀವ್ರಗಾಮೀ ಯೋಚನಾ ಲಹರಿಯ ಸದಸ್ಯರ ಸಂಖ್ಯೆ ಅಷ್ಟೇನೂ ದೊಡ್ಡದೂ ಇರಲಿಲ್ಲ. ಅಲ್ಪ ಸಂಖ್ಯೆಯಲ್ಲಿಯೇ ಇದ್ದರೂ ಸಹಿತ, ತಿಲಕರ ಮುಖಂಡತ್ವದಲ್ಲಿ ಅತ್ಯಂತ ಯಶಸ್ವಿಯಾಗಿಯೇ ಮುಂದುವರೆದಿತ್ತು. ತಿಲಕರು ಕಾಂಗ್ರೆಸ್ಸಿನಲ್ಲಿ ಇದ್ದರೂ ಸಹಿತ

ಈ "ಚಿಂತನವನ್ನು" ತಮ್ಮ ರಾಜಕೀಯ ಚಿಂತನದ ಭಾಗವೆಂದೇ ಅಳವಡಿಸಿಕೊಂಡು ಅನುಷ್ಠಾನಕ್ಕೆ ತಂದಿದ್ದರು.

*

**ರಾಷ್ಟ್ರೀಯ ಶಿಕ್ಷಣದ ಬೀಜಗಳು ಮತ್ತು "ವಂದೇ ಮಾತರಂ"**

ಬಂಗಾಲ ನ್ಯಾಶನಲ್ ಕಾಲೇಜು ಸ್ಥಾಪನೆಯಾಗಿದ್ದರಿಂದ, ಅವರು (ಶ್ರೀ ಅರವಿಂದರು) ಆಶಿಸುತ್ತಿದ್ದ ಅವಕಾಶವೂ ದೊರೆತು, ಬಡೋದಾ ಸಂಸ್ಥಾನದಲ್ಲಿ ನಿರ್ವಹಿಸುತ್ತಿದ್ದ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿ, ಈ ಕಾಲೇಜಿನ ಪ್ರಾಚಾರ್ಯರಾಗಿ ಕಾರ್ಯವನ್ನು ಪ್ರಾರಂಭಿಸಿದರು. ಶ್ರೀ ಅರವಿಂದರ ರಹಸ್ಯ ಕಾರ್ಯಾಚರಣೆಯಲ್ಲಿ ಸಹಭಾಗಿಯಾಗಿದ್ದ ಸುಬೋಧ ಮಲ್ಲಿಕ್ ತದನಂತರದಲ್ಲೂ ಸಹಿತ ಕಾಂಗ್ರೆಸ್ಸಿನಲ್ಲಿಯೇ ಮುಂದುವರೆದಿದ್ದರು. ಕಲಕತ್ತೆಯಲ್ಲಿ ಇದ್ದಾಗ ಶ್ರೀ ಅರವಿಂದರು ಇವರ ಮನೆಯಲ್ಲಿಯೇ ವಾಸಿಸುತ್ತಿದ್ದರು. ಅದೂ ಅಲ್ಲದೇ ಈ ಸಂಸ್ಥೆಗೆ ಒಂದು ಲಕ್ಷ ರೂಪಾಯಿ ದೇಣಿಗೆಯನ್ನೂ ಮಲ್ಲಿಕ್ ನೀಡಿದ್ದರು. ಜೊತೆಗೆ ಮಾಸಿಕ ರೂ. 250/–ರಂತೆ ಶ್ರೀ ಅರವಿಂದರಿಗೆ ವೇತನ ನಿಗದಿಗೊಳಿಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗುವಂತೆಯೂ ಯೋಜಿಸಿದ್ದರು. ಹೀಗಾಗಿ ಶ್ರೀ ಅರವಿಂದರಿಗೆ ತಮ್ಮ ಎಲ್ಲ ಸಮಯವನ್ನೂ ದೇಶಕ್ಕಾಗಿ ಮೀಸಲಿಡಲು ಸಾಧ್ಯವಿಲ್ಲವಾಗಿತ್ತು.

'ಸ್ವ–ಸಹಾಯ' ನೀತಿಯನ್ನು ಹಾಗೂ ಅಸಹಕಾರ ಚಳುವಳಿಯ ರೂಪುರೇಷೆಗಳನ್ನು ಅತ್ಯಂತ ಯಶಸ್ವಿಯಾಗಿ ರೂಪುಗೊಳಿಸಿದ್ದ ವ್ಯಕ್ತಿ ಎಂದರೆ ಬಿಪಿನಪಾಲ ಅವರು. ಅವರ ಸಾಪ್ತಾಹಿಕ ಪತ್ರಿಕೆಯಲ್ಲಿ ಈ ವಿಷಯವನ್ನು ವಿಷದವಾಗಿ ಚರ್ಚಿಸಿದ್ದರು. ಈ ಅವಧಿಯಲ್ಲಿ ದಿನಪತ್ರಿಕೆಯನ್ನು ಪ್ರಾರಂಭಿಸಿದ್ದರು, ಅದರ ಹೆಸರೇ "ವಂದೇ ಮಾತರಂ". ಆದರೆ ಇದು ಕೇವಲ ಐದು ನೂರು ರೂಪಾಯಿ ಬಂಡವಾಳದಲ್ಲಿ ಪ್ರಾರಂಭಗೊಂಡಿತ್ತು. ಇದು ಅತ್ಯಂತ ಚಿಕ್ಕ ಸಾಹಸದಂತೆ ಆಗಿತ್ತು. ಅದಕ್ಕೆ ಹಣಕಾಸಿನ ನೆರವು ದೊರೆಯುತ್ತದೆ ಎನ್ನುವದರ ಬಗೆಗೆ ಯಾವುದೇ ಭರವಸೆಯೂ ಇರಲಿಲ್ಲ. ಇಂತಹ ಸಂಧರ್ಭದಲ್ಲಿ ಶ್ರೀ ಅರವಿಂದರನ್ನು ಈ ಸಾಹಸದ ಜೊತೆಗೆ ಸಹಕಾರಿಯಾಗಲು ಕೇಳಿಕೊಂಡು ಅದಕ್ಕೆ ಅವರ ಒಪ್ಪಿಗೆಯನ್ನೂ ತಕ್ಷಣವೇ ಪಡೆದುಕೊಂಡಿದ್ದರು. ಈ ಮೂಲಕ ಸಾರ್ವಜನಿಕರಲ್ಲಿ ತಮ್ಮ "ಪರಿವರ್ತನಾಶೀಲ ಚಿಂತನ"ಗಳನ್ನು ಪ್ರಚಾರಗೊಳಿಸಲು

ಇರುವ ಅವಕಾಶವನ್ನು ಶ್ರೀ ಅರವಿಂದರು ಕಂಡುಕೊಂಡಿದ್ದರು. ಅದರ ಸಲುವಾಗಿ, ಕಾಂಗ್ರೆಸ್ಸಿನಲ್ಲಿ ಇದ್ದ ಪ್ರಗತಿಪರ ಗುಂಪಿನ ಯುವಕರ ಸಭೆಯೊಂದನ್ನು ಆಯೋಜಿಸಿದ್ದರು. ಅವರು ತಮ್ಮದೇ ಆದ ಒಂದು ನೂತನ ಪಕ್ಷವೊಂದನ್ನು ರೂಪಿಸಲು ನಿರ್ಧರಿಸಿಕೊಂಡು, ಜೊತೆಗೆ ಅದೇ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಹಾರಾಷ್ಟ್ರ ಪಂಗಡವು ತಿಲಕರ ಮುಖಂಡತ್ವವನ್ನು ಒಪ್ಪಿಕೊಂಡು ಆ ರೀತಿಯಲ್ಲಿ ಉದ್ಘೋಷಿಸಿಕೊಂಡಿತ್ತು. ಜೊತೆಗೆ ಅವರ ಮುಂದಾಳ್ತನದಲ್ಲಿಯೇ ಮೂಲ ಪಕ್ಷದಲ್ಲಿರುವ ಮಂದಗಾಮೀ ನೀತಿಯ ಪಕ್ಷದ ಧೋರಣೆಯ ವಿರುದ್ಧ ಹೋರಾಟಕ್ಕೆ ಇಳಿಯಲು ನಿರ್ಧರಿಸಿದ್ದರು. ಇದೆಲ್ಲವೂ ನಡೆದಿದ್ದು ಕಲಕತ್ತಾ ಸಭಾ ಅವಧಿಯಲ್ಲಿಯೇ. ಅದೂ ಅಲ್ಲದೇ "ವಂದೇ ಮಾತರಂ" ಪತ್ರಿಕೆಯನ್ನು ಆ ಪಕ್ಷದ ಮುಖ್ಯ ಅಂಗವೆಂದು ನಿರ್ಣಯಿಸಿ "ವಂದೇ ಮಾತರಂ ಕಂಪನಿ"ಯನ್ನು ಸ್ಥಾಪಿಸಲಾಯಿತು. ಈ ಮೂಲಕ ಪತ್ರಿಕೆಗೆ ಧನ ಸಹಾಯ ಒದಗಿಸುವ ಏರ್ಪಾಟು ಮಾಡಲಾಯಿತು. ಇವೆಲ್ಲ ಘಟನೆಗಳಿಂದಾಗಿ ಜಿಲ್ಲೆಯಾದ್ಯಂತವೂ ಹೊಸ ಪಕ್ಷದ ಕುರಿತು ಉದ್ಘೋಷ ಮಾಡುವಲ್ಲಿ ಪ್ರವಾಸದಲ್ಲಿದ್ದ ಬಿಪಿನಪಾಲರ ನಿರ್ದೇಶನದಂತೆ ಶ್ರೀ ಅರವಿಂದರು ನಿರ್ವಹಿಸಿದ್ದರು. ಈ ಹೊಸ ಪಕ್ಷವು ಅತ್ಯಂತ ಯಶಸ್ವಿಯಾಗಿ ಮುಂದುವರೆಯಿತು. ಮತ್ತು ಜೊತೆಗೆ 'ವಂದೇ ಮಾತರಂ" ಪತ್ರಿಕೆಯೂ ಕೂಡಾ ದೇಶದಾದ್ಯಂತ ಲಭ್ಯವಾಗತೊಡಗಿತು.

*

## ಪೂರ್ಣ ಸ್ವರಾಜ್ಯ

ಶ್ರೀ ಅರವಿಂದರ ಪೂರ್ವಯೋಜಿತ ಚಿಂತನದ ಪ್ರಕಾರ "ಸಂಪೂರ್ಣ ಸ್ವಾತಂತ್ರ್ಯ"ವೇ ಭಾರತೀಯ ರಾಜಕೀಯ ಪಕ್ಷಗಳ ಹೋರಾಟದ ಗುರಿಯಾಗಬೇಕು ಎನ್ನುವದಾಗಿತ್ತು. ಇದನ್ನು ಪಕ್ಷಗಳು ಮುಕ್ತವಾಗಿ ಘೋಷಿಸಿಕೊಳ್ಳಬೇಕಾದ ಸಂಗತಿಯಾಗಿದೆ ಎನ್ನುವದೂ ಅವರ ಮೂಲ ಧ್ಯೇಯವೂ ಅಷ್ಟೇ ಅಲ್ಲ ಮುಂದಾಲೋಚನೆಯೂ ಆಗಿತ್ತು. ಅದನ್ನೇ ಅವರು ತಮ್ಮ ಪತ್ರಿಕೆ ಅಂಕಣಗಳಲ್ಲಿ ನಿರಂತರವಾಗಿ ಬರೆಯುತ್ತಿದ್ದರು. ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವ ಎಲ್ಲ ರಾಜಕಾರಣಿಗಳಲ್ಲಿ ಇವರು ಮಾತ್ರ ಶೀಘ್ರವೇ ಜನಪ್ರಿಯತೆಯನ್ನು ಗಳಿಸಿದ್ದರು. ಏಕೆಂದರೆ ಇಂತಹ ಹೇಳಿಕೆಗಳನ್ನು

ನಿರ್ಭೀತಿಯಿಂದ ಪ್ರಕಟಿಸುತ್ತಿದ್ದರು. ಹೀಗಾಗಿ ಆ ಪಕ್ಷವೂ ಸಹಿತ ಈ "ಸ್ವರಾಜ್ಯ" ಶಬ್ದವನ್ನು ಸ್ವೀಕರಿಸಿಕೊಂಡು ತನ್ನದೇ ಮಾದರಿಯ ಚಿಂತನಾ ವಿಧಾನಗಳಲ್ಲಿ ಸ್ವಾತಂತ್ರ್ಯದ ಬಗೆಗೆ ಅಭಿವ್ಯಕ್ತಗೊಳಿಸಿಕೊಂಡಿತ್ತು. ಈ ವಿಚಾರವೂ ಸಹಿತ ಅಷ್ಟೇ ತೀವ್ರ ಗತಿಯಲ್ಲಿ ದೇಶಾದ್ಯಂತ ಪ್ರಚುರಗೊಂಡಿತ್ತು. ಆದರೆ ಇದೇ ವಿಷಯವನ್ನು ಕಾಂಗ್ರೆಸ್ ಪಕ್ಷವು ಅದು "ತನ್ನದೇ ವಿಚಾರ ಧಾರೆ" ಎಂದು ರೂಪಿಸಿಕೊಂಡು, ಬಹು ದಿನಗಳ ನಂತರ "ಲಾಹೋರ ಸಮ್ಮೇಳನದಲ್ಲಿ" ರಾಷ್ಟ್ರೀಯ ನಾಯಕತ್ವದಲ್ಲಿ ಪುನರ್–ರಚನೆಗೊಂಡ ಹಾಗೂ ನವೀಕರಣಗೊಂಡ ಆಡಳಿತ ಮಂಡಳಿಯಿಂದ ಅಳವಡಿಸಿಕೊಳ್ಳಲ್ಪಟ್ಟಿತು. ಆದರೆ 'ಪತ್ರಿಕೆ' ಮಾತ್ರ ಒಂದು ನವೀನ ರಾಜಕೀಯ ಯೋಜನೆಯನ್ನು ದೇಶದ ಜನತೆಯ ಮುಂದೆ ಇರಿಸಿತ್ತು. ಇದು ರಾಷ್ಟ್ರೀಯ ಪಕ್ಷದ ಯೋಜನೆಯಾಗಿದ್ದು, ಅಸಹಕಾರ, ಪ್ರತಿರೋಧ, ಸ್ವದೇಶೀ ವಸ್ತುಗಳು, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ನೀತಿ, ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕಾಗಿ ಕಾಯುತ್ತಿರುವ ವಿವಾದಗಳ ಇತ್ಯರ್ಥಕ್ಕೆ ಸ್ಥಳೀಯ ನ್ಯಾಯಾಲಯಗಳ ಸ್ಥಾಪನೆ(ಸ್ಥಾನಿಕ ನ್ಯಾಯಾಲಯಗಳು)ಯ ಮೂಲಕ ನ್ಯಾಯ ನಿರ್ಣಯಗಳೆಲ್ಲ ಶ್ರೀ ಅರವಿಂದರ ಯೋಜನೆಯಲ್ಲಿ ಅಳವಡಿಸಲ್ಪಡಲಾಗಿತ್ತು.

*

**ಬಹಿಷ್ಕಾರದ ನೀತಿ**

ಈ ರಾಷ್ಟ್ರೀಯ ಕಾರ್ಯಕ್ರಮಗಳು(ಯೋಜನೆಗಳು), ಬ್ರಿಟೀಷ ಸರಕಾರದ ದಮನಕಾರೀ ಕ್ರಿಯೆಯಿಂದಾಗಿ ಅದುಮಲ್ಪಡುವ ಮುನ್ನವೇ ಕೆಲವೇ ಕೆಲವು ದಿನಗಳ ಅವಧಿಯಲ್ಲಿ ಆಂಶಿಕವಾಗಿ ಪ್ರಾರಂಭಗೊಂಡಿದ್ದವು. ಈ ಕಾರ್ಯಕ್ರಮದ ಪ್ರಮುಖ ಅಂಶವಾಗಿ ಸ್ವದೇಶೀ ಪ್ರೇಮ ಹಾಗೂ ವಿದೇಶೀ ವಸ್ತುಗಳ ಬಹಿಷ್ಕಾರದ ವಿಷಯವಿತ್ತು. ಸ್ವದೇಶೀ ನೀತಿಯನ್ನು ಜನಪ್ರಿಯಗೊಳಿಸಲು ತುಂಬ ಪ್ರಯಾಸದಿಂದಲೇ, ಅದನ್ನು ಸರಳೀಕರಿಸಿ ಕೆಲವೊಂದು ಪ್ರಾರಂಭಿಕ ಪ್ರಯತ್ನಗಳನ್ನು ಮಾಡಲಾಯಿತು. ಆದರೆ ಅದಕ್ಕೆ ಅಗಾಧ ಬೆಂಬಲ/ಫಲಿತಾಂಶ ಮಾತ್ರ ಸ್ವಲ್ಪ ತಡವಾಗಿ ಬಂದಿತು. ಆದರ ಈ ವಿಷಯವಾಗಿ ಶ್ರೀ ಅರವಿಂದರು ತುಂಬ ಚಿಂತಿತರಾಗಿದ್ದರು. ಏಕೆಂದರೆ ಈ ಅಂಶವು ಕೇವಲ ವೈಚಾರಿಕವಾಗಿ ಮಾತ್ರವೇ ಪ್ರಚಾರ ಪಡೆದುಕೊಳ್ಳುವದಕ್ಕಿಂತ ಅದನ್ನು ಅನುಷ್ಠಾನಿಸುವಲ್ಲಿ ಸಂಘಟನಾತ್ಮಕ ಸಂಸ್ಥೆಗಳ ಪಾತ್ರವೂ ಹಾಗೂ ಅವುಗಳು ಪರಿಣಾಮಕಾರಿಯಾಗಿ ಬಲವನ್ನು ತುಂಬುವ ಸಂಸ್ಥೆಗಳಾಗಬೇಕೆನ್ನುವದು ಅವರ ಹೃದ್ಗತವಾಗಿತ್ತು.

ಬಡೋದೆಯಲ್ಲಿ ಇದ್ದಾಗಲೇ, ಅವರು ಈ ವಿಷಯವಾಗಿ ಉದ್ದಿಮೆದಾರರನ್ನು, ಉತ್ಪಾದಕರಿಂದ ಮತ್ತು ವಾಣಿಜ್ಯ–ವ್ಯವಹಾರಗಳ ಬಲಾಢ್ಯ ಶ್ರೀಮಂತರಿಂದ ಧನ ಸಹಾಯವನ್ನು ಏಕೆ ಪಡೆಯಲಾಗುತ್ತಿಲ್ಲ ಎನ್ನುವದನ್ನು ಪ್ರಶ್ನಿಸಿದ್ದರು. ಆ ಮೂಲಕ ಒಂದು 'ಸ್ವದೇಶಿ' ಸಂಘಟನೆಯ ಮೂಲಕ ಉತ್ಪಾದನೆ ಹಾಗು ವಾಣಿಜ್ಯ ವಿಷಯಗಳ ಅನುಭವವನ್ನು ಬಳಸಿಕೊಂಡು, – ಕೇವಲ ರಾಜಕಾರಣಿಗಳ ಪಾತ್ರವನ್ನಷ್ಟೇ ಅಲ್ಲದೇ ಅವರದೇ ಆದ ಏಕೈಕ ನಿರ್ದೇಶನಾ ವ್ಯವಸ್ಥೆಯೊಂದಿಗೆ, ಹಲವು ವಿಧವಾದ ಮೂಲಗಳಿಂದ ಹೊಸ ಹೊಸ ಮಾರ್ಗಗಳನ್ನು ಅರಸುವ ಯೋಜನೆ ಇದಾಗಿತ್ತು; ಆದರೆ ಇದೆಲ್ಲ ಅಸಾಧ್ಯವಾದ ಮಾತೆಂದು ಅವರಿಗೆ ತಿಳಿಸಲಾಗಿತ್ತು. ಉದ್ದಿಮೆದಾರರಿಗಾಗಲಿ ಅಥವಾ ಬಲಾಢ್ಯ ಜಮೀನುದಾರರಿಗಾಗಲೀ ಬಹುತೇಕವಾಗಿ ಇಂತಹ ಚಳುವಳಿಗಳಲ್ಲಿ ಭಾಗವಹಿಸಲು ಹಿಂಜರಿಕೆ ಇರುತ್ತಿತ್ತು. ಮತ್ತೆ ಮೇಲಾಗಿ ಬೃಹತ್ ವ್ಯವಹಾರದ ಸಮುದಾಯವೂ ಸಹಿತ ಬ್ರಿಟೀಷ ವಸ್ತುಗಳನ್ನು ಆಮದು ಮಾಡಿಕೊಳ್ಳುವದರಲ್ಲಿಯೇ ಹೆಚ್ಚು ಆಸಕ್ತಿಯನ್ನು ಹೊಂದಿದ್ದರು. ಹೀಗಾಗಿ "ಯಥಾಸ್ಥಿತಿ ವಾದದ" ಹಂತವನ್ನು ಅವಲಂಬಿಸಿಕೊಂಡೇ ವ್ಯವಹರಿಸುತ್ತಿದ್ದರು. ಹೀಗಾಗಿ ಈ "ಸ್ವದೇಶಿ" ವ್ಯವಸ್ಥೆಯು ಮತ್ತು "ವಿದೇಶಿ ವಸ್ತುಗಳ ಬಹಿಷ್ಕಾರ"ದ ಚಿಂತನವನ್ನು ಶ್ರೀ ಅರವಿಂದರು ಬಿಟ್ಟುಕೊಡಬೇಕಾಯಿತು. ತಿಲಕ ಮತ್ತು ಶ್ರೀ ಅರವಿಂದರಿಬ್ಬರೂ ಈ ವಿದೇಶಿ ವಸ್ತುಗಳ ಬಹಿಷ್ಕಾರದ ಬಗೆಗೆ ಅತ್ಯಂತ ಖಚಿತವಾದ ನಿಲುವನ್ನು ಹೊಂದಿದ್ದರು. ಆದರ ಅದು ಕೇವಲ ಬ್ರಿಟೀಷ ವಸ್ತುಗಳಿಗೆ ಮಾತ್ರ ಸೀಮಿತವಾಗಿತ್ತು. ಈ ವಿದೇಶಿ ವಸ್ತುಗಳಿಗೆ ಈ ದೇಶದಲ್ಲಿ ಪರ್ಯಾಯ ವ್ಯವಸ್ಥೆಯಲ್ಲಿ ವಸ್ತುಗಳು ಲಭ್ಯವಾಗುವಂತೆ ಇರುವ ವ್ಯವಸ್ಥೆಯೂ ಅತ್ಯಂತ ಕ್ಷೀಣ ಹಂತದಲ್ಲಿತ್ತು. ಆದರೂ ಈ ಬ್ರಿಟೀಷ ವಸ್ತುಗಳನ್ನು ಬಿಟ್ಟು, ಅವುಗಳನ್ನೇ ಜರ್ಮನಿಯಿಂದ, ಆಸ್ಟ್ರಿಯಾದಿಂದ ಹಾಗೂ ಅಮೇರಿಕಾದಿಂದ ಆಮದು ಮಾಡಿಕೊಳ್ಳುವ ಮೂಲಕ ಲಭ್ಯಗೊಳಿಸುವ ಯೋಜನೆಯನ್ನೂ ಹೊಂದಿತ್ತು. ಆ ಮೂಲಕ ಬ್ರಿಟೀಷ ಸರಕಾರದ ಮೇಲೆ ಖಂಡಿತವಾಗಿಯೂ ಒತ್ತಡ ನಿರ್ಮಾಣವಾಗುತ್ತಿತ್ತು. ಹೀಗಾಗಿ ಬಹಿಷ್ಕಾರವನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಬಯಸಿದ್ದರೇ ವಿನಾ, ಸಂಪೂರ್ಣವಾಗಿ ಸ್ವದೇಶಿಗೆ ಮೂಲ ತಳಹದಿಯಾಗುವಂತೆ ಇರಲಿಲ್ಲ. ಎಲ್ಲ ವಿದೇಶಿ ವಸ್ತುಗಳ ಸಂಪೂರ್ಣ ಬಹಿಷ್ಕಾರ ಎನ್ನುವದು ಅವ್ಯವಹಾರಿಕ ಸಂಗತಿಯಾಗಿತ್ತು. ಹೀಗಾಗಿ ಇದೊಂದು

ಕಾಂಗ್ರೆಸ್ ಠರಾವಿಸಿದ ಕೆಲವೇ ಕೆಲವು ಠರಾವುಗಳಲ್ಲಿ ಕೆಲವೇ ಸಮಯ ಮಾತ್ರ ಚರ್ಚೆಗೆ ಬಂದಿದ್ದ ಹಾಗೂ ರಾಜಕೀಯವಾಗಿಯೂ ಅದೊಂದು ಅಷ್ಟು ದೊಡ್ಡ ಪ್ರಭಾವವನ್ನು ಬೀರುವ ಸಂಗತಿಯೇನೂ ಆಗಿರಲಿಲ್ಲ. ಆದರೆ ಈ ಎಲ್ಲ ಘಟನೆಗಳೂ ರಾಷ್ಟ್ರವು ಸ್ವಯಂ–ಪರಿಪೂರ್ಣವಾಗುವತ್ತ, ಸ್ವಾವಲಂಬನೆಯನ್ನು ಸಾಧಿಸುವತ್ತ ಪ್ರಮುಖ ಉದ್ದಿಮೆಗಳನ್ನು ಪ್ರಾರಂಭಿಸುವ ಹಂತಕ್ಕೆ ಬಂದಿತು. ಅವಶ್ಯಕ ವಸ್ತುಗಳ ಉತ್ಪಾದನೆ ಮತ್ತು ಇತರೆ ಎಲ್ಲ ತಯಾರಿಕೆಗಳನ್ನು, ಅದೂ ಭಾರತವು ನೈಸರ್ಗಿಕವಾಗಿ ಹೊಂದಿರುವ ಕಚ್ಚಾ ವಸ್ತುಗಳನ್ನು ಬಳಸಿಕೊಂಡೇ ರೂಪಿಸುವದಾಗಿತ್ತು. ಆದರೆ ಯಾವತ್ತೂ ಪರಿಪೂರ್ಣ ಸ್ವಾವಲಂಬನೆ ಅಥವಾ ಏಕಸ್ವಾಮ್ಯತೆಯ ಸ್ಥಿತಿ ಎನ್ನುವದು ಎಂದಿಗೂ ಪ್ರಾಯೋಗಿಕವಾಗಿರುವದಿಲ್ಲ.; ಅನುಷ್ಠಾನಿಸಲೂ ಸಾಧ್ಯವಿಲ್ಲ. ಇದನ್ನು ನಿರೀಕ್ಷಿಸುವಂತೆಯೂ ಇಲ್ಲ. ಏಕೆಂದರೆ ಸ್ವತಂತ್ರ ಪಡೆದ ನಂತರದಲ್ಲಿ ಭಾರತವು ಬೇರೆ ದೇಶಗಳಿಗೆ ತನ್ನ ಉತ್ಪಾದನೆಗಳನ್ನು ರಫ್ತು ಮಾಡಲೇಬೇಕಿತ್ತು. ಜೊತೆಗೆ ದೇಶದ ಎಲ್ಲ ಭಾಗಗಳಿಗೂ ಬಳಕೆಗಾಗಿ ಪೂರೈಕೆ ಮಾಡಬೇಕಾಗಿತ್ತು. ಹೀಗಾಗಿ ಆಮದು ಮಾಡಿಕೊಳ್ಳಲೇಬೇಕಾಗುವದು. ಅದಕ್ಕಿಂತ ಮಿಗಿಲಾಗಿ ಅಂತಾರಾಷ್ಟ್ರೀಯ ವಿನಿಮಯವನ್ನೂ ಕಾಯ್ದುಕೊಳ್ಳಬೇಕಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/47–58**

## ರಾಷ್ಟ್ರೀಯ ಶಿಕ್ಷಣ ನೀತಿಯ ಮಹತ್ವ

ಶ್ರೀ ಅರವಿಂದರ ಮತ್ತೊಂದು ಪ್ರಮುಖ ವಿಚಾರಧಾರೆ, ಅದರಲ್ಲೂ ತುಂಬ ಪ್ರಾಮುಖ್ಯವಾಗಿಯೇ ಪರಿಗಣಿಸಲ್ಪಡುವ ವಿಚಾರವೆಂದರೆ, ಅದು ಪ್ರಚಲಿತದಲ್ಲಿದ್ದ "ರಾಷ್ಟ್ರೀಯ ಶಿಕ್ಷಣ ಪದ್ಧತಿ/ವ್ಯವಸ್ಥೆ"ಯ ಅಡಿಯಲ್ಲಿ ಶಾಲೆ–ಕಾಲೇಜು–ವಿಶ್ವವಿದ್ಯಾಲಯಗಳಲ್ಲಿ ಬ್ರಿಟೀಷರಿಂದ ನೀಡಲ್ಪಡುತ್ತಿರುವ ಶಿಕ್ಷಣದ ವ್ಯವಸ್ಥೆಯಿಂದಾಗಿ ಹಾಗೂ ಅದರ ಮೂಲಕ ಭಾರತದಲ್ಲಿ ನಿರ್ಮಾಣವಾದ ವಿಚಿತ್ರ ಪರಿಸ್ಥಿತಿಯನ್ನು ಕಂಡು ಅವರಿಗೆ ತುಂಬ ನಿರಾಸೆಯಾಗಿತ್ತು. ಹತಾಶೆಯೂ ಇತ್ತು. ಬಡೋದಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಅರವಿಂದರಿಗೆ ಈ ವಿಷಯದ ಬಗೆಗೆ ಎಲ್ಲ ಆಯಾಮಗಳ ಪರಿಚಯವೂ ಇತ್ತು. ಅನುಭವವೂ ಇತ್ತು. ಅವರ ಅಭಿಪ್ರಾಯದ ಪ್ರಕಾರ, ಆ ಅವಧಿಯಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಕೊಡಲ್ಪಡುತ್ತಿದ್ದ ಶಿಕ್ಷಣವು ಕೇವಲ ಮಂದಮತಿಗಳನ್ನು ಮಾತ್ರ

ಸೃಷ್ಟಿಸುತ್ತಿತ್ತು. ನಿರ್ವೀರ್ಯರನ್ನಾಗಿಸುತ್ತಿತ್ತು. ಈ ಮೂಲಕ ನೈಸರ್ಗಿಕವಾಗಿಯೇ ಪ್ರತಿಭಾಶಾಲಿಯಾದ ವಿದ್ಯಾರ್ಥಿಗಳನ್ನು ಸುನಮ್ಯವಾದ ಜಾಣ್ಮೆಯನ್ನು ನಿರ್ಬಂಧಗೊಳಿಸುವ ವಿಧಾನದ ಶಿಕ್ಷಣ ಪದ್ಧತಿಯನ್ನು ಹೇರಲಾಗಿತ್ತು. ಅದನ್ನೂ ಸಹಿತ ಎಷ್ಟು ಸಾಧ್ಯವೋ ಅಷ್ಟು ಕೆಟ್ಟ ರೀತಿಯಲ್ಲಿ ಹೇಳಲಾಗುತ್ತಿತ್ತು. ಅಲ್ಪ ಪ್ರಮಾಣದ ಸಂಗತಿಗಳನ್ನು ಮಾತ್ರ ಹೇಳುತ್ತ, ಯಾಂತ್ರಿಕವಾದ ಸಲಹೆಗಳ ಮೂಲಕ ಜ್ಞಾನದ ಮೂಲ ತತ್ತ್ವವನ್ನು ಹಾಗೂ ಅದರ ಫಲದಾಯಕತ್ವವನ್ನು ಕತ್ತರಿಸಿ ಹೇಳಲಾಗುವ ಶಿಕ್ಷಣ ಪದ್ಧತಿಯನ್ನು ಅಳವಡಿಸಲಾಗಿತ್ತು.

ಆದರೆ ಶ್ರೀ ಅರವಿಂದರ ಚಳುವಳಿಯು ತುಂಬ ಪ್ರಭಾವಕಾರಿಯಾಗಿ ಹಲವು ನ್ಯಾಶನಲ್ ಸ್ಕೂಲ್(ರಾಷ್ಟ್ರೀಯ ಶಾಲೆಗಳು) ಬಂಗಾಲದಲ್ಲಿ ಸ್ಥಾಪಿಸಲ್ಪಟ್ಟವು. ಹೀಗಾಗಿ ಹಲವಾರು ಸಮರ್ಥ ಶಿಕ್ಷಕರೂ ಲಭ್ಯರಾದರು. ಆದಾಗ್ಯೂ ಇವೆಲ್ಲವೂ ಪ್ರಗತಿಯಲ್ಲಿ ಮಾತ್ರ ಅತ್ಯಂತ ಕ್ಷೀಣಗತಿಯಲ್ಲೇ ಮುಂದುವರೆದಿದ್ದವು. ಮುಖ್ಯವಾಗಿ ಶಾಲೆಗಳ ಆರ್ಥಿಕ ಪರಿಸ್ಥಿತಿಯೂ ಸಹಿತ ಅಷ್ಟೇ ಚಿಂತಾಜನಕವಾಗಿಯೇ ಇರುತ್ತಿತ್ತು.

ಹೀಗಾಗಿ ಶ್ರೀ ಅರವಿಂದರು ಈ ಚಳುವಳಿಯನ್ನು ತಮ್ಮ ವೈಯಕ್ತಿಕ ನೆಲೆಯಲ್ಲಿಯೇ ಮುಂದುವರೆಸಲು ನಿರ್ಧರಿಸಿದ್ದರು. ಇದಕ್ಕೆ ಭದ್ರವಾದ ಹಾಗೂ ಅಪಾರ ವಿಸ್ತಾರವನ್ನು ಒದಗಿಸುವ ಸಾಧ್ಯತೆಯನ್ನು ಹೊಂದುವ ಒಂದು ತಳಹದಿ ಇಲ್ಲದೇ ಈ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಾಗುವದಿಲ್ಲ ಎಂದುಕೊಂಡು ಆ ದಿಸೆಯಲ್ಲಿ ಒಂದು ಯೋಜನಬದ್ಧ ಚಿಂತನವನ್ನು ಮುಂದುವರೆಸಿದ್ದರು. ಆದರೆ ಬಂಗಾಲದಿಂದ ಅವರು ನಿರ್ಗಮಿಸಿದ್ದರಿಂದ ಅವರ ಆ ಯೋಜನೆ ತುಂಡರಿಸಲ್ಪಟ್ಟಿತ್ತು. ದಮನಕಾರೀ ನೀತಿಯ ಆಡಳಿತ ವ್ಯವಸ್ಥೆ ಹಾಗೂ ಇಂತಹ ದಮನಿತ ವ್ಯವಸ್ಥೆಯಲ್ಲಿಯೇ ರೂಪುಗೊಂಡಿದ್ದ ಸಾಮಾಜಿಕ, ಮಾನಸಿಕ ವ್ಯವಸ್ಥೆಯೂ ಇದಕ್ಕೆ ಕಾರಣವಾಗಿತ್ತು. ಬಹುತೇಕ ಶಾಲೆಗಳು ಮುಂದುವರೆಯಲು ವಿಫಲವಾದವು. ಕೇವಲ ಚಿಂತನವು ಮಾತ್ರ ಉಳಿದುಕೊಂಡಿತು. ಒಂದಲ್ಲ ಒಂದು ದಿನ ಈ ವಿಚಾರಧಾರೆಗೆ ಸಮೃದ್ಧವಾದ ಹಾಗೂ ಯೋಗ್ಯವಾದ ಆಕಾರ ಮತ್ತು ಸ್ವರೂಪ ಬರಬಹುದೆಂದು ಚಿಂತನವು ಮುಂದುವರೆಸಲ್ಪಡುತ್ತಾ ಇದೆ.

**SABCL (ಶ್ರೀ ಅರವಿಂದರ ಜನ್ಮ ಶತಮಾನೋತ್ಸವದ ಸಂಗ್ರಹ) 26/31–32**

## ರಾಷ್ಟ್ರದಲ್ಲಿ ನವ–ಚೈತನ್ಯದ ಸೃಷ್ಟಿ

ರಾಷ್ಟ್ರೀಯವಾದೀ ಕಾರ್ಯಕ್ರಮಗಳು ಸಂಪೂರ್ಣವಾಗಿ ರಾಜಕೀಯಾತ್ಮಕ–ವಾಗಿಯೇ ಇದ್ದುದರಿಂದ ಹಾಗೂ ಅಂತಹದೇ ಚಟುವಟಿಕೆಗಳ ಹಿನ್ನೆಲೆಯಲ್ಲಿ, ಪ್ರತಿಯೊಂದೂ ದಮನಕಾರೀ ನೀತಿಯಿಂದಾಗಿ, ದಮನಿತಗೊಂಡ ವ್ಯವಸ್ಥೆಯಾಗಿ, ಇಡೀ ಸ್ವಾತಂತ್ರ್ಯ ಚಳುವಳಿಯ ಸಲುವಾಗಿ ರೂಪುಗೊಂಡ ವಿಧಾನವನ್ನೇ ಪರಿವರ್ತಿಸಿಬಿಟ್ಟಿತ್ತು. ಅಲ್ಲದೇ ಮುಂದಿನ ಐವತ್ತು ವರ್ಷಗಳ ಕಾಲ ಅದರ ಹೋರಾಟದ ಸ್ವರೂಪವೂ ಅದೇ ರೀತಿಯಲ್ಲಿಯೇ ಮುಂದುವರೆಯುತ್ತ ಬಂದಿತು. ಆದರೆ ಈ ಸಂಘರ್ಷಮಯ ಸನ್ನಿವೇಶದ ಮಧ್ಯದಲ್ಲಿಯೇ ಒಂದು ಗಮನಾರ್ಹವಾದ, ಪ್ರಾಮುಖ್ಯತೆಯನ್ನು ಹೊಂದಿದ ಸಂಗತಿಯೊಂದು ದೇಶದಲ್ಲಿ ಘಟಿಸಿತ್ತು. 'ನವ ಚೈತನ್ಯವೊಂದರ' ಸೃಷ್ಟಿ@ಗೆ ಅದು ಕಾರಣವೂ ಆಗಿತ್ತು. "ವಂದೇ ಮಾತರಂ" ಗೀತೆಯ ಅನುರಣನವೂ ಪ್ರಾರಂಭವಾಗಿ ದೇಶಾದ್ಯಂತ ಅದು ಉದ್ಘೋಷವಾಗಿ ಮೊಳಗತೊಡಗಿತ್ತು. ವಿಸ್ತಾರವನ್ನೂ ಪಡೆದುಕೊಳ್ಳತೊಡಗಿತು. ಅಷ್ಟೇ ಅಲ್ಲದೇ ಉತ್ಸಾಹದ ಪರಮಾವಧಿಯಲ್ಲಿಯೇ ಸರ್ವಸ್ವವನ್ನೂ ಒಳಗೊಂಡೇ ವಿಸ್ತಾರವಾಗುತ್ತಿತ್ತು. ಜನತೆಯೂ ಸಹಿತ ಈ ಕಾಂತಿಮಯ ತೇಜದ ಪ್ರಭಾವಳಿಯಲ್ಲಿ ಬದುಕಿ–ಬಾಳಿ– ಎಲ್ಲವನ್ನೂ ಎದುರಿಸುವ ಹಾಗೂ ಕ್ರಿಯೆಯಲ್ಲಿ ಸಾಂಗಿಕವಾಗಿ, ಹಾಗೂ ಆಶಾಭಾವನೆಯೊಂದಿಗೆ ತೊಡಗಲು, ಬದುಕಲು ಸತತ ಸಿದ್ಧರಾಗುವಂತಾಯಿತು. ಇಲ್ಲಿಯವರೆಗೂ ಇದ್ದ ಆ ಹಳೆಯ ಉದಾಸೀನತೆ ಮತ್ತು ಅಂಜುಬುರುಕುತನಗಳು ಕತ್ತರಿಸಿ ಎಸೆಯಲ್ಪಟ್ಟವು. ಏನನ್ನೂ ಉಧ್ವಸ್ಥಗೊಳಿಸದ ಹಾಗೆ ಇರುವ ನವೀನ ಬಲವೊಂದು – ಅದು ಮತ್ತೆ ಮತ್ತೆ ಉದಿತಗೊಳ್ಳುತ್ತಲೇ ಇರುವ ಅಲೆಗಳಿಂದಾಗಿ – ನಿರಂತರವಾದ ಅಲೆಯಂತೆ –ಸೃಷ್ಟಿಗೊಂಡಿತು. ಇದರಿಂದಾಗಿ ಭಾರತವು ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು ಪಡೆಯುವವರೆಗೂ ಸಾಗಿಬಂದಿತ್ತು.

*

## ರಾಷ್ಟ್ರೀಯ ಚಳುವಳಿಯ ನೇತಾರ

'ವಂದೇ ಮಾತರಂ' ಪತ್ರಿಕೆಯ ಪ್ರಕರಣದ ನಂತರದಲ್ಲಿ, ಬಂಗಾಲದಲ್ಲಿ ಶ್ರೀ ಅರವಿಂದರು ಎಲ್ಲರಿಂದಲೂ ಗೌರವಿಸಲ್ಪಟ್ಟ ರಾಷ್ಟ್ರೀಯವಾದದ

ನೇತಾರರಾದರು. ಮಿಡ್ನಾಪೂರದಲ್ಲಿ ನಡೆದ ಪಕ್ಷದ ಸಮ್ಮೇಳನವು ಅವರ ಮುಖಂಡತ್ವದಲ್ಲಿಯೇ ನಡೆಸಲ್ಪಟ್ಟಿತ್ತು. ಆಗ ಎರಡೂ ಪಕ್ಷಗಳ ನಡುವೆ ತೀವ್ರವಾದ ಸಂಘರ್ಷವೂ ಉಂಟಾಗಿತ್ತು. ಶ್ರೀ ಅರವಿಂದರು ಪ್ರಪ್ರಥಮ ಬಾರಿಗೆ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವ ಸಂದರ್ಭ ಇದಾಗಿತ್ತು. ನಂತರದಲ್ಲಿ ಸೂರತದಲ್ಲಿ ಜರುಗಿದ ಬೃಹತ್ ಸಮಾವೇಶದಲ್ಲಿ ಮಾತನಾಡಿದ್ದೂ ಅಲ್ಲದೇ ಆ ಸಮ್ಮೇಳನದ ಅಧ್ಯಕ್ಷತೆಯನ್ನೂ ವಹಿಸಿದ್ದರು. ಅಲ್ಲಿಂದ ಅವರು ಕಲಕತ್ತೆ ಮರಳಿಹೋಗುವ ಸಂದರ್ಭದಲ್ಲಿ, ಮಾರ್ಗ ಮಧ್ಯದಲ್ಲಿ ಅನೇಕ ಸ್ಥಳಗಳಲ್ಲಿ ತಮ್ಮ ಭಾಷಣಗಳನ್ನು ನೀಡುತ್ತಲೇ ಸಾಗಿದ್ದರು. ಅವರ ಮಾತುಗಳನ್ನು ಆಲಿಸಲು ಅಪಾರ ಸಂಖ್ಯೆಯ ಜನಸ್ತೋಮ ಸೇರುತ್ತಿತ್ತು. ತದನಂತರದಲ್ಲಿ ಹೂಗ್ಲಿಯಲ್ಲಿ ನಡೆದ ಪ್ರಾಂತೀಯ ಸಮ್ಮೇಳನದ ಮುಖಂಡತ್ವವನ್ನೂ ವಹಿಸಿಕೊಂಡಿದ್ದರು. ಅದು ಪ್ರಪ್ರಥಮ ಬಾರಿಗೆ, ಈ ರಾಷ್ಟ್ರೀಯವಾದದ ಚಿಂತನ ಸರಣಿಯ ಪ್ರಗತಿಶೀಲರಾಗಿ ಮುಂದುವರೆಯುತ್ತಿದೆ ಎನ್ನುವದನ್ನು ಸ್ಪಷ್ಟವಾಗಿ ಸಾಕ್ಷೀಕರಿಸಿತ್ತು. ಅದಕ್ಕೆ ಸಮಾವೇಶದಲ್ಲಿ ಭಾಗವಹಿಸಿದ ಬಹುತೇಕ ಸದಸ್ಯರೂ ಸಹಿತ ಹಾಗೂ 'ವಿಷಯ ಸಮಿತಿಯ' ಸದಸ್ಯರೂ ಇದ್ದ ಕಾರಣ, ಶ್ರೀ ಅರವಿಂದರು ಮಂದಗಾಮೀ ವಿಚಾರಧಾರೆಯ ನೀತಿಯಲ್ಲಿ ರೂಪಿಸಲ್ಪಟ್ಟಿದ್ದ ಠರಾವುಗಳನ್ನು ಸೋಲಿಸಲು ಸಾಧ್ಯವಾಗಿತ್ತು. ಆ ಮೂಲಕ ಈ ಬದಲಾವಣೆಯನ್ನು ಸ್ವಾಗತಿಸುತ್ತಾ, ಅವುಗಳನ್ನು ಠರಾವುಗೊಳಿಸಿಕೊಂಡು ಅನುಮೋದನೆ ಪಡೆದುಕೊಳ್ಳುವ ಮೂಲಕ, ಮಂದಗಾಮೀ ಧೋರಣೆಯ ಠರಾವುಗಳು ಅಸಮರ್ಥನೀಯ ಹಾಗೂ ನೈಜತೆಯನ್ನು ಹೊಂದಿಲ್ಲದ ಸ್ಥಿತಿಯಲ್ಲಿ ಇದ್ದ ಕಾರಣ ಅವುಗಳನ್ನು ಸಾರಾಸಗಟು ನಿರಾಕರಿಸಿ ಅವುಗಳನ್ನು ತಿರಸ್ಕರಿಸಲಾಯಿತು. ಆದರೆ ಆ ಮಂದಗಾಮೀ ಧೋರಣೆಯ ನಾಯಕರು ತಾವು ಪ್ರತ್ಯೇಕಗೊಳ್ಳುವ ಬೆದರಿಕೆ ಒಡ್ಡಿ, ಒಂದು ವೇಳೆ ಈ ನವೀನ ವಿಚಾರಧಾರೆಯು ಅಳವಡಿಸಲ್ಪಡದಂತೆ ಮತ್ತು ಶ್ರೀ ಅರವಿಂದರು ಯೋಚಿಸಿದ್ದ ಪ್ರತ್ಯೇಕತೆಯನ್ನು ತಪ್ಪಿಸಲು ಯತ್ನಿಸಿದರು. ಆದರೂ ಸಹಿತ, ಶ್ರೀ ಅರವಿಂದರು ಆ ಸಾರ್ವಜನಿಕ ಅಧಿವೇಶನದಲ್ಲಿ ಮಾತನಾಡಿ, ತಮ್ಮ ನಿರ್ಣಯಗಳ ಕುರಿತು ವಿವರಣೆ ನೀಡುವ ಮೂಲಕ, ರಾಷ್ಟ್ರೀಯವಾದದ ಸದಸ್ಯರೆಲ್ಲರೂ ಅದನ್ನು ತಮ್ಮ ವಿಜಯವೆಂದು ಭಾವಿಸದೇ ಮೌನ ಸ್ಥಿತಿಯಲ್ಲಿ ಸ್ವೀಕರಿಸುವಂತೆ ಹಾಗೂ ಆ ಮೂಲಕ ಬಂಗಾಲದ ನೇತಾರರಲ್ಲಿ ಐಕ್ಯತೆಯನ್ನು

ಕಾಯ್ದುಕೊಳ್ಳುವಂತೆ ಕೋರಿದ್ದರು. ರಾಷ್ಟ್ರೀಯವಾದದ ಪ್ರತಿನಿಧಿಗಳು ಈ ಪ್ರಥಮ ವಿಜಯವನ್ನು ಜಯಘೋಷದ ಸಂಭ್ರಮದೊಂದಿಗೆ, ಆ ನಿರ್ಣಯವನ್ನು ಅಂಗೀಕರಿಸಿದ್ದರು. ಮತ್ತೆ ಅಷ್ಟೇ ಶಾಂತವಾಗಿಯೇ ಸಭಾಂಗಣವನ್ನೂ ಬಿಟ್ಟು ಹೊರಗೆ ನಡೆದಿದ್ದರು.

ಶ್ರೀ ಅರವಿಂದರ ಆದೇಶದಂತೆ ನಡೆದ ಈ ಘಟನೆಯಿಂದಾಗಿ, ಇವರಾರೂ ಮಂದಗಾಮೀ ನೀತಿಯ ಠರಾವುಗಳಿಗಾಗಲಿ ಅಥವಾ ಅದಕ್ಕೆ ವಿರೋಧವಾಗಿಯಾಗಲಿ ಮತದಾನದಲ್ಲಿ ಭಾಗವಹಿಸಲು ಸಾಧ್ಯವೇ ಇರಲಿಲ್ಲ. ಈ ಘಟನೆಯು ಅತ್ಯಂತ ತೀವ್ರತೆರನಾದ ವಿಸ್ಮಯವನ್ನೂ ಹಾಗೂ ಅಷ್ಟೇ ತೀವ್ರವಾದ ಆಘಾತವನ್ನೂ ಜೊತೆಗೆ ಪರಾಭವವನ್ನೂ ಮಂದಗಾಮಿಗಳು ಅನುಭವಿಸುವಂತಾಯಿತು. ಅದೂ ಅಲ್ಲದೇ ತಮ್ಮ ಹಳೆ ಮಾದರಿಯ ವಿಚಾರಗಳನ್ನು ಜನತೆ ಸ್ವೀಕರಿಸುತ್ತಿಲ್ಲ ಎನ್ನುವ ಭಯವೂ ಅವರ ಮನಸ್ಸನ್ನು ಆವರಿಸಿತು. ಹೀಗಾಗಿ ಆ ನಾಯಕರು ಶ್ರೀ ಅರವಿಂದರ ವಿರುದ್ಧ ಕೂಗಾಟ ಮಾಡಿದರೂ ಸಹಿತ, ಅದಾವುದೂ ಈ ನವೀನ ವಿಚಾರಧಾರೆಯ ತರುಣ ವ್ಯಕ್ತಿಯ ಅಭಿಪ್ರಾಯದ ಮುಂದೆ ನಡೆಯಲಿಲ್ಲ. ಅನಿವಾರ್ಯವಾಗಿ ಅವರೆಲ್ಲರೂ ಮೌನವಾಗಿಯೇ ಶ್ರೀ ಅರವಿಂದರನ್ನು ಅನುಸರಿಸಿದ್ದರು.

*

## ದೈವೀ ಸಮ್ಮಿಲನದ ನೆಲೆ

ಈ ಅವಧಿಯಲ್ಲಿ ಶ್ರೀ ಅರವಿಂದರು ಬಂಗಾಲೀ ಭಾಷೆಯ ಪತ್ರಿಕೆ 'ನವಶಕ್ತಿ'ಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ನಿರ್ಣಯಿಸಿದ್ದರು. ಅದಕ್ಕಾಗಿ ಸ್ಕಾಟ್ಸ್‌ಲೇನನಲ್ಲಿ ಇದ್ದ ಬಾಡಿಗೆ ಮನೆಯಿಂದ ಪತ್ರಿಕೆ ಇರುವ ಸ್ಥಳಕ್ಕೆ ಬಂದರು. ಅಲ್ಲಿ ಅವರು ತಮ್ಮ ಪತ್ನಿ ಹಾಗೂ ಸೋದರಿಯ ಜೊತೆಯಲ್ಲಿ ವಾಸ ಪ್ರಾರಂಭಿಸಿದರು. ಪತ್ರಿಕೆಯ ಕಾರ್ಯಾಲಯಕ್ಕೆಂದು ಅಲ್ಲಿಯೇ ಎರಡು ಕೋಣೆಗಳು ಮೀಸಲಾಗಿದ್ದವು. ಮತ್ತೆ ಅಲ್ಲಿ ತಮ್ಮ ಸಾಹಸವನ್ನು ಪ್ರಾರಂಭಿಸುವದಕ್ಕಿಂತ ಮುಂಚೆಯೇ, ಒಂದು ದಿನ ಅವರು ಮುಂಜಾನೆ ಏಳುವದಕ್ಕಿಂತ ಮೊದಲೇ ಪೊಲೀಸ ಅಧಿಕಾರಿ ಬಂದು ಮೆಟ್ಟಿಲುಗಳ ಮೇಲೆ ಬಡಿದು, ಕೈಯಲ್ಲಿ ಪಿಸ್ತೂಲ್ ಹಿಡಿದುಕೊಂಡೇ ಬಂದು ಶ್ರೀ ಅರವಿಂದರನ್ನು ಬಂಧಿಸಿದ್ದ. ತದನಂತರದಲ್ಲಿ ಅವರನ್ನು ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ, ಅಲ್ಲಿಂದ ಅವರನ್ನು

ಅಲೀಪೂರ ಜೈಲಿಗೆ ಕಳಿಸಲಾಯಿತು. ಅಲ್ಲಿ ನ್ಯಾಯಾಂಗ ಬಂಧನದಲ್ಲಿ ತನಿಖೆಯ ನಿಮಿತ್ತವಾಗಿ ಒಂದು ವರ್ಷದ ಕಾಲ ಸೆರೆಯಲ್ಲಿ ಇರುವಂತಾಯಿತು.

ಮೊದಲಿಗೆ ಅವರಿಗೆ ಏಕಾಂಗಿಯಾಗಿಯೇ ಇರುವ ವ್ಯವಸ್ಥೆಯನ್ನು ಜೈಲಿನಲ್ಲಿ ಒದಗಿಸಲಾಗಿತ್ತು. ಆದರೆ ತದನಂತರದಲ್ಲಿ ಜೈಲಿನ ವಿಶಾಲ ಆವರಣವಿರುವ ಕಡೆಗೆ, ಉಳಿದ ಕೈದಿಗಳು ವಾಸಿಸುವ ಕಡೆಗೆ ಸ್ಥಳಾಂತರಿಸಲಾಯಿತು. ಅಲ್ಲಿ ಅವರು ಉಳಿದ ಕೈದಿಗಳ ಜೊತೆಗೇ ಆ ದೊಡ್ಡ ಕೋಣೆಯಲ್ಲಿಯೇ ಸೆರೆಮನೆ ವಾಸ ಅನುಭವಿಸಿದರು. ಅಲ್ಲಿಯೇ ಒಂದು ವರ್ಷದ ಕಾಲ, ವಿಚಾರಣೆ ನಡೆಸುತ್ತಿದ್ದ ಅಲೀಪೂರ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆಯಲ್ಲಿ, ಆಪಾದಿತರಾಗಿ–ವಿಚಾರಣಾಧೀನ ಕೈದಿಯಾಗಿ ಉಳಿದರು. ಆದರೆ ಈ ಮಧ್ಯದಲ್ಲಿ, ಅದೇ ಜೈಲಿನಲ್ಲಿ ಇದ್ದ ಮಾಜೀ ಸಾಕ್ಷಿದಾರನ ಕೊಲೆಯಾದ ನಂತರ, ಆ ಪ್ರಕರಣದ ಉಳಿದ ಆಪಾದಿತರು ಪರಸ್ಪರರಲ್ಲಿ ಸಂಪರ್ಕವಿರದ ಹಾಗೆ ಸೀಮಿತಗೊಳಿಸಲ್ಪಟ್ಟಿದ್ದರು. ಪರಸ್ಪರರು ಭೇಟಿಯಾಗಲು ಸಾಧ್ಯವಿರದ ಹಾಗೆ ಬೇರೆ ಬೇರೆ ಕೋಣೆಗಳಲ್ಲಿ ಇರಿಸಲಾಯಿತು. ವಿಚಾರಣೆಯ ಅವಧಿಯಲ್ಲಿ ನ್ಯಾಯಾಲಯಕ್ಕೆ ಬಂದಾಗ ಮಾತ್ರ ಪರಸ್ಪರರನ್ನು ಕಾಣುವಂತಾಗಿತ್ತು. ಅಥವಾ ದೈನಂದಿನ ಅಭ್ಯಾಸ/ವ್ಯಾಯಾಮ ಮಾಡುವ ಅವಧಿಯಲ್ಲಿಯೂ ಸಹಿತ ಅವರು ಪರಸ್ಪರ ಮಾತನಾಡುವಂತೆ ಇರಲಿಲ್ಲ. ಇದು ಶ್ರೀ ಅರವಿಂದರು ಜೈಲಿನಲ್ಲಿದ್ದ ಹಲವಾರು ಆಪಾದಿತರೊಡನೆ ಸಂಪರ್ಕ–ಸಾಮಿಪ್ಯವನ್ನು ಪಡೆಯಲು ಇದು ಎರಡನೇ ಅವಕಾಶವಿತ್ತು. ಜೈಲಿನಲ್ಲಿ ಇದ್ದಾಗ ಬಹುತೇಕ ಸಮಯವನ್ನು ಭಗವದ್ಗೀತೆ–ಉಪನಿಷತ್ತುಗಳ ಅಧ್ಯಯನದಲ್ಲಿಯೇ ಕಳೆಯುತ್ತಿದ್ದರು. ಮತ್ತೆ ಯೋಗದ ಪದ್ಧತಿಯ ಮೂಲಕ ತೀವ್ರವಾಗಿ ಧ್ಯಾನವನ್ನೂ ಸಹಿತ ಪ್ರಾರಂಭಿಸಿದ್ದರು. ಅವರ ಸೆರೆಮನೆ ವಾಸದ ಎರಡನೇ ಭಾಗದಲ್ಲಿಯೂ, ಅಂದರೆ ಅವರನ್ನು ಗುಂಪಿನಲ್ಲಿ ಇರಿಸಿದಾಗಲೂ ಸಹಿತ, ಅಲ್ಲಿ ಧ್ಯಾನಕ್ಕೆ ಅವಶ್ಯವಿದ್ದ ಏಕಾಂತವು ಲಭ್ಯವಾಗುವ ಹಾಗೆ ವಾತಾವರಣವೇ ಇಲ್ಲದಿದ್ದರೂ ಸಹಿತ, ಅಂತಹ ಗುಂಪಿನ ಚರ್ಚೆ–ನಗೆ–ಸಂಭಾಷಣೆ–ಗೌಜು–ಗದ್ದಲಗಳಲ್ಲಿಯೇ ಅಡೆತಡೆಗಳ ಮಧ್ಯೆಯೇ ತಮ್ಮ ಧ್ಯಾನವನ್ನು ಮುಂದುವರೆಸಿದ್ದರು. ಪ್ರಾರಂಭದ ಅವಧಿ ಹಾಗೂ ಕೊನೆಯ ಅವಧಿಯಲ್ಲಿ ಮಾತ್ರ ಅವರಿಗೆ ಸಂಪೂರ್ಣವಾಗಿ ಏಕಾಂತವಾದ ಸೂಕ್ತ ಅವಕಾಶ ದೊರೆತಿತ್ತು. ಅದನ್ನು ಅವರೂ ಸಹಿತ ಸದ್ವಿನಿಯೋಗಗೊಳಿಸಿಕೊಂಡರು. ಸೆಶನ್–ಕೋರ್ಟನಲ್ಲಿನ ಆಪಾದಿತರನ್ನು ಒಂದು ದೊಡ್ಡ ಕೋಣೆಯಲ್ಲಿ

ಬಂಧಿಸಿಡುತ್ತಿದ್ದರು. ಈ ಸ್ಥಳದಲ್ಲಿಯೇ ಶ್ರೀ ಅರವಿಂದರು ಇಡೀ ದಿನ ಧ್ಯಾನದಲ್ಲಿಯೇ ಮಗ್ನರಾಗಿರುತ್ತಿದ್ದರು. ಮಧ್ಯ ಮಧ್ಯ ವಿಚಾರಣೆಗೆ ಹಾಜರಾಗಿ, ಅಲ್ಲಿಯೂ ಸಹಿತ ಮೌನವಾಗಿಯೇ ಭಾಗವಹಿಸುತ್ತ, ಸಾಕ್ಷಿಗಳ ವಿಚಾರಣೆಯನ್ನು ಗಮನಿಸುತ್ತಿದ್ದರು. ಚಿತ್ತರಂಜನ ದಾಸ (ಸಿ.ಆರ್. ದಾಸ್) ಓರ್ವ ಪ್ರಸಿದ್ಧ ನ್ಯಾಯವಾದಿಯಾಗಿದ್ದರು. ರಾಷ್ಟ್ರೀಯವಾದದ ಚಿಂತನದಲ್ಲಿ ಸಹವರ್ತಿಯೂ ಆಗಿದ್ದರು. ಅವರು ತಮ್ಮ ವಕೀಲಿ ವೃತ್ತಿಯನ್ನು ಬದಿಗಿಟ್ಟು, ತಿಂಗಳುಗಟ್ಟಳೇ ಶ್ರೀ ಅರವಿಂದರನ್ನು ರಕ್ಷಿಸಲು ಕಾನೂನಿನ ಹೋರಾಟ ಮಾಡಲು ನಿರ್ಧರಿಸಿ ತಮ್ಮನ್ನು ಸಂಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಂಡಿದ್ದರು. ಶ್ರೀ ಅರವಿಂದರೂ ಸಹಿತ ಈ ಪ್ರಕರಣದ ಸಂಪೂರ್ಣ ಜವಾಬ್ದಾರಿಯನ್ನು ಸಿ. ಆರ್. ದಾಸರಿಗೇ ವಹಿಸಿದ್ದರು. ಅವರಿಗೆ ಈ ಪ್ರಕರಣದಲ್ಲಿ ನಿರ್ದೋಷಿ ಎನ್ನುವದು ಸಾಬೀತಾಗುತ್ತದೆ ಎನ್ನುವದರಲ್ಲಿ ಭರವಸೆಯೂ ಇತ್ತು. ಇದೇ ವಿಷಯವು ಶ್ರೀ ಅರವಿಂದರಿಗೆ ಅಂತರಂಗಿಕವಾಗಿಯೂ ಅನುಭವಕ್ಕೆ ಬಂದಿತ್ತು. ತಾವು ಬಿಡುಗಡೆಗೊಳ್ಳುವ ಬಗೆಗೆ ಖಚಿತತೆಯನ್ನು ಹೊಂದಿದ್ದರು.

ಈ ಅವಧಿಯಲ್ಲಿಯೇ ಶ್ರೀ ಅರವಿಂದರ ಜೀವನದ ದೃಷ್ಟಿಕೋನ ಸಂಪೂರ್ಣವಾಗಿ ಪರಿವರ್ತನಗೊಂಡದ್ದು. ಯೋಗವನ್ನೂ ಸಹಿತ ಅಷ್ಟೇ ಗಂಭೀರವಾಗಿ ಮುಂದುವರೆಸಿ, ಯೋಗದ ಮೂಲ ಚಿಂತನವಾದ ಆಧ್ಯಾತ್ಮಿಕ ಶಕ್ತಿಯನ್ನು ಪಡೆಯುವ ಹಾಗೂ ಜೊತೆಜೊತೆಯಲ್ಲಿಯೇ ದೈವೀ ಮಾರ್ಗದರ್ಶನವನ್ನೂ ತಮ್ಮ ಜೀವನದ ಕಾರ್ಯಗಳಿಗಾಗಿ ಪಡೆಯಲು ಯತ್ನಿಸಿದ್ದರು. ಮತ್ತೆ ಇದೇ ಅವಧಿಯಲ್ಲಿಯೇ ಅವರ ಅಂತರಂಗದ ಆಧ್ಯಾತ್ಮಿಕ ತುಡಿತ ಹಾಗೂ ಸಾಕ್ಷಾತ್ಕಾರದತ್ತ ಸಾಗುವ ಪಥದಲ್ಲಿ ಅವರ ಪಯಣ ನಿರಂತರವಾಗಿ ಸಾಗಿತ್ತು. ಈ ಮೂಲಕ ಅದರ ವಿರಾಟ್–ಸ್ವರೂಪವೂ ವಿಸ್ತಾರವಾಗಿ, ಜೊತೆಗೆ ವೈಶ್ವಿಕವಾಗುತ್ತ ತುಂಬಿಕೊಂಡು ತಾವೂ ಅದರ ಒಂದು ಅಂಶವಾಗಿರುವದನ್ನು ಅನುಭಾವದ ಮೂಲಕ ಕಂಡುಕೊಂಡಿದ್ದರು.

ಈ ವೈಶಾಲ್ಯತೆಯ ಪರಿಣಾಮವೇ ಅವರ ಕಾರ್ಯಗಳ ಫಲಪ್ರದ ಫಲಿತಾಂಶವಾಗುತ್ತಿರುವದನ್ನು, ಆ ಮೂಲಕ ಈ ದೇಶವು ಸ್ವಾತಂತ್ರ್ಯ ಹಾಗೂ ಈ ದೇಶಕ್ಕೆ ಮತ್ತೂ ಹೆಚ್ಚಿನ ಸೇವೆ ಸಲ್ಲಿಸುವಲ್ಲಿ ಅದನ್ನೇ ತಮ್ಮ ಜೀವನದ ಪರಮ ಧ್ಯೇಯವನ್ನಾಗಿಸಿಕೊಂಡರು. ಈ ಮೊದಲು ಅದು ಕೇವಲ ಮಿನುಮಿನುಗುತ್ತಿರುವ

ಕ್ಷೀಣಕಾಂತಿಯ ಬೆಳಕಾಗಿತ್ತು. ಆದರೆ ಈಗ ಅದು ಜಗತ್ತಿನಾದ್ಯಂತ ವಿಸ್ತರಿಸಿಕೊಂಡು ಇದೇ ಮಾನವ ಕುಲದ ಭವಿಷ್ಯಕ್ಕಾಗಿ ಸಂಬಂಧಿಸಿಕೊಂಡು ಕಾರ್ಯಪ್ರವೃತ್ತವಾಗಿದೆ ಎನ್ನುವದನ್ನು ಅರಿತುಕೊಂಡರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/59–61**

## ಶ್ರೀ ಕೃಷ್ಣ ವಾಸುದೇವ; ಆತ್ಮೀಯ ಸಖ ಮತ್ತು ಪ್ರೇಮಿ

ಅವನು (ಕೃಷ್ಣನು) ನನ್ನನ್ನು ಗುರಿಯಿಟ್ಟುಕೊಂಡೇ ತೋರಿಸಿದ್ದೇನೆಂದರೆ, ನನಗೆ ತಿಳಿಸಿದ್ದೇನೆಂದರೆ – "ಹಿಂದೂ ಧರ್ಮ"ದ ಹೃದಯದಲ್ಲಿರುವ ಪರಮ ಸತ್ಯವನ್ನು ಅವನು ಸಾಕ್ಷಾತ್ಕರಿಸಿಕೊಟ್ಟನು. ಜೈಲಿನಲ್ಲಿದ್ದ ಉಳಿದವರ ಹೃದಯಗಳನ್ನೂ ನನ್ನ ಪರ ಪರಿವರ್ತಿಸಿ, ಅವರೆಲ್ಲರೂ ಜೈಲಿನ ಮುಖ್ಯಸ್ಥನಾಗಿದ್ದ ಆಂಗ್ಲ ವ್ಯಕ್ತಿಗೆ "ಅವರು (ಶ್ರೀ ಅರವಿಂದರು) ಕಾರಾಗೃಹ ವಾಸದ ವಾತಾವರಣದಿಂದ ಬಳಲುತ್ತಿದ್ದಾರೆ; ಅವರನ್ನು ಆ ಕೋಶದಿಂದ ಒಂದು ವಾರವಾದರೂ ಹೊರಗೆ ಕರೆ ತನ್ನಿ. ಆ ಕೋಶದ ಹೊರಗೆ ಅಡ್ಡಾಡಲು ಅವಕಾಶ ಕೊಡಿ; ಅದೂ ಮುಂಜಾನೆ ಮತ್ತು ಸಂಜೆಯ ಅವಧಿಯಲ್ಲಾದರೂ ಸರಿ, ಒಂದು ತಾಸಾದರೂ ಅವರಿಗೆ ಅಡ್ಡಾಡಲು ಬಿಡಿ" ಎಂದು ಕೇಳಿಕೊಂಡಿದ್ದರು. ಅವರೆಲ್ಲರ ಕೋರಿಕೆಯು ಈಡೇರಿಸಲ್ಪಟ್ಟಿತ್ತು. ಆ ಸಂದರ್ಭದಲ್ಲಿ ಅವನ (ಶ್ರೀ ಕೃಷ್ಣನ) ಬಲದೊಂದಿಗೇ ಅಡ್ಡಾಡುತ್ತಿದ್ದೆ. ತದನಂತರದಲ್ಲಿ "ಅವನು"ನನ್ನೊಳಗೇ ಪ್ರವೇಶಿಸುತ್ತಿದ್ದ. ನಾನಿದ್ದ ಜೈಲನ್ನು ಗಮನಿಸಿದರೆ, ಜನ ಸಂಪರ್ಕದಿಂದ ದೂರವಿರುವಂತೆ, ಪ್ರತ್ಯೇಕವಾಗಿ ಮತ್ತು ಬೃಹದಾಕಾರದ ಗೋಡೆಗಳಿಂದ ಕೂಡಿತ್ತು. ಅದು ನನ್ನನ್ನು ಸುತ್ತುವರೆದು ಆವರಣವನ್ನು ನಿರ್ಮಿಸಿದಂತೆ ಭಾಸವಾಗುತ್ತಿತ್ತು. ನನ್ನ ಕೋಣೆಯ ಎದುರಿಗೇ ಇರುವ ಗಿಡಗಳ ರೆಂಬೆಗಳ ಅಡಿಯಲ್ಲಿ ನಾನು ಅಡ್ಡಾಡುತ್ತಿದ್ದೆ. ಆದರೆ ಅದು ಕೇವಲ ಗಿಡ ಮಾತ್ರವಾಗಿರಲಿಲ್ಲ. ಅದೂ ಸಹಿತ ವಾಸುದೇವನೇ ಆಗಿತ್ತು. ಅದು ನನಗೆ ತಿಳಿದಿತ್ತು. ಅದು ಶ್ರೀ ಕೃಷ್ಣ, ಅವನು ನಿಂತಿರುವದನ್ನು ನಾನು ಕಾಣುತ್ತಿದ್ದೆ, ಅವನು ತನ್ನ ಛಾಯೆಯಲ್ಲಿ ನನ್ನನ್ನು ಹಿಡಿದಿಟ್ಟಿದ್ದ ಎನಿಸುತ್ತದೆ. ನಾನಿದ್ದ ಕೋಣೆಯ ಸರಳುಗಳನ್ನು ಗಮನಿಸಿದಾಗ, ಆ ಕಠಿಣತಮ ಬಾಗಿಲನ್ನು ರಕ್ಷಿಸುವಂತೆ ಇದ್ದರೂ, ಅಲ್ಲಿಯೂ ವಾಸುದೇವನೇ ಅಲ್ಲಿದ್ದ. ನನ್ನನ್ನು ಕಾವಲು ಕಾಯುತ್ತಿದ್ದವನು ಹಾಗೂ ರಕ್ಷಣೆಯನ್ನು

ಮಾಡುತ್ತಿದ್ದವನು ನಾರಾಯಣನೇ ಆಗಿದ್ದನು. ಸ್ವತಃ ನಾರಾಯಣನೇ ಹೌದು. ಅಥವಾ ನನಗೆ ಕೊಡಲ್ಪಟ್ಟಿದ್ದ ಒರಟೊರಟಾದ ಕಂಬಳಿಯ ಮೇಲೆ ಮಲಗಿದಾಗ, ಅದೂ ಸಹಿತ ಶ್ರೀ ಕೃಷ್ಣನ ಬಾಹುವಿನಂತೆಯೇ ಸುರಕ್ಷಾಮಯ ಕವಚವನ್ನು ಒದಗಿಸಿತ್ತು. ಆ ಬಾಹುಗಳು ನನ್ನ ಆತ್ಮೀಯ ಮಿತ್ರ, ಸಖನ ಪ್ರೇಮಮಯ ಬಾಹುವಿನಂತೆಯೇ ಇದ್ದವು. ಜೀವನದ ಮೂಲಧ್ಯೇಯವನ್ನು ಹಾಗೂ ಜ್ಞಾನಪೂರ್ಣ ದೃಷ್ಟಿಕೋನವನ್ನು "ಅವನು" ಈ ಮೂಲಕ ನನಗೆ ತಿಳಿಸಿಕೊಡುತ್ತಿದ್ದನು. ಜೈಲಿನಲ್ಲಿದ್ದ ಇನ್ನುಳಿದ ಕೈದಿಗಳನ್ನು ನಾನು ಗಮನಿಸಿದ್ದೆ. ಅವರಲ್ಲಿ ಕಳ್ಳರು, ಕೊಲೆಗಾರರು. ದರೋಡೆಕೋರರು, ವಂಚಕರು ಇದ್ದರೂ, ಅವರೆಲ್ಲರಲ್ಲಿಯೂ ಆ ವಾಸುದೇವನೇ ಕಾಣುತ್ತಿದ್ದನು. ಅದೂ ಈ ತಮದಿಂದ ಕೂಡಿದ ಅವರೆಲ್ಲರ ಆತ್ಮದಲ್ಲಿಯೂ ಹಾಗು ತಪ್ಪು ಕಾರ್ಯಗಳಿಗಾಗಿ ಉಪಯೋಗಿಸಲ್ಪಟ್ಟ ಅವರ ದೇಹದಲ್ಲಿಯೂ ಆ ವಾಸುದೇವನೇ ಕಾಣುತ್ತಿದ್ದ ಎನ್ನುವದು ಮನದಟ್ಟಾಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/6**

## "ಕರ್ಮಯೋಗಿನ್" ಮತ್ತು "ಧರ್ಮ"

ಜೇಲಿನಿಂದ ಹೊರಬಂದ ಮೇಲೆ, ಶ್ರೀ ಅರವಿಂದರಿಗೆ ಕಂಡುಬಂದದ್ದೇನೆಂದರೆ, ಭಾರತದ ಇಡೀ ರಾಜಕೀಯ ವ್ಯವಸ್ಥೆಯೇ ಬದಲಾಗಿದ್ದ ಸಂಗತಿ. ರಾಷ್ಟ್ರೀಯವಾದದ ಬಹುತೇಕ ಸದಸ್ಯರು, ಮುಖಂಡರು ಇನ್ನೂ ಸೆರೆಯಲ್ಲಿಯೇ ಇದ್ದರು. ಇಲ್ಲವೇ ಸ್ವಯಂ ತಮಗೆ ತಾವೇ ಹೇರಿಕೊಂಡ ನಿರ್ಲಿಪ್ತತೆಯ ಬಂಧನದಲ್ಲಿ ಇದ್ದರು. ಅದೂ ಅಲ್ಲದೇ ಇಡೀ ವಾತಾವರಣವೇ ಹತಾಶಗೊಂಡ, ಸ್ಥೈರ್ಯವನ್ನು ಕಳೆದುಕೊಂಡ ಸ್ಥಿತಿಯಲ್ಲಿ ಇತ್ತು. ಆದರೂ ಭಾರತದ ಅಂತರಂಗದ ಆಶಾಭಾವನೆಯೇನೂ ಬತ್ತಿರಲಿಲ್ಲ. ಅದನ್ನು ಬಂಧಿಸಲಾಗಲೀ ಅದುಮಲಾಗಲೀ ಶಕ್ಯವೂ ಇರಲಿಲ್ಲ. ಆದರೆ ತಾತ್ಕಾಲಿಕವಾಗಿ ಅದನ್ನು ಬಿಗಿಯಾಗಿ ಇಡಲು ಯತ್ನಿಸಲಾಗಿತ್ತು. ಅದೇ ಒತ್ತಡವಿದ್ದರೂ ಸಹಿತ ಅದು ಮತ್ತೆ ಪುಟಿದೇಳಲು ಪ್ರಯತ್ನದಲ್ಲಿತ್ತು. ಹೀಗಾಗಿ ಶ್ರೀ ಅರವಿಂದರು ತಮ್ಮ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದ್ದರು. ಪ್ರತಿವಾರವೂ ಕಲಕತ್ತೆಯಲ್ಲಿ ಸಭೆಯನ್ನು ನಡೆಸಿದರು. ಆದರೆ ಸಾವಿರಾರು ಉತ್ಸಾಹಿಗಳು ಭಾಗವಹಿಸುತ್ತಿದ್ದ

ಹಿಂದಿನ ಸಭೆಗಳಿಂತಿರದೇ, ಈಗ ಕೇವಲ ನೂರಾರು ಸಂಖ್ಯೆಯಲ್ಲಿ ಮಾತ್ರ ಭಾಗವಹಿಸುವಿಕೆ ಕಾಣುತ್ತಿತ್ತು. ಮೊದಲಿದ್ದ ಉತ್ಸಾಹವೂ ಈಗ ಇರಲಿಲ್ಲ; ಜೀವನವೂ ಇರಲಿಲ್ಲ. ಶ್ರೀ ಅರವಿಂದರು ಇದಕ್ಕಾಗಿ ಹಲವು ಜಿಲ್ಲೆಗಳಿಗೆ ಪ್ರವಾಸ ಕೈಕೊಂಡು ಅಲ್ಲೆಲ್ಲವೂ ಹುರಿದುಂಬಿಸುವ ಭಾಷಣ ಮಾಡಿದ್ದರು. ಅಂತಹ ಒಂದು ಘಟನೆಯೇ "ಉತ್ತರಪಾರಾ ಭಾಷಣ". ಆ ಭಾಷಣದಲ್ಲಿ ಅವರು ಪ್ರಪ್ರಥಮ ಬಾರಿಗೆ ತಮ್ಮ ಯೋಗಸಾಧನೆಯ ಕುರಿತು ಸಾರ್ವಜನಿಕವಾಗಿ ಮಾತನಾಡಿದ್ದರು. ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಹೇಳಿದ್ದರು. ಅದೇ ಸಮಯಕ್ಕೆ ಎರಡು ಸಾಪ್ತಾಹಿಕ ಪತ್ರಿಕೆಗಳನ್ನೂ ಪ್ರಾರಂಭಿಸಿದರು, ಒಂದು ಇಂಗ್ಲೀಷಿನಲ್ಲಿ "ಕರ್ಮಯೋಗಿನ್" ಮತ್ತೊಂದು ಬಂಗಾಲಿಯಲ್ಲಿ– "ಧರ್ಮ". ಈ ಪತ್ರಿಕೆಗಳಿಗೆ ಅಪಾರ ಪ್ರಮಾಣದ ಓದುಗರೂ ದೊರೆತಿದ್ದರು. ಹೀಗಾಗಿ ಅದು "ವಂದೇ ಮಾತರಂ"ನಂತಾಗದೇ, ಸ್ವಯಂ ಸಾಮರ್ಥ್ಯದೊಂದಿಗೆ ಪ್ರಕಟಗೊಳ್ಳುತ್ತಿದ್ದವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/61**

**ನಿರ್ಗಮನದ ಸಂಗತಿಗಳು**

ಸಾರ್ವಜನಿಕ ಬದುಕಿನಿಂದ ಯೋಗ ಮಾರ್ಗಕ್ಕೆ ನಿರ್ಗಮಿಸಿದ ಘಟನೆಗಳು ಇಲ್ಲಿವೆ. ನಾನು 'ಕರ್ಮಯೋಗಿನ್' ಕಾರ್ಯಾಲಯದಲ್ಲಿ ಕರ್ತವ್ಯದಲ್ಲಿ ಇದ್ದಾಗ ನನಗೆ ಒಂದು ಆಂತರಿಕ ವಾಣಿಯು ಕೇಳಿಸಿತು. ಅದು ಹೇಳುತ್ತಿರುವ ವಿಷಯವೆಂದರೆ, "ಒಬ್ಬ ಪೊಲೀಸ ಉನ್ನತಾಧಿಕಾರಿಯಿಂದ ಪತ್ರಿಕೆಯ ಕಾರ್ಯಾಲಯದ ತಪಾಸಣೆಯು ಮರುದಿನ ನಡೆಯಲಿದೆ; ಹಾಗೂ ನನ್ನನ್ನು ಬಂಧಿಸಲಾಗುತ್ತದೆ." ಎನ್ನುವದಾಗಿತ್ತು. (ಮರುದಿನ ಆ ಪೊಲೀಸ್ ಅಧಿಕಾರಿಯಿಂದ ಕಾರ್ಯಾಲಯವೇನೋ ತಪಾಸಣೇಗೆ ಒಳಗಾಯಿತು ಆದರೆ ತಪಾಸಣೆಗೆ ಇರಲೇಬೇಕಾಗಿದ್ದ ಪರವಾನಿಗೆ ಪತ್ರವನ್ನು ಅವರು ನನಗೆ ತೋರಿಸಿರಲಿಲ್ಲ. ಇದುವರೆಗೂ ಅದರ ಬಗೆಗೆ ಹೆಚ್ಚಿನದೇನೂ ಗೊತ್ತಾಗಿಲ್ಲ. ಆದರೆ ಆ ಪತ್ರಿಕೆಯ ವಿರುದ್ಧ ಮುಂದೆ ವಿಚಾರಣೆ ಪ್ರಾರಂಭವಾಗುವವರೆಗೂ ಅದರ ಬಗೆಗೆ ನನಗೇನೂ ತಿಳಿದಿರಲಿಲ್ಲ. ಅಷ್ಟೊತ್ತಿಗಾಗಲೇ ನಾನು ಆಗಲೇ ಚಂದ್ರಾನಗರಿಗೆ ಬಂದಾಗಿತ್ತು, ನಾನು ಆ ಸುದ್ದಿಗಳನ್ನು ಕೇಳುವ ಹೊತ್ತಿಗೆ ಅವುಗಳೆಲ್ಲ ಆವರಣ ಕಟ್ಟಿಕೊಂಡೇ ರೂಪಿಸಲ್ಪಟ್ಟಿದ್ದ ಟಿಪ್ಪಣಿಗಳಂತಾಗಿಯೇ

ಇದ್ದವು. ಅಂತಹ ಸಂದರ್ಭದಲ್ಲಿಯೂ ಆ ಊರ್ಧ್ವದಿಂದ ಒಂದು ಗಂಭೀರ ಆದೇಶವೊಂದು (ವಾಣಿಯೊಂದು) – ಆ ಧ್ವನಿ ನನಗೀಗಾಗಲೇ ಪರಿಚಿತವಿದ್ದ ಧ್ವನಿಯಾಗಿತ್ತು – ಕೇಳಿ ಬಂದಿತು. ಅದು ಹೇಳಿದ್ದು "ಪಾಂಡಿಚೇರಿ ನೆಲೆಗೆ ಹೋಗು" ಎನ್ನುವ ಮೂರೇ ಮೂರು ಶಬ್ದಗಳು. ಇದಾದ ಹತ್ತೆ ಹತ್ತು ನಿಮಿಷದ ಅವಧಿಯಲ್ಲಿ ಅಥವಾ ಅದಕ್ಕೂ ಮುನ್ನವೇ ನಾನು ಚಂದ್ರಾನಗರಿಯತ್ತ ಸಾಗುತ್ತಿದ್ದ ದೋಣಿಯಲ್ಲಿದ್ದೆ. ರಾಮಚಂದ್ರ ಮುಜುಮದಾರರು, ನನಗೆ ಈ ಕಾರ್ಯದಲ್ಲಿ ಮಾರ್ಗದರ್ಶಕರಾಗಿ ಘಾಟ್ ಕಡೆಗೆ ತೆರಳುವಂತೆ ಮಾಡಿದ್ದರು. ಅದಕ್ಕಾಗಿ ಒಂದು ಬೋಟ್ ಅನ್ನೂ ಸಹಿತ ಸಿದ್ಧಪಡಿಸಿದ್ದರು. ನಾನು ಅಷ್ಟೇ ವೇಗವಾಗಿ, ನನ್ನ ಸಂಬಂಧಿ ಬರೇನ್ ಘೋಷ ಹಾಗೂ ಮಣೀ(ಸುರೇಶಚಂದ್ರ ಚಕ್ರವರ್ತಿ)ಯರ ಸಂಗಡ ಆ ಬೋಟಿನಲ್ಲಿ ಹೊಕ್ಕಿದ್ದೆ. ಅವರು ಸಹಿತ ನನ್ನೊಡನೆ ಚಂದ್ರಾನಗರಿಗೆ ಬಂದರು. ಬೇರೆ ಯಾವದೇ ವಿಷಯಕ್ಕೂ ಲಕ್ಷ್ಯಕೊಡದೇ ನನ್ನ ಸಂಗಡ ಬಂದಿದ್ದರು. ನಾವು ನಮ್ಮ ಗುರಿಯನ್ನು ತಲುಪಿದಾಗ ಇನ್ನೂ ಕತ್ತಲೆ ಆವರಿಸಿಕೊಂಡೇ ಇತ್ತು. ಅವರು ಮತ್ತೆ ಮರಳಿ ಕಲಕತ್ತೆಗೆ ಹಿಂದುರಿಗಿದ್ದರು. ನಂತರದಲ್ಲಿ ನಾನು ರಹಸ್ಯವಾಗಿಯೇ ಯೋಗಸಾಧನೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡೆ, ಹೀಗಾಗಿ ನನ್ನ ಎರಡು ಪತ್ರಿಕೆಗಳ ಸಂಗಡ ಇದ್ದ ಜೀವಸ್ಪಂದನವು ಆ ಅವಧಿಯಿಂದ ನಿರ್ಬಂಧಿಸಲ್ಪಟ್ಟಂತಾಯಿತು.

ಆ ಮೇಲೆ "ಅದೇ ರೀತಿಯ ಜಲಯಾನಕ್ಕೆ" ಬಂದ ಆದೇಶದಿಂದ ನಾನು ಚಂದ್ರಾನಗರಿಯನ್ನು ಬಿಟ್ಟು ಪಾಂಡಿಚೇರಿಗೆ ಬಂದೆ. ಅಂದು ಏಪ್ರೀಲ್ 4 1910. ಈ ಎಲ್ಲ ವಿವರಣೆಗಳಲ್ಲಿ ಕೆಲವೊಂದು ಸಂಗತಿಗಳನ್ನು ಇಲ್ಲಿ ಜೋಡಿಸಲು ಇಚ್ಛಿಸುತ್ತೇನೆ. ನಾನು (ಮುಂಬಯಿಯಲ್ಲಿ) ಲೇಲೇಯವರನ್ನು ಬಿಟ್ಟಿದ್ದೆನು. ಅದೂ ಸೂರತ್ ಕಾಂಗ್ರೆಸ್ ಸಮ್ಮೇಳನದ ಸಮಯದಲ್ಲಿ. ನಂತರದಲ್ಲಿ ಅವರೊಡನೆ ನನ್ನ ಸಂಪರ್ಕವಿರಲಿಲ್ಲ. ನಾನು ಅವರೊಡನೆ ಬಡೋದಾ, ಪೂನಾ, ಹಾಗೂ ಮುಂಬಯಿಯಲ್ಲಿ ವಾಸಿಸಿದ್ದೇನೆ. ಆಂತರಿಕವಾಗಿ ಲಭ್ಯವಾಗುವ ಮಾರ್ಗದರ್ಶನವನ್ನು ಪಡೆಯುವ ಸಲುವಾಗಿ ಇರುವ ನಿಯಮಗಳನ್ನು ನಾನು ಸ್ವೀಕರಿಸಿದ್ದೇನೆ. ಈ ಮೂಲಕ ಆ ದೈವೀ ಶಕ್ತಿಯು ಯಾವ ರೀತಿಯಲ್ಲಿ ನಮ್ಮನ್ನು ಚಲಿಸಲು ಅನುಮತಿಸುತ್ತಿದೆಯೋ ಅದೇ ರೀತಿಯಲ್ಲಿ ಮುಂದುವರೆಯಲೂ ನಿರ್ಧರಿಸಿದ್ದೆ, ನಾನು ಸೆರೆಮನೆ ವಾಸದಲ್ಲಿದ್ದಾಗ ಆದ ಆಧ್ಯಾತ್ಮಿಕ ಸಾಧನೆಯ ಪ್ರಗತಿಯು, ಇದೀಗ ಆತ್ಮದ ಪರಮಾತಿ ಪರಮ ವಿಶ್ವ ನಿಯಮದಂತೆಯೇ

ಪರಿವರ್ತನೆಗೊಂಡಿತ್ತು. ಇವೆಲ್ಲ ಕಾರಣಗಳಿಂದಾಗಿ ನಾನು ತಕ್ಷಣವೇ ಆ ಆದೇಶದ ಪ್ರಕಾರವೇ ವಿಧೇಯನಾಗಿ ಕಾರ್ಯಪ್ರವೃತ್ತನಾಗಬೇಕಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/89–90**

**ತಪಸ್ಸಾಧನೆಯ ತುರೀಯ ಹಂತ**

ತದನಂತರದ ಅವಧಿಯಲ್ಲಿ ಶ್ರೀ ಅರವಿಂದರು ಪಾಂಡಿಚೇರಿಯಲ್ಲಿ ತಮ್ಮ ಯೋಗ ಸಾಧನೆಯನ್ನು ಮುಂದುವರೆಸಿದ್ದರು. ದಿನದಿಂದ ದಿನಕ್ಕೆ ಅದರಲ್ಲಿ ಪ್ರಗತಿ ಹೊಂದುತ್ತ ಯೋಗದ ಸಾರಸರ್ವಸ್ವವನ್ನೂ ಒಳಗೊಳ್ಳುತ್ತ ನಡೆದರು. ಸಾರ್ವಜನಿಕ , ರಾಜಕೀಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರು. ಆದರೆ ಭಾರತೀಯ ನ್ಯಾಶನಲ್ ಕಾಂಗ್ರೆಸ್ಸಿನ ಪುನರ್ ಸ್ಥಾಪನೆಯ ಸಭೆಯಲ್ಲಿ ಮಾತ್ರ – ಒಂದು ಬಾರಿ ಮಾತ್ರ – ಅಧ್ಯಕ್ಷತೆ ವಹಿಸಿಕೊಂಡಿದ್ದರು. ಹಾಗೂ ಅದೇ ಸಂದರ್ಭದಲ್ಲಿಯೇ ಇನ್ನು ಮುಂದೆ ಯಾವುದೇ ರೀತಿಯಲ್ಲಿಯೂ ರಾಜಕೀಯ, ಸಾರ್ವಜನಿಕ ಹೇಳಿಕೆಗಳನ್ನು ಕೊಡುವದಿಲ್ಲ, ಆಧ್ಯಾತ್ಮಿಕ ವಿಷಯಗಳನ್ನು ಬಿಟ್ಟು ಬೇರೆ ಯಾವುದೇ ಹೇಳಿಕೆಗಳನ್ನು ಕೊಡುವ ವಿಷಯದಿಂದ ನಿವೃತ್ತಿಯನ್ನೂ ಘೋಷಿಸಿಕೊಂಡರು. ಜೊತೆಗೆ ಆಧ್ಯಾತ್ಮಿಕ ವಿಷಯಗಳ ಕುರಿತು "ಆರ್ಯ" ಪತ್ರಿಕೆಯಲ್ಲಿ ಮಾತ್ರವೇ ಲೇಖನಗಳನ್ನು ಬರೆಯುವದರ ಹೊರತಾಗಿ ಬೇರೆ ಎಲ್ಲಿಯೂ ಲೇಖನಗಳನ್ನೂ ಬರೆಯುವ ವಿಷಯದಲ್ಲಿಯೂ ನಿವೃತ್ತಿಯನ್ನು ಘೋಷಿಸಿದ್ದರು. ಮುಂದಿನ ಕೆಲ ವರ್ಷಗಳ ಕಾಲ ಪರಿವರ್ತನಾ ಸಂಘಟನೆಗಳೊಂದಿಗೆ ಖಾಸಗಿ ಸಂಪರ್ಕವನ್ನು ಮಾತ್ರ ಮುಂದುವರೆಸಿಕೊಂಡಿದ್ದರು. ಅದೂ ಅವರ ಮುಂದಾಳ್ತನ ವಹಿಸಿದ್ದ ಒಂದೆರಡು ಗುಂಪುಗಳ ಸಂಗಡ ಮಾತ್ರ ಆಗಿತ್ತು. ಅವುಗಳಲ್ಲಿ ಒಂದಿಬ್ಬರು ವ್ಯಕ್ತಿಗಳ ಸಂಗಡ ಮಾತ್ರವೇ ಖಾಸಗೀ ಸಂಪರ್ಕವನ್ನು ಮುಂದುವರೆಸಿಕೊಂಡು ಬಂದರು. ಆದರೆ ಇದನ್ನೂ ಸಹಿತ ಮುಂದಿನ ಕೆಲವೇ ದಿನಗಳಲ್ಲಿ ಸಂಪೂರ್ಣ ನಿಲ್ಲಿಸಿದ್ದರು. ಅಂದರೆ ಯಾವುದೇ ರೀತಿಯಲ್ಲಿಯೂ ರಾಜಕೀಯ ಚಟುವಟಿಕೆಗಳಿಂದ ಸಂಪೂರ್ಣವಾಗಿಯೇ ತಮ್ಮನ್ನು ತಾವು ನಿವೃತ್ತಿಗೊಳಿಸಿಕೊಂಡು ತಮ್ಮ ಯೋಗ ಸಾಧನೆಯಲ್ಲಿ ತಲ್ಲೀನರಾದರು.

ಭವಿಷ್ಯದ ಬಗೆಗೆ ಅವರ ದೃಷ್ಟಿಕೋನವು ಅತ್ಯಂತ ಖಚಿತತೆಯಿಂದ ಕೂಡಿತ್ತು. ಭಾರತದ ಸ್ವಾತಂತ್ರ್ಯದ ಘಟನೆಯನ್ನು ಅವರು ಪೂರ್ವಭಾವಿಯಾಗಿಯೇ ಗ್ರಹಿಸಿ,

ಅದರ ಬಗೆಗೆ ಭರವಸೆಯನ್ನೂ ಸಹಿತ ಕೊಟ್ಟಿದ್ದರು. ಬ್ರಿಟಿಷ್ ದೇಶವು ಭಾರತದ ಈ ವಿರೋಧಿ ಹೋರಾಟದ ಒತ್ತಡವನ್ನು ತಾಳಲಾಗದೇ, ಅದರಲ್ಲೂ ಅಂತಾರಾಷ್ಟ್ರೀಯ ಘಟನಾವಳಿಗಳ ಕಾರಣದಿಂದಾಗಿ, ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲೇಬೇಕಾಗಿ ಅನಿವಾರ್ಯತೆಗೆ ಸಿಲುಕುತ್ತದೆ, ಆ ದಿಸೆಯತ್ತಲೇ ಭಾರತದ ಹೋರಾಟವು ಚಲಿಸುತ್ತದೆ ಎಂದೂ ತಿಳಿಸಿದ್ದರು. ಯಾವುದೇ ವಿರೋಧದ ಹಾಗೂ ಹಿಂಜರಿಕೆ ಇದ್ದರೂ ಸಹಿತ, ಸ್ವಾತಂತ್ರ್ಯವನ್ನು ಕೋಡಲೇಬೇಕಾಗಿತ್ತು. ಇದಕ್ಕಾಗಿ ಸೈನ್ಯ ಬಲವನ್ನು ಉಪಯೋಗಿಸುವ ಸಂದರ್ಭವೇ ಬರುವದಿಲ್ಲ ಎನ್ನುವದೂ ಅವರ ಅಭಿಪ್ರಾಯವಾಗಿತ್ತು. ಹೀಗಾಗಿ ರಾಷ್ಟ್ರೀಯವಾದಿ ಚಿಂತನಗಳಿಗೆ ಯಾವುದೇ ಧಕ್ಕೆ ಒದಗದಂತೆ ಇರುವ ಸಂದರ್ಭವನ್ನು ಗ್ರಹಿಸಿದ್ದರು. ಈಗಾಗಲೇ ಆ ರಾಷ್ಟ್ರೀಯವಾದಿ ಶಕ್ತಿಯು ಸ್ಥಾಪಿಸಲ್ಪಟ್ಟಿದ್ದು ಹಾಗೂ ಅದನ್ನು ಅದೇ ರೀತಿಯಲ್ಲಿಯೇ ಮುಂದುವರೆಸಿಕೊಂಡು ಹೋಗಬೇಕಾಗಿತ್ತು.

ಹೀಗಾಗಿ ರಾಜಕೀಯದಲ್ಲಿ ಅವರ ನೇರ ಪಾತ್ರವನ್ನು ಹಾಗೂ ವೈಕ್ತಿಕ ಭಾಗವಹಿಸುವಿಕೆಯನ್ನು ದೀರ್ಘಾವಧಿಯಲ್ಲಿ ಮುಂದುವರೆಸಿಕೊಂಡು ಹೋಗುವದು ಬೇಡವೆಂದು ನಿರ್ಧರಿಸಿದ್ದರು. ಇವೆಲ್ಲ ವಿಷಯಗಳಿಗಿಂತಲೂ ಆಧ್ಯಾತ್ಮಿಕ ಕಾರ್ಯದ ಮಹತ್ತು ಅವರೆದುರು ಅತ್ಯಂತ ಪ್ರಮುಖವಾದ ಹಾಗೂ ಹೆಚ್ಚು ಸ್ಫುಟವಾದ ಸಂಗತಿಯಾಗಿತ್ತು. ಅದಕ್ಕಾಗಿ ತಮ್ಮ ಸರ್ವಶಕ್ತಿಯನ್ನೂ ಆ ವಿಷಯದ ಕಡೆಗೆ ಕೇಂದ್ರೀಕರಿಸಲು ನಿರ್ಧರಿಸಿದ್ದರು.

*

**ಕಾರ್ಯದ ನೂತನ ಕ್ಷೇತ್ರ ಹಾಗೂ ಪರಿವರ್ತನೆ**

ಇವೆಲ್ಲ ಸಂಗತಿಗಳಿಂದ ಹಾಗೂ ಬಹಳಷ್ಟು ಜನರು ಊಹಿಸಿದ ಹಾಗೆ, ಶ್ರೀ ಅರವಿಂದರು ಆಧ್ಯಾತ್ಮದ ಅತ್ಯುನ್ನತ ಹಂತದ ಅನುಭವದಿಂದ ಹೊರಬಂದು, ಅದಕ್ಕೆ ಮುಂದೆ ಮತ್ತೂ ಸಾಧನೆ ಮಾಡುವದನ್ನು ಬಿಟ್ಟು, ಹೊರಬಂದು ಜಗತ್ತಿನ ಆಸಕ್ತಿಯನ್ನು ಬಿಟ್ಟು, ಅದರಲ್ಲೂ ಭಾರತದ ಭವಿಷ್ಯವನ್ನು ಬಿಟ್ಟುಕೊಟ್ಟರು ಎಂದು ಅರ್ಥೈಸುವಂತಿಲ್ಲ. ಅವರ ಪ್ರತಿಯೊಂದು ಯೋಗದ ಅನುಭವದಿಂದ ಆದ ಅನುಭಾವಗಳ ತತ್ತ್ವವು ದೈವತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವದಷ್ಟೇ ಅಲ್ಲದೇ ಅದು ಪರಿಪೂರ್ಣ ಚೈತನ್ಯದಲ್ಲಿ ಪರಿವರ್ತನವಾಗುವದನ್ನು ಆಶಿಸಿತ್ತು. ಅದೂ ಅಲ್ಲದೇ ಮಾನವ–ಕುಲವನ್ನೇ, ಇಡೀ ಜಗತ್ತಿನಲ್ಲಿರುವ ಎಲ್ಲ ಚಟುವಟಿಕೆಗಳನ್ನೇ ಈ

ಆಧ್ಯಾತ್ಮಿಕ ಚೈತನ್ಯದ ವ್ಯಾಪ್ತಿಯಲ್ಲಿಯೇ ರೂಪಿಸಿ ಮತ್ತು ಕ್ರಿಯೆಗಿಳಿಸಲು ಹಾಗೂ ಜೀವನದ ತಳಹದಿಯನ್ನಾಗಿಸಬೇಕು ಮತ್ತು ಆಧ್ಯಾತ್ಮಿಕ ಅರ್ಥವನ್ನೂ ಸದಾ ಹೊಂದಿರಬೇಕು ಎನ್ನುವ ಆಶಯದಲ್ಲಿ ಇವೆ.

ತಮ್ಮ ನಿವೃತ್ತಿಯನ್ನು ಘೋಷಿಸಿದ ನಂತರದಲ್ಲಿ ಶ್ರೀ ಅರವಿಂದರು ಇಡೀ ಜಗತ್ತಿನಲ್ಲಿ ಘಟಿಸುತ್ತಿರುವ ಘಟನೆಗಳ ಬಗೆಗೆ ತಮ್ಮ ಲಕ್ಷ್ಯವನ್ನು ನಿಗದಿಗೊಳಿಸಿದರು. ಜಗತ್ತಿನಲ್ಲಿ ಘಟಿಸುತ್ತಿರುವ ಹಾಗೂ ಭಾರತದಲ್ಲಿಯೂ ಘಟಿಸುತ್ತಿರುವ ಸಂದರ್ಭದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಮಧ್ಯ ಪ್ರವೇಶಿಸಿ – ಅದೂ ಆಧ್ಯಾತ್ಮಿಕ ಶಕ್ತಿಯೊಂದಿಗೆ ಪ್ರವೇಶಿಸಿ – ಆತ್ಮಿಕವಾಗಿ ಹಾಗೂ ಪ್ರಶಾಂತ ಅನುಭವದ ಅಂಶವೂ ಅದರಲ್ಲಿ ಇರುವಂತೆ ಪಾತ್ರ ವಹಿಸಿದ್ದರು. ಇದು ಅವರಿಗೆ ಆಧ್ಯಾತ್ಮಿಕ ಅನುಭವದಲ್ಲಿ ಆದ ಒಂದು ಅಂಶವೂ ಆಗಿತ್ತು. ಯೋಗದಲ್ಲಿ ಪ್ರಗತಿ ಸಾಧಿಸಿದ ಹಂತದಲ್ಲಿ ಸಹಜವಾಗಿ ದೃಶ್ಯವಾಗುವ ಈ ಘಟನೆಗಳು, ಸಾಮಾನ್ಯ ಮನಸ್ಸಿನ ಸಾಮಾನ್ಯ ಚಟುವಟಿಕೆಗೆ ಹಾಗೂ ಬಲಗಳ ಮತ್ತು ಜೀವನದ ಅಥವಾ ಜಡದಲ್ಲಿರುವ ದೇಹದ, ಹಾಗೂ ಇನ್ನಿತರ ಬಲಗಳ ಬಗೆಗೆ ಅಂದರೆ ಯಾವ ಶಕ್ತಿಗಳು ಕ್ರಿಯೆಗೆ ಇಳಿಯುತ್ತವೆಯೋ ಅವುಗಳ ಹಿಂದೆ ಮತ್ತು ಇವೆಲ್ಲವುಗಳ ಹಿಂದೆಯೂ ಊರ್ಧ್ವದಲ್ಲಿ ಇರುವ ಪರಮಶಕ್ತಿಯಾಗಿರುತ್ತದೆ. ಅದೂ ಅಲ್ಲದೇ ಆಧ್ಯಾತ್ಮಿಕ ಚೈತನ್ಯದ ಪಥದಲ್ಲಿ ಪ್ರಗತಿ ಸಾಧಿಸಿದವರು ಪಡೆಯುವ ಆಧ್ಯಾತ್ಮಿಕ ಶಕ್ತಿಯ ಪರಮಾನುಭವವನ್ನು, ಅದನ್ನು ಪಡೆಯುವಲ್ಲಿ ಉಳಿದವರು ಅಷ್ಟೊಂದು ಲಕ್ಷ್ಯ ಕೊಡುವದಿಲ್ಲ. ಅಥವಾ ಪಡೆದುಕೊಂಡಿದ್ದರೂ ಸಹಿತ, ಅದನ್ನು ಬಳಸಲು ಸಿದ್ಧರಿರುವದಿಲ್ಲ. ಆ ಶಕ್ತಿಯು (ಸಾಮರ್ಥ್ಯವು) ಎಲ್ಲ ಬಲಕ್ಕಿಂತಲೂ ಬೃಹತ್ ಆಗಿರುತ್ತದೆ. ಪರಿಣಾಮಕಾರೀ ಆಗಿರುತ್ತದೆ. ಈ ತೆರನಾದ ಮಹದ್ಬಲವನ್ನು ಸಾಧಿಸಿದ ಕೂಡಲೇ ಶ್ರೀ ಅರವಿಂದರು ಅದನ್ನು ಉಪಯೋಗಿಸಿಕೊಂಡರು. ಮೊದಮೊದಲು ಅದನ್ನು ಕೇವಲ ತಮ್ಮ ವೈಯಕ್ತಿಕ ಕಾರ್ಯಕ್ಕಷ್ಟೇ ಸೀಮಿತಗೊಳಿಸಿಕೊಂಡಿದ್ದರು. ಆದರೆ ತದನಂತರದಲ್ಲಿ ಇಡೀ ಜಗತ್ತಿನ ಶಕ್ತಿಗಳ ಮೇಲೆ ಚಿರಂತನವಾದ ಕ್ರಿಯೆಗಿಳಿಯುವಂತೆ ರೂಪಿಸಿದರು.

ಆದರೆ ಯಾವ ಕಾರಣದಿಂದಲೂ ಇವುಗಳ ಪರಿಣಾಮಗಳ ಬಗೆಗೆ ಅಥವಾ ಬೇರೆ ತೆರನಾದ ಕ್ರಿಯೆಯ ಅವಶ್ಯಕತೆ ಇದೆ ಎನ್ನುವ ವಿಷಯದ ಬಗೆಗೆ ಅಸಂತೃಪ್ತಿಯನ್ನೂ ಹೊಂದಿರಲೇ ಇಲ್ಲ.

ಆದಾಗ್ಯೂ ಎರಡು ಬಾರಿ ಇದನ್ನು ಸಾರ್ವಜನಿಕವಾಗಿ ಸಹಕಾರಿ–ಯಾಗುವಂತೆ ರೂಪುಗೊಳಿಸುವಲ್ಲಿ, ಇದನ್ನು ಹೆಚ್ಚಿನ ಸೇರ್ಪಡೆಯನ್ನಾಗಿಸಿ ಉಪಯೋಗಿಸುವದನ್ನು ತಿಳಿಸಿಕೊಡುವದೂ, ಸೂಕ್ತವೆಂದು ಕಂಡುಕೊಂಡಿದ್ದರು.

ಅದರಲ್ಲಿ ಪ್ರಥಮವಾಗಿ ಎರಡನೇ ಮಹಾಯುದ್ಧದ ಘಟನೆ. ಮೊದಲು ಈ ವಿಷಯದಲ್ಲಿ ಸ್ವತಃ ಶ್ರೀ ಅರವಿಂದರೇ ಅದರ ಕುರಿತು ಕ್ರಿಯಾತ್ಮಕವಾಗಿ ಭಾಗವಹಿಸಿರಲಿಲ್ಲ; ಆದರೆ ಯಾವಾಗ ಹಿಟ್ಲರನು ತನ್ನನ್ನು ವಿರೋಧಿಸುವ ಮಾನವ ಸಮುದಾಯವನ್ನು, ಶಕ್ತಿಗಳನ್ನು ಹೊಸಕಿ ಹಾಕಲು ಪ್ರಾರಂಭಿಸಿ, ನಾಝೀವಾದವೇ ಇಡೀ ಜಗತ್ತನ್ನು ತನ್ನ ಬಿಗಿಮುಷ್ಟಿಯಲ್ಲಿ ಹಿಡಿದುಕೊಳ್ಳುತ್ತದೆ ಎನ್ನುವದು ತಿಳಿದಾಗ, ಆ ವಿಷಯದಲ್ಲಿ ಮಧ್ಯ ಪ್ರವೇಶಿಸಿದ್ದರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/64–65 – ಶ್ರೀ ಅರವಿಂದರು**

**ಹಗೆತನವಿಲ್ಲದ ಹೋರಾಟ**

*ಶ್ರೀ ಅರವಿಂದರು ಎಂದಿಗೂ ತಮ್ಮ ರಾಜಕೀಯ ಚಟುವಟಿಕೆಗಳಲ್ಲಿ ದ್ವೇಷದ ಅಥವಾ ಹಗೆತನದ ಪ್ರವೃತ್ತಿಯನ್ನು ತೋರಿರಲಿಲ್ಲ. ಇಂಗ್ಲಂಡಿನ ವಿಷಯದಲ್ಲಿಯೂ ಸಹಿತ, ಅವರಿಗೆ ಎಂದಿಗೂ ಆ ದೇಶದ ಮೇಲೆ ದ್ವೇಷವಿರಲಿಲ್ಲ. ಅಥವಾ ಇಂಗ್ಲೀಷ ಜನರ ಬಗೆಗೂ ಸಹಿತ ಅವರಿಗೆ ಯಾವುದೇ ದ್ವೇಷ ಭಾವನೆ ಇರಲಿಲ್ಲ. ಅವರು ಆಶಿಸಿದ್ದು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ. ಏಕೆಂದರೆ ಅದು ಜನ್ಮಸಿದ್ಧ ಹಕ್ಕು ಆಗಿದೆಯೇ ವಿನಾ ತಪ್ಪು ಆಳ್ವಿಕೆಯ ಅಥವಾ ಪೀಡನಾಯುಕ್ತವಾದ ಕ್ರಮವಾಗಿರಲಿಲ್ಲ; ಒಂದು ವೇಳೆ ಯಾರೇ ಆಗಿರಲಿ, ಹಿಂಸಾಪ್ರವೃತ್ತಿಯಿಂದ ದಾಳಿ ಮಾಡಿದ್ದಲ್ಲಿ ಅದು ಅವರ ದೃಷ್ಟಿಕೋನವಾಗಿರುತ್ತದೆ ಅಥವಾ ಅವರ ರಾಜಕೀಯ ಕ್ರಿಯೆಯಾಗಿರುತ್ತದೆಯೇ ವಿನಾ ಬೇರೆ ಯಾವುದೇ ಉದ್ದೇಶವನ್ನು ಹೊಂದಿರುವದಿಲ್ಲ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/80–81 – ಶ್ರೀ ಅರವಿಂದರು**

# ಸ್ಮೃತಿಗಳು

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

**ಭಾರತಮಾತೆ**

*ನೀವು ಬರೆದ ಹಾಗೆ ನೀವು ನೋಡಿದ ಭಾರತವು ಬರಿ ಜಡ, ನಿಸ್ಸತ್ವ ಭೌತಿಕ–ವಸ್ತುವಲ್ಲ, ಆದರೆ ಓ ಜನನಿ, ಜೀವಂತ ಜನನಿ, ನಾನು ನಂಬಿದ ಹಾಗೆ ನೀವು ನಿಜವನ್ನೆ ನೋಡಿದ್ದೀರಿ.*

ನನ್ನ ಪ್ರೀತಿ ಪಾತ್ರರೆ, ನಾನು ಭೌತಿಕವಾದಿಯಲ್ಲಾ. ನಾನು ಭಾರತವನ್ನು ಆಸಕ್ತ ಅಥವಾ ನಿರಾಸಕ್ತ ಜನರು ವಾಸಿಸುವ ಬರೀ ಒಂದು ಭೌಗೋಳಿಕ ಪ್ರದೇಶ ಎಂದು ನೋಡಿರಲಿಲ್ಲಾ, ಹಾಗಿದ್ದರೆ ಬೇರೆ ರೀತಿಯಲ್ಲಿ ಆ ಪ್ರದೇಶಕ್ಕೆ ಕೆಲಸ ಮಾಡುತ್ತಿದ್ದೆ.

*ನೀವು ಬರೆದಿದ್ದರಲ್ಲಿ ಏನೋ ಇದೆಯೋ? ಅಥವಾ ಕಾವ್ಯಾತ್ಮಕ ಮಾತ್ರವಾ ಅಥವಾ ದೇಶಭಕ್ತಿಯ ಭಾವವಿದೆಯಾ?*

ಕಾವ್ಯಾತ್ಮಕ ಅಥವಾ ದೇಶಭಕ್ತಿಯ ಭಾವನೆ ನಿನ್ನಲ್ಲಿರುವ ಇಂದ್ರಿಯಗಳು, ನಿನ್ನ ಮಾಂಸ, ಚರ್ಮ ಎಲುಬು ಮತ್ತು ಇತರ ವಸ್ತುಗಳನ್ನು ವಾಸ್ತವಿಕ ಎಂದು ಸಾರುತ್ತವೆ, ಆದರೆ ನಿನ್ನ ಮನಸ್ಸು ಮತ್ತು ಆತ್ಮ ನಿಜವಾಗಿ ಅಸ್ತಿತ್ವದಲ್ಲಿಲ್ಲಾ, ನಾವು ತಿನ್ನುವ ಆಹಾರ ಮತ್ತು ಸ್ರವಿಸುವ ಗ್ರಂಥಿಗಳ ಕ್ರಿಯೆಗಳಿಂದಾದ ಮಾನಸಿಕ ಛಾಪು ಎಂದಿಸುತ್ತದೆ. ಕಾವ್ಯ ಮತ್ತು ದೇಶಭಕ್ತಿಯ ಮೂಲ ಇದೆ ಆಗಿದೆ ಮತ್ತು ಅವು ನಿರಾಕಾರವಾಗಿವೆ. ತಥಾಸ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/17**

**ಸ್ವದೇಶಿ ಚಳುವಳಿಯ ನಂತರ**

ಒಂದು ರೀತಿಯಲ್ಲಿ ಸ್ವದೇಶಿ ಚಳುವಳಿಯು ಆದರ್ಶವನ್ನು ಹೊಂದಿತ್ತು (ಯಾವುದೇ ಉನ್ನತ ಚಳುವಳಿಯು ಆದರ್ಶವಿಲ್ಲದೆ ಮುಂದುವರಿಯಲಾರದು), ಆದರೆ ಅದು ಧ್ಯೇಯ ಮತ್ತು ಮಾರ್ಗದಲ್ಲಿ ಪ್ರಾಯೋಗಿಕವಾಗಿ ಪರಿಪೂರ್ಣವಾಗಿತ್ತು. ನಮಗೆ ಗೊತ್ತಿರುವ ಹಾಗೆ ಭಾರತದ ಬಡತನ ಮತ್ತು ಅದರ ಪತನ ಹೊಂದಿದ ಸ್ಥಿತಿ. ಈ ಪರಿಸ್ಥಿತಿಯನ್ನು ಸುಧಾರಿಸಲು ಬರೀ ಖಾದಿ

ಮತ್ತು ಹಿಂದಿ ಪ್ರಚಾರದಿಂದ ಸಾಧ್ಯವಿಲ್ಲ. ನಾವು ಕೈಗಾರಿಕಾ ಭಾರತವನ್ನು ಅಭಿವೃದ್ಧಿಪಡಿಸಲು ಬೆಂಬಲಿಸುತ್ತೇವೆ. ಹೊಸ ಕ್ಷೇತ್ರ ಮತ್ತು ಸಕಾರಾತ್ಮಕ ಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕಾಗಿ ಸ್ವದೇಶಿ ಚಳುವಳಿಯನ್ನು ಬೆಂಬಲಿಸುತ್ತವೆ. ಗುಡಿಕೈಗಾರಿಕೆಯನ್ನು ನಾವು ನಮ್ಮ ದೃಷ್ಟಿಯಿಂದ ತೆಗೆದುಹಾಕಿಲ್ಲಾ, ಆದರೆ ಅದರ ಗೀಳಿಲ್ಲಾ. ಸ್ವದೇಶಿ ಚಳುವಳಿ ಕೆಳಗೆ ಹೇಳಿದಂತೆ ಪ್ರಾಯೋಗಿಕ ಪರಿಣಾಮಗಳನ್ನು ಬೀರಿತು.

(ಅ) ಅದು ಮಂದಗಾಮಿ ಸುಧಾರಣೆವಾದಿಗಳ ರಾಜಕೀಯವನ್ನು ನಾಶಮಾಡಿತ್ತು ಮತ್ತು ಕ್ರಾಂತಿಕಾರಿ ಮನೋಭಾವವನ್ನು ಹರಡಿತ್ತು (ಈಗ ಜವಾಹರಲಾಲ್ ಕರೆದಹಾಗೆ) ಮತ್ತು ಅದೇ ಸ್ವಾತಂತ್ರ್ಯಕ್ಕಾಗಿ ಆದರ್ಶವಾದವೂ ಆಗಿತ್ತು.

(ಬ) ಅದು ಕೈಗಾರಿಕಾ ಭಾರತವನ್ನು ಬೆಳೆಸಲು ತಳಹದಿ ಹಾಕಿತು, (ಪೂರ್ವಭಾವಿಯಾಗಿ ಔದ್ಯೌಗಿಕವಾಗಿ ಅಲ್ಲಾ, ಅದು ನಮ್ಮ ಉದ್ದೇಶ ಕೂಡ ಅಲ್ಲಾ) ಈಗ ಅದು ನಿಧಾನವಾಗಿ ಬೆಳೆಯುತ್ತದೆ.

(ಕ) ಅದು ವರ್ತಕ ಮತ್ತು ವಿದ್ಯಾವಂತ ಮಧ್ಯಮ ವರ್ಗಗಳನ್ನು ರಾಜಕೀಯ ಕ್ಷೇತ್ರಕ್ಕೆ ಕರೆತಂದಿತು. ಬರೀ ಮಧ್ಯಮ ವರ್ಗವನ್ನು ಮಾತ್ರವಲ್ಲಾ ಮಂದಗಾಮಿಯ ಧೊರಣೆಯ ಕೆಲವರಿಗೆ ಮಾತ್ರ ಇದು ತಲುಪಿತು.

(ಡ) ಅದಕ್ಕೆ ರೈತಾಪಿ ವರ್ಗವನ್ನು ತಲುಪಲು ಸಮಯವಿರಲಿಲ್ಲಾ, ಆದರೆ ಅದು ಕೆಲಸ ಮಾಡಲು ಪ್ರಾರಂಭಿಸಿತ್ತು. ಬೆಡಗಿನ ಮತ್ತು ಅಸ್ಪಷ್ಟ ಆದರೆ ಉತ್ತೇಜಕ ವಿಧಾನಗಳಿಂದ ಗಾಂಧಿ ಅದನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ದರು.

(ಈ) ಅದು ಆಂದೋಲನ ಪದ್ಧತಿಯನ್ನು ಹುಟ್ಟುಹಾಕಿತು. ಅದಕ್ಕೆ ಗಾಂಧಿಯವರು ಇನ್ನು ಮೂರು ಅಥವಾ ನಾಲ್ಕು ಆಶ್ಚರ್ಯಕರವಾದುವುಗಳನ್ನು ಜೋಡಿಸಿದರು – ಖಾದಿ, ಹಿಂದುತ್ವ, ಸತ್ಯಾಗ್ರಹ, ನಗುತ್ತಾ ಏಟು ತಿನ್ನುವುದರಲ್ಲಿ ಸುಖ, ಖಿಲಾಫತ್, ಹರಿಜನ ಇತ್ಯಾದಿ ಇವೆಲ್ಲವೂ ಪ್ರಚಾರದ ಮೌಲ್ಯಗಳನ್ನು ಹೊಂದಿದ್ದವು. ನಾವು ಶಕ್ತಿಯ ಮೂಲಕ ಏನನ್ನಾದರೂ ಸೇರಿಸಿದ್ದೆ ಆದರೆ ಕೆಲವೊಂದು ಸಲ ಜೀವಂತಿಕೆಯನ್ನು ಕಳೆದುಕೊಳ್ಳುತ್ತವೆ. ಆದರೆ ಈ ವಿಷಯಗಳ ಪರಿಣಾಮ ಒಳ್ಳೆಯದು ಎಂಬುದು ಹೆಚ್ಚಿನ ಸಂಶಯಾತ್ಮಕ ಪ್ರಶ್ನೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/19–20**

**ಹಿಂದು–ಮುಸ್ಲಿಂರ ವ್ಯವಹಾರ (ಸಂಬಂಧ)**

ಹಿಂದು–ಮುಸ್ಲಿಂರ ವಿಷಯಕ್ಕೆ ಸಂಬಂದಪಟ್ಟಂತೆ ಮುಸ್ಲಿಂರನ್ನು ಸಮಾಧಾನ ಪಡಿಸಲು ಭಾರತದ ಉನ್ನತವಾದ ಭೂತಕಾಲವನ್ನು ಅಥವಾ ಅದರ ಆಧ್ಯಾತ್ಮಿಕತೆಯನ್ನು ಕಸದ ಬುಟ್ಟಿಗೆ ಎಸೆಯುವುದು ನನಗೇನು ತರ್ಕವೆನಿಸುವುದಿಲ್ಲ, ಮತ್ತು ಮುಸ್ಲಿಮರೂ ಇಂತಹ ಘಟನೆಯಿಂದ ಸಮಾಧಾನ ಪಡುವುದಿಲ್ಲ. ಹಿಂದು ಮುಸ್ಲಿಂರ ವಿಭಜನೆ ಸ್ವದೇಶಿ ಚಳುವಳಿಯಿಂದಾಗಲಿ, ಆದರೆ ಕಾಂಗ್ರೆಸ್ ಕೋಮು ತತ್ವವನ್ನು ಒಪ್ಪಿಕೊಂಡಿದ್ದರಿಂದ (ಇಲ್ಲಾ ಆಗ ತಿಲಕರು ದೊಡ್ಡ ತಪ್ಪನ್ನು ಮಾಡಿದರು?) ಮತ್ತು ಖಿಲಾಪತ್ ಚಳುವಳಿಯಿಂದ ಸಮಾಧಾನವಾಗುವುದರ ಬದಲಾಗಿ ಅವರನ್ನು ಬೇರೆ ಮಾರ್ಗದಲ್ಲಿ ತಂದು ನಿಲ್ಲಿಸಿತು. ಲಖನೌದಲ್ಲಿ ಕೋಮು ತತ್ವಕ್ಕೆ ಮನ್ನಣೆ ಸಿಕ್ಕ ನಂತರ ಅದು ಖಾಯಂ ಆಗಿ ಭಾರತದಲ್ಲಿ ಪ್ರತ್ಯೇಕ ರಾಜಕೀಯ ಗುಂಪಾಗಿಬಿಟ್ಟಿತು. ಅದು ಆ ರೀತಿ ಆಗಲೇಬಾರದಾಗಿತ್ತು; ಖಿಲಾಪತ್ ವ್ಯವಹಾರದಿಂದ ಪ್ರತ್ಯೇಕ ಗುಂಪಾದದ್ದು ಮುಂದೆ ಅದು ಸಂಘಟಿತ ಪ್ರತ್ಯೇಕ ರಾಜಕೀಯ ಶಕ್ತಿಯಾಗಿ ಮಾರ್ಪಟ್ಟಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/21**

**ಅಪಾಯಕಾರಿಯಾಗಿ ಜೀವಿಸುವುದು**

ನನಗೆ ಸಂಕ್ಷಿಪ್ತ, ಪೂರ್ವ, ಮತ್ತು ತಪ್ಪಿಲ್ಲದ ನಿಖರವಾದ ನನ್ನ ಆತ್ಮಚರಿತ್ರೆಯನ್ನು ನೋಡಿ ನಾನೇ ಉತ್ತರಿಸಬೇಕಾದಾಗ ಬಹಳ ಆಶ್ಚರ್ಯವಾಗುತ್ತದೆ. ನಾನು ಆಮೇಲೆ ಆಲೋಚಿಸಿದ ಹಾಗೆ ಅಗತ್ಯಕ್ಕಿಂತ ಹೆಚ್ಚಾಗಿ ಅಪಾಯಕಾರಿಯಾಗಿ ಬದುಕುತ್ತಿದ್ದೇವೆ, ಅದು ಗೊತ್ತಾದ ಕಾರಣ ಕೊಡವಿನಿಂತೆ, ಈಗ ನನ್ನ ಒಂದೆ ಉತ್ತರ!!!!!!! ನೀನು ಸುರಕ್ಷಿತ, ಶ್ರೀಮಂತ, ಆರಾಮದಾಯಕ ಮತ್ತು ಸಾಹಸವಿಲ್ಲದ ವೃತ್ತಿ ನನಗೆ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಜಗತ್ತಿನಲ್ಲಿ ಹಣವಿಲ್ಲದಾಗ ಮನುಷ್ಯನು ಅಪಾಯಕ್ಕೆ ಸಿಲುಕುತ್ತಾನೆ. ಕಾರ್ಲ್‌ಮಾರ್ಕ್ಸ್ ಕೂಡ ಇನ್ನೂ ಉತ್ತಮವಾದ ಆರ್ಥಿಕ ಜಗತ್ತನ್ನು ಮಾಡಲಾಗಲಿಲ್ಲಾ! ನಿಚೆ ಹೇಳಿದ ಹಾಗೆ ಅದೇ ಏನು ಅಪಾಯಕಾರಿಯಾಗಿ ಜೀವಿಸುವುದು ಎಂದು ನನಗೆ ಆಶ್ಚರ್ಯವಾಗುತ್ತದೆ?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/22**

ಒಂದು ಆಂದೋಲನವನ್ನು ಯಾವುದೇ ಸಹಾಯವಿಲ್ಲದೇ ಮತ್ತು ಸಂಪೂರ್ಣವಾಗಿ ದೇಶ ತಯಾರಿಲ್ಲದಿದ್ದಾಗ ಪ್ರಾರಂಭಿಸಿ ಮತ್ತು ಹತ್ತು ವರ್ಷಗಳ ತನಕ ಮುಂದುವರೆಸುವುದೆಂದರೆ ಅದರ ಅರ್ಥ ಅಪಾಯಕಾರಿಯಾಗಿ ಜೀವಿಸುವುದು ಎಂದು ನಮಗರಿವಾಗಬೇಕು. ನೀವು ಶಬ್ದಗಳಿಂದ ನಿಮ್ಮ ತಲೆಯನ್ನು ಚಚ್ಚಿಕೊಂಡರೂ ನಿಮಗೆ ಆ ಸರಳ ಸತ್ಯ ಗ್ರಹಿಕೆಯಾಗುವುದಿಲ್ಲ ಮತ್ತು ಯೋಗದಲ್ಲಿ, ಅದರ ಭಯಾನಕ, ಭಯಂಕರ, ಕರುಣಾಜನಕ ಮತ್ತು ದುರಂತ ಅಪಾಯದ ಬಗ್ಗೆ ನೀವೇ ನಿಮ್ಮ ಅತ್ಯುನ್ನತ ಧ್ವನಿಗೆ ಅನುಸಾರವಾಗಿ ಉಪಸಂಹಾರ ಮಾಡುತ್ತೀರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/23**

**ರಾಜಕೀಯ ಮತ್ತು ಸತ್ಯ–ಮಾತಾನಾಡುವುದು**

*ಸತ್ಯ ಮಾತಾನಾಡುವುದು ಕೆಲವೊಂದು ಸಲ ಅಪಾಯಕಾರಿಯಲ್ಲವೆ, ಉದಾ, ರಾಜಕೀಯದಲ್ಲಿ, ಯುದ್ಧದಲ್ಲಿ, ಚಳುವಳಿಗಳಲ್ಲಿ? ನಿಜ ನುಡಿಯಬೇಕೆನ್ನುವ ನೈತಿಕವಾದಿಗಳು ಯಾವಾಗಲೂ ಏನ್ನನ್ನೂ ಮುಚ್ಚಿಡಬಾರದೆನ್ನುವವರಾಗಿದ್ದಾರೆ. ಆದರೆ ಇದರಿಂದ ಯೋಜನೆ ಮತ್ತು ನಡೆಗಳು ಒಂದು ಪಕ್ಷದಿಂದ ಪ್ರತಿಪಕ್ಷಕ್ಕೆ ಗೊತ್ತಾಗಿ ದುರಂತವನ್ನು ತರುವುದಿಲ್ಲವೆ?*

ನಮ್ಮ ಯೋಜನೆ ಮತ್ತು ನಡೆಗಳನ್ನು ಯಾರಿಗೆ ತಿಳಿಸಿಕೊಡಬೇಕಾಗಿಲ್ಲವೋ ಅವರಿಗೆ ಬಹಿರಂಗ ಪಡಿಸುವ ಅವಶ್ಯಕತೆಯಿಲ್ಲ, ಯಾರು ತಿಳಿದುಕೊಳ್ಳುತ್ತಾರೆಯೋ ಅಥವಾ ತಮ್ಮ ಯಾರು ವೈರಿಗಳಾಗಿ ವರ್ತಿಸುತ್ತಾರೆಯೋ ಅಥವಾ ತಮ್ಮ ಜ್ಞಾನದಿಂದ ಎಲ್ಲವನ್ನು ಕೆಡಿಸುತ್ತಾರೆಯೋ ಅಂತಹವರಿಂದ ರಹಸ್ಯ ಕಾಪಾಡುವುದಕ್ಕೆ ಸಂಪೂರ್ಣ ಸಹಮತವಿದೆ. ಮತ್ತು ಗುರು–ಶಿಷ್ಯರ ಅಪರೂಪದ ಸಂಬಂಧದ ಹೊರತಾಗಿ ಆಧ್ಯಾತ್ಮದ ವಿಷಯದಲ್ಲಿ ಕೂಡ ರಹಸ್ಯ ಸಹಜ. ನಾವು ಹೊರಗಿನವರಿಗೆ ಆಶ್ರಮದಲ್ಲಿ ಏನು ನಡೆಯುತ್ತಿದೆಯೆಂದು ತಿಳಿದುಕೊಳ್ಳಲು ಬಿಡುವುದಿಲ್ಲ. ಆದರೆ ಆಶ್ರಮದ ಬಗ್ಗೆ ಯಾವುದೇ ಸುಳ್ಳನ್ನು ಹೇಳುವುದಿಲ್ಲ. ಬಹಳ ಯೋಗಿಗಳು ತಮ್ಮ ಆಧ್ಯಾತ್ಮದ ಅನುಭವಗಳ ಬಗ್ಗೆ ಬೇರೆಯವರಲ್ಲಿ ಹೇಳಿಕೊಳ್ಳುವುದಿಲ್ಲ, ಅಥವಾ ಕಾಲ ಪಕ್ವವಾಗುವವರೆಗೆ ಮತ್ತು ರಹಸ್ಯವಾಗಿಡುವದು ಪ್ರಾಚೀನ ಯೋಗಿಗಳಲ್ಲಿ

ಸಾಮಾನ್ಯ ನಿಯಮವಾಗಿತ್ತು. ನೈತಿಕತೆ ಅಥವಾ ಆಧ್ಯಾತ್ಮಿಕ ನಿಯಮಗಳು ನಮ್ಮನ್ನು ಜಗತ್ತಿನೆದುರಿಗೆ ನಮ್ಮನ್ನು ಬಯಲುಗೊಳಿಸುವುದಕ್ಕಾಗಿ ಅಥವಾ ನಮ್ಮ ಹೃದಯಗಳು ಮತ್ತು ಮನಸ್ಸುಗಳನ್ನು ತೆರೆದಿಡುವುದಕ್ಕಾಗಿ ಒತ್ತಾಯಿಸುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/24**

ಹಿಂದುತ್ವ ಮನುಷ್ಯನ ಸ್ವಭಾವವನ್ನು ಗುರುತಿಸುತ್ತದೆ ಮತ್ತು ಅಸಾಧ್ಯವಾದ ಬೇಡಿಕೆಗಳನ್ನು ಅದು ಇಡುವುದಿಲ್ಲ. ಅದು ಸಂತನಿಗೆ ಒಂದು ಆದರ್ಶವನ್ನು, ಮತ್ತೊಂದು ಕ್ರಿಯಾವಾದಿ ಮನುಷ್ಯನಿಗೆ, ಮೂರನೆಯದು ವರ್ತಕನಿಗೆ, ಮತ್ತು ನಾಲ್ಕನೆಯದು ಸೇವಕರಿಗೆ. ಎಲ್ಲರಿಗೂ ಒಂದೇ ಆದರ್ಶವೆಂದರೆ ವರ್ಣ ಸಂಕರವನ್ನು ತರುವುದೆಂದರ್ಥ. ಅದು ಕರ್ತವ್ಯದಲ್ಲಿ ದ್ವಂದ್ವ ಮತ್ತು ಸಮಾಜವನ್ನು ಹಾಗೂ ಜನಾಂಗವನ್ನು ನಾಶಮಾಡುತ್ತದೆ. ನಾವು ಸೇವಕರಾಗಿ ಸಂತೃಪ್ತಿ ಹೊಂದಿದ್ದರೆ, ಬಹಿಷ್ಕಾರ ಮಾಡುವುದು ಪಾಪ. ನಮಗೆ ಅದು ಪ್ರೀತಿಯನ್ನು ಉಲ್ಲಂಘನೆ ಮಾಡಿದಂತಲ್ಲ, ಆದರೆ ಶೂದ್ರನ ಕರ್ತವ್ಯದಲ್ಲಿನ ವಿಧೇಯತನವನ್ನು ಮತ್ತು ಸಂತೃಪ್ತಿಯನ್ನು ಉಲ್ಲಂಘಿಸಿದ ಹಾಗೆ, ರಾಜಕಾರಣವು ಕ್ಷತಿಯರ ಕ್ಷೇತ್ರ ಮತ್ತು ಕ್ಷತ್ರಿಯನ ನೈತಿಕತೆಯೆಂದರೆ ರಾಜಕಾರಣದ ಕ್ರಿಯೆಗಳನ್ನು ಆಳುವುದೇ ಆಗಿದೆ. ಬ್ರಾಹ್ಮಣತ್ವದ ಸಂಕೇತಗಳಾದ ಸಂತತ್ವದೊಂದಿಗೆ ಬಳಲುವಿಕೆಯನ್ನು ರಾಜಕಾರಣದ ಮೇಲೆ ಹೇರಿದರೆ ವರ್ಣ ಸಂಕರವನ್ನು ಅನುಷ್ಠಾನಿಸಿದಂತೆ ಆಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 7/1118**

**ಸೂರತ್ ಕಾಂಗ್ರೆಸ್ (1907)**

ಚರಿತ್ರೆಯು ನಿರ್ಣಾಯಕ ಸಂಗತಿಗಳನ್ನು ವಿರಳವಾಗಿ ದಾಖಲಿಸುತ್ತದೆ, ಆದರೆ ಇವೆಲ್ಲವೂ ಪರದೆಯ ಹಿಂದೆ ಘಟಿಸಿದವು; ಪ್ರದರ್ಶನವನ್ನು ಪರದೆಯ ಮುಂದೆ ದಾಖಲಿಸಿದವು; ನಾವು ಕೊಟ್ಟ ಆದೇಶದಿಂದ (ತಿಲಕರೊಡನೆ ಸಮಾಲೋಚಿಸದೆ) ಕಾಂಗ್ರೆಸ್ ಒಡೆಯಿತು ಎಂದು ಕೆಲವೇ ಜನರಿಗೆ ಗೊತ್ತಿದೆ. ಹಾಗೂ ಹೊಸದಾಗಿ ನಿರ್ಮಾಣವಾದ ಸೌಮ್ಯವಾದಿ ಸಭೆಯನ್ನು ಸೇರಲು ನಿರಾಕರಿಸಿದ್ದಕ್ಕೂ ಕೂಡ ನಾನೇ ಹೊಣೆ, ಇವೆರಡು ಸೂರತ್‌ನಲ್ಲಿ ಆದ ನಿರ್ಣಾಯಕ ಘಟನೆಗಳು, ಬಂಗಾಳದಲ್ಲಿ ನಾನು ಕರೆಕೊಟ್ಟ ಚಳುವಳಿಯೂ

ಕೂಡ ಉಗ್ರಸ್ವರೂಪ ತಾಳಿತು ಅಥವಾ ಕ್ರಾಂತಿಕಾರಿ ಚಳುವಳಿಯ ಸ್ಥಾಪನೆ ಸಣ್ಣ ಪ್ರಮಾಣದಲ್ಲಿ ಗೊತ್ತಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/26**

**ರಾಜಕೀಯ ಬಿಟ್ಟಿದ್ದು**

ನಾನು ರಾಜಕೀಯದಲ್ಲಿ ಇನ್ನೇನನ್ನೂ ಮಾಡಲಾಗುವುದಿಲ್ಲವೆಂದು ಅದನ್ನು ಬಿಡಲಿಲ್ಲ ಎಂದು ಇಲ್ಲಿ ನಾನು ಹೇಳಬಹುದು; ಅಂತಹ ಒಂದು ಕಲ್ಪನೆಯೂ ನನ್ನಿಂದ ಬಹಳ ದೂರವಿದೆ. ನಾನು ಅದರಿಂದ ದೂರ ಬಂದ ಕಾರಣ ನನ್ನ ಯೋಗಕ್ಕೆ ಹಸ್ತಕ್ಷೇಪ ಆಗಬಾರದೆಂದು. ಮತ್ತು ಈ ವಿಷಯಕ್ಕೆ ನನಗೆ ವಿಶಿಷ್ಟ ಆದೇಶ ಬಂದಿದ್ದ ಕಾರಣ, ನಾನು ರಾಜಕೀಯದ ನಂಟನ್ನು ಪೂರ್ಣವಾಗಿ ಕಡಿದುಕೊಂಡೆ, ಆದರೆ ನಾನು ಅದನ್ನು ಬಿಡುವ ಮೊದಲು ನನ್ನೊಳಗೆ ಅನಿಸಿದ್ದೆನೆಂದರೆ – ನಾನು ಪ್ರಾರಂಭಿಸಿದ ಕೆಲಸವು, ಅದರ ಗಮ್ಯದೆಡೆಗೆ, ನಾನು ಅಂದುಕೊಂಡಂತೆಯೇ ಮುಂದುವರೆಯುತ್ತದೆ. ಬೇರೆಯವರಿಂದ ಮತ್ತು ನಾನು ಪ್ರಾರಂಭಿಸಿದ ಈ ಆಂದೋಲನ ಕೊನೆಯಲ್ಲಿ ನನ್ನ ವೈಯಕ್ತಿಕ ಕ್ರಿಯೆ ಅಥವಾ ಸಾನಿಧ್ಯವಿಲ್ಲದೆ ಇದ್ದರೂ ಕೂಡ ಖಂಡಿತ ಜಯ ಸಾಧಿಸುತ್ತದೆ. ನಾನು ಹಿಂದೆ ಸರಿದಿದ್ದು ಹತಾಶೆಯ ಮನೋಭಾವ ಅಥವಾ ಇದು ಉಪಯೋಗವಿಲ್ಲದ್ದು ಎನ್ನುವ ಕಾರಣದಿಂದಲ್ಲ. ಇನ್ನು ಮಿಕ್ಕಂತೆ, ಜಗತ್ತಿನ ವ್ಯವಹಾರದಲ್ಲಿನ ಯಾವುದೇ ಮುಖ್ಯ ಘಟನೆ ಪ್ರಾರಂಭಗೊಂಡು ಕೊನೆಯಲ್ಲಿ ವಿಫಲವಾದುದರ ಹಿಂದೆ ನನ್ನ ಸಂಕಲ್ಪವಿರಲಿಲ್ಲ, ಆದರೂ ಜಗತ್ತಿನ ಶಕ್ತಿಗಳಿಗೆ ಅದನ್ನು ಭರಿಸಲು ಬಹಳ ಸಮಯ ಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/26**

**ಆದೇಶ**

ಶ್ರೀ ಅರವಿಂದರು ಚಂದ್ರನಗರಿಗೆ ತೆರಳಿದ್ದು ಮೇಲಿನಿಂದ ಬಂದ ಶಕ್ತಿಯುತವಾದ ಆದೇಶದಿಂದ. ಅದು ಹಠಾತ್ ನಿರ್ಧಾರದ ಪರಿಣಾಮವಾಗಿತ್ತು. ಮತ್ತು ಅದನ್ನು ಕ್ಷಿಪ್ರವಾಗಿ ಮತ್ತು ರಹಸ್ಯವಾಗಿ ಯಾರೊಂದಿಗೂ ಸಮಾಲೋಚಿಸದೆ, ಅಥವಾ ಯಾರ ಕಡೆಯಿಂದಲೂ ಸಲಹೆ ಪಡೆಯದೆ

ತೆಗೆದುಕೊಂಡದ್ದಾಗಿತ್ತು. ಅವರೂ ನೇರವಾಗಿ ಧರ್ಮ ಕಛೇರಿಯಿಂದ ಘಾಟ ಸ್ಥಳಕ್ಕೆ ಹೋದರು – ಅವರು ಮಠಕ್ಕೆ ಭೇಟಿಕೊಡಲಿಲ್ಲ, ಯಾರು ಅವರನ್ನೂ ಬೀಳ್ಕೊಡಲಿಲ್ಲ; ಒಂದು ದೋಣಿ ಅವರನ್ನು ಸ್ವಾಗತಿಸಿತು, ಇಬ್ಬರು ಯುವಕರೊಂದಿಗೆ ಅದರೊಳಗೆ ಪ್ರವೇಶಿಸಿ ತಮ್ಮ ಗಮ್ಯದೆಡೆಗೆ ಸಾಗಿದರು. ಅಲ್ಲಿ ಅವರು ಉಳಿದುಕೊಳ್ಳುವ ಮನೆಯನ್ನು ಸಹಿತ ರಹಸ್ಯವಾಗಿಡಲಾಗಿತ್ತು. ಅವರಿಗೆ ಮತ್ತು ಕೆಲವರಿಗೆ ಮಾತ್ರ ಅಲ್ಲಿ ಅನುಕೂಲ ಮಾಡಿಕೊಟ್ಟಿದ್ದ ಶ್ರಿಜುತ್ ಮೋತಿಲಾಲರಿಗೆ ಮಾತ್ರ ಗೊತ್ತಿತ್ತು. ಶ್ರೀ ಅರವಿಂದರು ತೆರಳಿದ ಮೇಲೆ ಸಹೋದರಿ ನಿವೇದಿತಾರವರಿಗೆ ಗೌಪ್ಯವಾಗಿ ಈ ವಿಷಯವನ್ನು ತಿಳಿಸಿದ್ದರು. ಮತ್ತು "ಕರ್ಮಯೋಗಿನ್" ಪತ್ರಿಕೆಯ ಕೆಲಸವನ್ನು ಅವರ ಅನುಪಸ್ಥಿತಿಯಲ್ಲಿ ನೀವು ಮುಂದುವರೆಸಬೇಕೆಂದು ಕೇಳಿಕೊಳ್ಳಲಾಯಿತು. ಚಂದ್ರನಾಗೋರಿನಿಂದ ಪಾಂಡಿಚೇರಿಗೆ ಪ್ರಯಾಣಿಸುವ ವೇಳೆ, ಶ್ರೀ ಅರವಿಂದರು ಸಹೋದರನಿಂದ ತಮ್ಮ ಪೆಟ್ಟಿಗೆಯನ್ನು ತೆಗೆದುಕೊಳ್ಳಲು ಕಾಲೇಜು ಹಜಾರದಲ್ಲಿ ಎರಡು ನಿಮಿಷ ನಿಂತಿದ್ದರು. ಮತ್ತು ಅಲ್ಲಿಂದ ತಮ್ಮ ಪ್ರಯಾಣಕ್ಕಾಗಿ ಬ್ರಿಟಿಷ್ ವೈದ್ಯಾಧಿಕಾರಿಯಿಂದ ಪ್ರಮಾಣ ಪತ್ರ ಪಡೆದರು. ಮತ್ತೆ ಬೇರೆ ಎಲ್ಲಿಗೂ ಭೇಟಿ ಕೊಡಿಲಿಲ್ಲ. ಅವರು ಆ ಆವಿಹಡಗು 'ಡುಪ್ಲೆಕ್ಸ್' ಗೆ ನೇರವಾಗಿ ಹೋದರು. ಮತ್ತು ಮರುದಿನ ಮುಂಜಾನೆ ಪಾಂಡಿಚೇರಿಯ ಹಾದಿಯಲ್ಲಿದ್ದರು.

ಈ ಸಮಯದಲ್ಲಾಗಲಿ ಅಥವಾ ಯಾವುದೇ ಸಮಯದಲ್ಲಾಗಲಿ ಶ್ರೀ ಅರವಿಂದರು ಶಾರಾದಾದೇವಿಯವರಿಂದ ಉಪದೇಶ ಪಡೆಯಲಿಲ್ಲ ಎಂದು ಇಲ್ಲಿ ಹೇಳಬಹುದು; ಅಲ್ಲದೆ ಯಾರಿಂದಲೂ ಔಪಚಾರಿಕವಾಗಿ ದೀಕ್ಷೆಯನ್ನು ಪಡೆಯಲಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/90–91**

**ದೈವೀ ಸಾಧಕ**

ನನ್ನ ಯೋಗವು 1904ರಿಂದ ಯಾವಾಗಲೂ ವೈಯಕ್ತಿಕ ಮತ್ತು ಏಕಾಂತದಲ್ಲಿಯೇ ಪ್ರಾರಂಭಗೊಂಡಿತು. ನನ್ನ ಸುತ್ತಲಿರುವರೆಲ್ಲರಿಗೂ ನಾನೊಬ್ಬ ಸಾಧಕ ಎಂದು ಗೊತ್ತಿತ್ತು. ಆದರೆ ಏನೇ ಅಂತರಂಗದಲ್ಲಾದ ಸಂಗತಿಗಳನ್ನು ನಾನು ಒಳಗೇ ಇಟ್ಟುಕೊಳ್ಳುತ್ತಿದ್ದುದರಿಂದ ಅವರೆಲ್ಲರಿಗೂ ನನ್ನ ಬಗ್ಗೆ ಸ್ವಲ್ಪ ಹೆಚ್ಚಿನ

ಸಂಗತಿ ಏನೂ ಗೊತ್ತಿರಲಿಲ್ಲ. ನಾನು ಆಧ್ಯಾತ್ಮಿಕ ಅನುಭವಗಳ ಬಗ್ಗೆ ಪ್ರಥಮವಾಗಿ ಅಲ್ಲಿ ಮಾತನಾಡಿದ್ದೆ. ನಾನು ಪಾಂಡಿಚೇರಿಗೆ ಹೋಗುವ ತನಕ ಯಾರನ್ನು ಶಿಷ್ಯರನ್ನಾಗಿ ಸ್ವೀಕರಿಸಿರಲಿಲ್ಲ; ಯಾರು ನನ್ನೊಂದಿಗಿದ್ದರೋ ಅಥವಾ ಪಾಂಡಿಚೇರಿಯಲ್ಲಿ ನನ್ನನ್ನು ಸೇರಿಕೊಂಡರೋ ಅವರೊಂದಿಗೆ, ಗೆಳೆಯರೊಡನೆ ಮತ್ತು ಜೊತೆಗಾರರ ಸಂಭಂದವಿತ್ತೆ ವಿನಹ; ಗುರು ಮತ್ತು ಶಿಷ್ಯರ ರೀತಿಯಲ್ಲಿ ಅಲ್ಲ; ರಾಜಕೀಯ ತಳಹದಿ ಮೇಲೆ ಅವರೆನ್ನೆಲ್ಲಾ ತಿಳಿದಿದ್ದೆ, ಆದರೆ ಆಧ್ಯಾತ್ಮದ ತಳಿಹದಿಯ ಮೇಲೆ ಅಲ್ಲ. ತದನಂತರ ಆಧ್ಯಾತ್ಮಿಕ ಸಂಬಂಧಗಳು ಕ್ರಮೇಣ ಬೆಳೆದವು. ಶ್ರೀಮಾತೆಯವರು ಜಪಾನನಿಂದ ಹಿಂದುರಿಗದ ನಂತರ ಆಶ್ರಮ ಸ್ಥಾಪನೆಯಾಯಿತು ಅಥವಾ ತನ್ನಷ್ಟಕ್ಕೆ ತಾನೇ ಸ್ಥಾಪನೆಯಾಗುವಂತಾಯಿತು ಅದೂ 1926ರಲ್ಲಿ. ನಾನು ನನ್ನ ಯೋಗವನ್ನು ಗುರುವಿಲ್ಲದೆ 1904ರಲ್ಲಿ ಪ್ರಾರಂಭಿಸಿದೆ; 1904ರಲ್ಲಿ ಮಹಾರಾಷ್ಟ್ರದ ಯೋಗಿಯಿಂದ ಮುಖ್ಯವಾದ ಸಹಾಯ ಪಡೆದದ್ದು, ನನ್ನ ಯೋಗಕ್ಕೆ ಉತ್ತಮ ತಳಹದಿ ದೊರೆತಂತಾಯಿತು; ಆದರೆ ಶ್ರೀಮಾತೆಯವರು ಭಾರತಕ್ಕೆ ಬರುವವರೆಗೆ ಆಧ್ಯಾತ್ಮಿಕ ವಿಷಯಕ್ಕೆ ಸಂಬಂಧಪಟ್ಟಂತೆ ಯಾರಿಂದಲೂ ಸಹಾಯ ಪಡೆಯಲಿಲ್ಲ.

ನನ್ನ ಸಾಧನೆ ಮೊದಲು ಮತ್ತು ಹಾಗೂ ನಂತರದಲ್ಲೂ ಸಹಿತ ಯಾವುದೇ ಗ್ರಂಥಗಳ ಮೇಲೆ ನಿರ್ಭರವಾಗಿರಲಿಲ್ಲ. ಆದರೆ ವೈಯಕ್ತಿಕ ಅನುಭವಗಳು ಅಂತರಂಗದಿಂದ ಬಂದು ಆವರಿಸುತ್ತಿದ್ದವು. ಜೈಲಿನಲ್ಲಿ ಗೀತೆ ಮತ್ತು ಉಪನಿಷತ್ತು ನನ್ನೊಟ್ಟಿಗಿದ್ದವು, ಗೀತೆಯ ಯೋಗವನ್ನು ಅಭ್ಯಾಸ ಮಾಡಿದೆ, ಮತ್ತು ಉಪನಿಷತ್ತುಗಳ ಸಹಾಯದಿಂದ ಧ್ಯಾನ ಮಾಡಿದೆ; ಗ್ರಂಥಗಳಿಂದ ನಾನು ನಿರ್ದೇಶನ ಪಡೆದೆ; ಪಾಂಡಿಚೇರಿಗೆ ಹೋದ ನಂತರ ವೇದಗಳನ್ನು ಓದಲು ಪ್ರಾರಂಭಿಸಿದೆ. ಅವುಗಳಿಂದ ಸಾಧನೆಗೆ ಮಾರ್ಗದರ್ಶನಕ್ಕಿಂತ ಹೆಚ್ಚಾಗಿ ನನಗಾದ ಅನುಭವಗಳು ಖಚಿತವಾದುವು. ಕೆಲವು ಸಲ ನನಗೇನಾದರೂ ಪ್ರಶ್ನೆಗಳು ಅಥವಾ ಕಷ್ಟಗಳು ಎದುರಾದಾಗ ಈ ಗೀತೆಯ ಅಗಾಧ ಜ್ಞಾನದ ಕಡೆ ನೋಡಿ ಸಹಾಯ ಪಡೆದೆ, ಆದರೆ ನೀವು ಹೇಳಿದ ಹಾಗೆ ಗೀತೆಯ ಕೂಡವೂ ಆಗಲಿಲ್ಲ. ಇದು ಸತ್ಯ. ಜೈಲಿನಲ್ಲಿ ಹದಿನೈದು ದಿನ ಏಕಾಂತ ಧ್ಯಾನದಲ್ಲಿದ್ದಾಗ ಸ್ವಾಮಿ ವಿವೇಕಾನಂದರ ಧ್ವನಿ ಮತ್ತು ಅವರ ಸಾನಿಧ್ಯದ ಅನುಭವವಾಯಿತು, ಇದು ಪುಸ್ತಕದಲ್ಲಿ ಆರೋಪಿಸಿದಂತೆ ಆಗಿರಲಿಲ್ಲ. ಅಂತಹ ಯಾವ ಸಂಗತಿಗಳೂ ಇರಲಿಲ್ಲ. ಅಥವಾ ಗೀತೆಗೂ ಅದಕ್ಕೂ ಸಂಭಂದವಿಲ್ಲ. ಆ ಧ್ವನಿಯು ವಿಶೇಷ

ಮತ್ತು ನಿರ್ದಿಷ್ಟ ಆಧ್ಯಾತ್ಮದ ಅನುಭವ ಕ್ಷೇತ್ರದ ಬಗ್ಗೆ ಮಾತ್ರ ಮಾತನಾಡಿತ್ತು. ಮತ್ತು ಆ ವಿಷಯದ ಬಗ್ಗೆ ಏನು ಹೇಳಬೇಕೋ ಅದನ್ನು ಹೇಳಿದ ನಂತರ ಮೌನವಾಗಿತ್ತು,

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/98–99**

---

ನಾನು ಅಜ್ಞಾನದಲ್ಲಿ ಮಲಗಿದ್ದಾಗ, ಪವಿತ್ರ ಜನರು ಅಧ್ಯಯನ ಮಾಡುವ ಸ್ಥಳಕ್ಕೆ ಬಂದೆ ಮತ್ತು ನನಗೆ ಅವರ ಸಹವಾಸ ಬೇಸರ ತಂದದ್ದೂ ಅಲ್ಲದೇ ಆ ಸ್ಥಳ ಜೈಲಿನಂತೆ ಅನಿಸಿತು; ನಾನು ಎಚ್ಚೆತ್ತಾಗ, ದೇವರು ನನ್ನನ್ನು ಒಂದು ಜೈಲಿಗೆ ಕರೆದುಕೊಂಡು ಹೋದ ಮತ್ತು ಅದನ್ನು ಧ್ಯಾನಯೋಗ ಕ್ಷೇತವನ್ನಾಗಿಸಿದ. ಜೊತೆಗೆ ತನ್ನ ಸಮಾಗಮ ಸ್ಥಳವನ್ನಾಗಿಸಿದ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/428 – ಶ್ರೀ ಅರವಿಂದರು**

## "ವಂದೇ ಮಾತರಂ" ಲೇಖನಗಳು

– ಅನುವಾದ: ನಾಗಜ್ಯೋತಿ ಎಲಿಗಾರ

**ಭಾರತ ದೇಶದ ರಚನೆ**

ಬೇರೆ ದೇಶಗಳ ಇತಿಹಾಸಗಳಿಗಿಂತ ನಮ್ಮ ದೇಶದ ಇತಿಹಾಸವು ಹಲವು ರೀತಿಯಲ್ಲಿ ಬೇರೆಯಾಗಿದೆ. ಭಾರತೀಯರು ಸಂಘಟಿತರಾಗಿರುವುದು ಜಗತ್ತಿನಲ್ಲಿಯೇ ಒಂದು ವೈಶಿಷ್ಟ್ಯವಾಗಿದೆ. ಹಿಂದೆ ಬುಡಕಟ್ಟುಗಳ ಸಂಚಯ ಮತ್ತು ವಿಲೀನದಿಂದ ದೇಶಗಳು ಬೆಳೆದಿದ್ದವು. ಇದು ಪುರಾತನ ಪ್ರಕ್ರಿಯೆ. ಆದರೆ ಭಾರತವು ಕೇವಲ ಬುಡಕಟ್ಟುಗಳನ್ನು ಹೊಂದಿದ ದೇಶವಾಗಿರದೆ, ತಮ್ಮದೇ ಆದ ಸಾಮಾಜಿಕ ಮತ್ತು ಧಾರ್ಮಿಕ ರೀತಿಯಲ್ಲಿ ಅಭಿವೃದ್ಧಿ ಹೊಂದಿ ಬೆಳೆದ ದೇಶಗಳ ಸಂಗಮ ತಾಣವಾಗಿತ್ತು, ತಮ್ಮದೇ ಆದ ಮೂಲ ಜಾತಿ ಮತ್ತು ವಿವಿಧ ಸಂಸ್ಕೃತಿಗಳ ಪಂಗಡಗಳಾಗಿದ್ದವು. ಭವಿಷ್ಯದ ಭಾರತ ದೇಶದ ಚಾರಿತ್ರ್ಯ ಮತ್ತು ಸಂಯೋಜನೆಯು ಯೂರೋಪ್ ದೇಶಗಳಿಗಿಂತ ಭೌತಿಕವಾಗಿ ಬಹಳ ಭಿನ್ನವಾಗಿದೆ, ಏಕೆಂದರೆ ಇಲ್ಲಿರುವ ಐಕ್ಯತೆಯು ಮೂಲ ಮತ್ತು ಪುರಾತನವಾದುದು. ಈ ನೈಜ ಸತ್ಯದ ಬಗ್ಗೆ ನಮ್ಮ ಹಳೆಯ ರಾಜಕೀಯ ಮತ್ತು ಸಾಮಾಜಿಕ ಸುಧಾರಕರಿಗೆ ಯೋಚಿಸಲು ಸಮಯವಿಲ್ಲ, ಇದನ್ನು ಅತಿ ಸ್ಪಷ್ಟ ರೀತಿಯಲ್ಲಿ ಹೇಳಿದರೂ ಅರಿಯುತ್ತಾರೆಂಬ ಭರವಸೆಯೂ

ನಮ್ಮಲ್ಲಿಲ್ಲ. ಭಾರತದ ರಾಷ್ಟ್ರೀಯತೆಯ ವಿಚಾರವು ಸಂಯುಕ್ತ ರಾಷ್ಟ್ರಗಳ ಮಾದರಿಯಲ್ಲಿ ಕೈಗೂಡುತ್ತದೆ, – ಅದು ವೈವಿಧ್ಯ ರಾಷ್ಟ್ರಗಳ ಐಕ್ಯತೆಯಾಗಿದ್ದರೂ ತನ್ನದೇ ಆದ ರೀತಿಯಲ್ಲಿ ತನ್ನ ಆದರ್ಶ ಮತ್ತು ಸಂಘಟನೆಯ ವೈಶಿಷ್ಟ್ಯತೆಯನ್ನು ಕಾಪಾಡಿಕೊಳ್ಳುತ್ತದೆ; ತಮ್ಮೊಳಗಿನ ವಿಚಾರ ಅಥವಾ ಚಾರಿತ್ರ್ಯದ ಕೊರತೆಯನ್ನು ವಿನಿಮಯದ ಮೂಲಕ ಸರಿದೂಗಿಸಿ; ಒಂದೇ ವಿಶ್ವಾತ್ಮಕ ಗುರಿಯೆಡೆಗೆ ಜೊತೆಯಾಗಿ ಸಾಗುತ್ತಾ, ನಾಗರಿಕ ಮತ್ತು ಸಾಮಾಜಿಕ ಎರಡರಲ್ಲಿಯೂ ಹಂತ ಹಂತವಾಗಿ ತನ್ನದೇ ಆದ ಐತಿಹಾಸಿಕ ಮತ್ತು ಸಾಂಪ್ರದಾಯಿಕ ಮಾರ್ಗವಾಗಿ ನಡೆಯುತ್ತಾ, ಮತ್ತು ಅನಿರ್ದಿಷ್ಟವಾಗಿ ಒಬ್ಬರಿಗೊಬ್ಬರು ಹತ್ತಿರವಾಗುತ್ತಾ, ತಮ್ಮ ಸ್ವಂತಿಕೆಯನ್ನು ಯಾವುದೋ ಒಂದು ಹೊಸ ಅಥವಾ ಹಳೆಯ ರೀತಿಯ ಜೀವನದಲ್ಲಿ ಕಳೆದುಕೊಳ್ಳದೇ ಅನಿರ್ದಿಷ್ಟವಾಗಿ ಐಕ್ಯತೆಯೆಡೆಗೆ ಬೆಳೆಯುತ್ತಾರೆ. ಇದರ ಅರ್ಥ ಭಾರತವು ಒಂದು ಶಕ್ತಿಶಾಲಿ ಐಕ್ಯತೆಯಿಂದ ಕೂಡಿದ ದೇಶವಾಗಲು ಮಹಮದೀಯರು, ಹಿಂದುಗಳು, ಬೌದ್ಧರು, ಕ್ರಿಶ್ಚಿಯನ್ನರು, ತಮ್ಮ ಧಾರ್ಮಿಕ ಆಸ್ತಿತ್ವವನ್ನು ತ್ಯಜಿಸುವ ಅವಶ್ಯಕತೆಯಿಲ್ಲ. ಭಾರತವು ಒಂದು ಸಶಕ್ತ ದೇಶವಾಗಲು ನಾವು ಅಳವಡಿಸಿಕೊಳ್ಳಬೇಕಾದ ಆದರ್ಶಗಳು – ತಮ್ಮ ಆದರ್ಶಗಳ ಮತ್ತು ಸಂಸ್ಥೆಗಳ ಬಗ್ಗೆ ಭಕ್ತಿ, ಸಮುದಾಯದ ಬೇರೆಯವರ ಆದರ್ಶ ಮತ್ತು ಸಂಸ್ಥೆಗಳ ಬಗ್ಗೆ ತಾಳ್ಮೆ ಹಾಗೂ ಗೌರವ, ಸಾಮಾನ್ಯ ನಾಗರಿಕ ಜೀವನ ಮತ್ತು ಎಲ್ಲರ ಆದರ್ಶಗಳ ಬಗ್ಗೆ ಉತ್ಕಟ ಪ್ರೀತಿ ಮತ್ತು ಕಾಳಜಿಯನ್ನು ಬೆಳೆಸಿಕೊಳ್ಳಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6/168–69**

## ಆಧ್ಯಾತ್ಮಿಕ ಪ್ರಯೋಗದ ಮಹೋನ್ನತ ಕಾರ್ಯಗಾರ

ಈ ಎಲ್ಲಾ ಗತಕಾಲಗಳ ಮೂಲಕ ಏಷ್ಯಾ ಖಂಡವು ತನ್ನಂತರಂಗದಲ್ಲಿಯ ಬೆಳಕನ್ನು ಹುಡುಕುತಿತ್ತು. ಮತ್ತು ಆಕೆ ಏನನ್ನು ಹುಡುಕುತ್ತಿದ್ದಳೋ ಅದರ ಮಿಣುಕು ದರ್ಶನದಿಂದ ಈ ಎಲ್ಲಾ ಧರ್ಮಗಳು ಹುಟ್ಟಿದವು – ಬೌದ್ಧ, ಕನ್‌ಫ್ಯೂಶಿಯನ್, ಕ್ರೈಸ್ತ, ಮಹಮದೀಯ ಮತ್ತು ಅದರ ಅನೇಕ ಪಂಗಡಗಳು. ಆದರೆ ಆಧ್ಯಾತ್ಮಿಕ ಪ್ರಯೋಗದ ಮಹೋನ್ನತ ಕಾರ್ಯಾಗಾರವು, ಆತ್ಮಗಳ ಪ್ರಯೋಗ ಶಾಲೆಯು ಭಾರತವೇ ಆಗಿದೆ. ಇಲ್ಲಿ ಸಾವಿರಾರು ಆತ್ಮಗಳು ಪ್ರತೀ ಪೀಳಿಗೆಯಲ್ಲಿ ಹುಟ್ಟಿ, ತಮ್ಮ ಆತ್ಮದ ಅಂತರಂಗದಲ್ಲಿ ಸಂತೃಪ್ತರಾಗಿ ಸದ್ದಿಲ್ಲದೇ ಕಾರ್ಯಗೈಯುತ್ತಾ, ತಮ್ಮ ಅನುಭಾವದ ಫಲಿತಾಂಶವನ್ನು ಕೆಲವೇ ಶಿಷ್ಯರಿಗೆ ಧಾರೆ ಎರೆದು ಉಳಿದುದನ್ನು ಇತರರಿಗೆ ಪೂರ್ಣಗೊಳಿಸಲು ಬಿಡುತ್ತಿದ್ದರು. ಅವರು ಮತಾಂತರವನ್ನು ಕೈಗೊಳ್ಳದೇ,

ತಮ್ಮ ಬಗ್ಗೆ ಉದ್ಘೋಷಿಸುವ ಆತುರ ತೋರದೇ, ಕೇವಲ ತಮ್ಮ ಅನುಭಾವದ ಪಾಲನ್ನು ಧಾರೆ ಎರೆದು ಯಾವ ಮೂಲದಿಂದ ಬಂದಿದ್ದರೋ ಅಲ್ಲಿಗೆ ಮರಳುತ್ತಿದ್ದರು. ಅಪಾರವಾಗಿ ಶೇಖರಿಸಿದ ಆಧ್ಯಾತ್ಮಿಕ ಶಕ್ತಿಯ ಸ್ವದಮನದ ಸಂಗ್ರಹಿಕೆಯಿಂದಲೇ ಅವತಾರಿಗಳು ಹುಟ್ಟಿದರು. ದೈವತ್ವದಿಂದ ತುಂಬಿ ತುಳುಕಿದ ಮಾನವರು ನಿಶ್ಯಬ್ದ ಆನಂದದಿಂದ ತೃಪ್ತರಾಗದೇ ಅದನ್ನು ಜಗತ್ತಿಗೆ ಸುರಿದು, ತಮ್ಮ ಪೂರ್ವ ತಪಸ್ಸಿನಿಂದ ಅಥವಾ ತಮ್ಮ ಪರಿಶುದ್ಧ ಆಸೆಗಳಿಂದ ಯಾರು ಸ್ವೀಕರಿಸಲು ಯೋಗ್ಯರಿದ್ದಾರೋ ಅವರೊಂದಿಗೆ ತಮ್ಮ ಸ್ವಂತ ಸಾಕ್ಷತ್ಕಾರದ ಆನಂದವನ್ನು ಧಾರೆ ಎರೆದರೇ ಹೊರತು ಮತಾಂತರದ ವಿಚಾರದಿಂದಲ್ಲ. ಈ ಎಲ್ಲಾ ಆತ್ಮಗಳಲ್ಲಿ ಶ್ರೀ ರಾಮಕೃಷ್ಣರು ಕೊನೆಯವರು ಮತ್ತು ಅತ್ಯುನ್ನತರಾದವರು. ಏಕೆಂದರೆ, ಬೇರೆಯವರು ದೇವರನ್ನು ಒಂದೇ ಅಥವಾ ಸಿಮೀತ ರೂಪದಲ್ಲಿ ಮಾತ್ರ ಕಂಡರು, ಆದರೆ ರಾಮಕೃಷ್ಣರು ಅವನ ಅಪರಿಮಿತ ವೈವಿಧ್ಯತೆಯಲ್ಲಿ ಅವನ ಅಪರಿಮಿತ ಐಕ್ಯತೆಯನ್ನು ಕಂಡರು, ಅವರಲ್ಲಿ ಗತಕಾಲದ ಸಹಸ್ರಾರು ಸಂತರ ಆಧ್ಯಾತ್ಮಿಕ ಅನುಭಾವಗಳು ನವೀಕೃತಗೊಂಡು ಐಕ್ಯವಾಗಿದ್ದವು. ಜಗತ್ತಿಗೆ ನೀಡಬೇಕಾದ ಹಿಂದುತ್ವದ ಸಂದೇಶವನ್ನು ಭಾರತಕ್ಕೆ ಕೊಟ್ಟರು. ಯಾವ ಯುಗದಲ್ಲಿ ಜನರ ಜೀವನವು ದೇವರೊಂದಿಗೆ ಸಹಯೋಗ ಮತ್ತು ಆಧ್ಯಾತ್ಮವು ಜೀವನದ ಪ್ರಧಾನ ಅಂಶವಾಯಿತೋ ಅಂತಹ ನವಯುಗವು ಇವರ ಹುಟ್ಟಿನಿಂದ ಆರಂಭವಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 7/978–979**

### ಹಿಂದು–ಮುಸಲ್ಮಾನರ ಐಕ್ಯತೆ

ಒಂದು ವಿಷಯ ಖಚಿತವಾಗಿ ಹೇಳಬಹುದೇನೆಂದರೆ, ರಾಜಕೀಯ ಹೊಂದಾಣಿಕೆ ಅಥವಾ ಕಾಂಗ್ರೆಸ್‌ನ ಬೆಂಬಲದಿಂದಾಗಲಿ ಹಿಂದು–ಮುಸಲ್ಮಾನರ ಐಕ್ಯತೆಯನ್ನು ತರಲು ಸಾಧ್ಯವಿಲ್ಲ. ವಿಭಜನೆಯ ಮೂಲ ಕಾರಣಗಳು ಹೃದಯ ಹಾಗೂ ಮನಸ್ಸಿನ ಆಳದಲ್ಲಿರುವುದರಿಂದ ಪರಿಹಾರವನ್ನು ಕೂಡ ಅಲ್ಲೇ ಕಂಡುಕೊಳ್ಳಬೇಕಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ನಾವು ನೆನಪಿಡಬೇಕಾದ ಅಂಶವೆಂದರೆ, ಅಪಾರ್ಥವೇ ಸಮಸ್ಯೆಗೆ ಮೂಲ ಕಾರಣ – ಪ್ರೀತಿಯೇ ಪ್ರೀತಿಯನ್ನು ಹುಟ್ಟಿಸುತ್ತದೆ ಮತ್ತು ಶಕ್ತಿಯೇ ಬಲವಂತರನ್ನು ರಾಜಿಗೊಳಿಸುತ್ತದೆ. ಪರಸ್ಪರ ತಿಳುವಳಿಕೆ ಸಹಾನುಭೂತಿಯಿಂದ ಈ ಅಪಾರ್ಥವನ್ನು ತೆಗೆಯಲು ಶ್ರಮಿಸಬೇಕು. ನಾವು ನಮ್ಮ ಹಿಂಜರಿಯದ ದೇಶಭಕ್ತಿಯ ಪ್ರೀತಿಯನ್ನು ಮುಸ್ಲಿಂ ಬಾಂಧವರಿಗೂ ವಿಸ್ತರಿಸಿ ಸ್ವತಃ ನಾರಾಯಣನೇ

ಅವರಲ್ಲೂ ನೆಲೆಸಿದ್ದಾನೆ ಎಂಬುದನ್ನು ಮರೆಯದೆ, ಭಾರತ ಮಾತೆಯು ತನ್ನ ಹೃದಯದಲ್ಲಿ ಅವರಿಗೂ ಶಾಶ್ವತ ಸ್ಥಾನವನ್ನು ಮೀಸಲಿಟ್ಟಿದ್ದಾಳೆ. ಆದರೆ ನಮ್ಮ ವಿಧಾನ ತಪ್ಪಾದ, ಹೇಡಿತನದಿಂದಾದ ಮತ್ತು ಸ್ವಾರ್ಥಪರ ನ್ಯೂನ್ಯತೆಯಿಂದಾದ ಹೊಗಳಿಕೆಯಾಗಿರಬಾರದು. ಈ ತೊಂದರೆಯನ್ನು ಪ್ರಾಯೋಗಿಕವಾಗಿ ಪರಿಹರಿಸುವ ಒಂದೇ ಮಾರ್ಗ ಇದೇ ಆಗಿದೆ ಎಂದು ನಾವು ನಂಬಿದ್ದೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/31**

**ಹಿಂದು ರಾಷ್ಟ್ರೀಯತೆ**

ಯಾವಾಗ ಮುಸ್ಲಿಂ ಪ್ರಾಬಲ್ಯವು ಭಾರತೀಯ ಐಕ್ಯತೆ ಮತ್ತು ಸಂಹಿಷ್ಣುತೆಯ ಕಡೆಗೆ ಹೋಗುತ್ತಾ ದಬ್ಬಾಳಿಕೆ ಮತ್ತು ಒಡಕುಂಟು ಮಾಡಹತ್ತಿತೋ ಅದರ ಪ್ರಾಬಲ್ಯವನ್ನು ಹೊಡೆದುರುಳಿಸಲು ಶಿವಾಜಿ ಮತ್ತು ರಾಮದಾಸರ ಕಾಲದಲ್ಲಿ ರಾಷ್ಟ್ರೀಯ ಪುನರುಜ್ಜೀವನಕ್ಕೆ ಹಿಂದೂ ರಾಷ್ಟ್ರೀಯತೆಯು ಅವಶ್ಯವಾಗಿತ್ತು. ಆಗ ಮಹಾರಾಷ್ಟ್ರ ಮತ್ತು ರಜಪೂತರ ಎರಡು ಹಿಂದು ಬೌಗೋಳಿಕ ಘಟಕಗಳಿಂದ ಕೂಡಿದ ಭಾರತವು ಹಿಂದೂ ರಾಷ್ಟ್ರಿಯತೆಗೆ ಬುನಾದಿಯಾಯಿತು. ಭಾರತದ ಭವಿಷ್ಯಕ್ಕೆ ಮುಸಲ್ಮಾನರ ದಬ್ಬಾಳಿಕಯು ಮಾರಕವಾದಾಗ ಅದನ್ನು ಶಿಕ್ಷಿಸಿ ಸರಿಪಡಿಸಲು ಹಿಂದೂ ಪುನರುತ್ಥಾನ ಮತ್ತು ಪ್ರಾಬಲ್ಯವು ಅತ್ಯವಶ್ಯಕವಾಗಿತ್ತು. ಇದು ಸಾಧ್ಯ ಮತ್ತು ಅತ್ಯವಶ್ಯಕವಾದುದರಿಂದ ಹಿಂದೂ ರಾಷ್ಟ್ರೀಯತೆಯು ಅಸ್ಥಿತ್ವಕ್ಕೆ ಬಂದಿತು. ಆದರೆ ಆಧುನಿಕ ಭಾರತದ ಅಸ್ಥಿತ್ವವು ಅಖಂಡವಾದಾಗ ಮಾತ್ರ ಇದು ಸಾಧ್ಯ. ಒಂದು ವಿಶಿಷ್ಟ ಮತ್ತು ಪ್ರತ್ಯೇಕ ದೇಶವೆನಿಸಲು ಅದರದೇ ಆದ ಭೌಗೋಳಿಕ ಪ್ರತ್ಯೇಕತೆ ಮತ್ತು ಭೌಗೋಳಿಕ ಸಾಂದ್ರತೆಯ ಮೇಲೆ ಅವಲಂಬಿತವಾಗಿದೆ. ಈ ಭೌಗೋಳಿಕ ಪ್ರತ್ಯೇಕತೆಯು ಕೊನೆಗೆ ಖಂಡಿತವಾಗಿಯೂ ಎಲ್ಲಾ ಜನಾಂಗ, ಭಾಷೆ, ಧರ್ಮ, ಇತಿಹಾಸದ ವ್ಯತ್ಯಾಸವನ್ನು ಅಳಿಸಿಹಾಕುತ್ತದೆ. ಇದನ್ನು ಗ್ರೇಟ್‌ಬ್ರಿಟನ್, ಸ್ವಿಜ್ಜರ್‌ಲ್ಯಾಂಡ್, ಹಾಗೂ ಜರ್ಮನಿಯಲ್ಲಿ ಕಾಣಬಹುದು. ಹೀಗೆಯೇ ಭಾರತದಲ್ಲಿಯೂ ಆಗುತ್ತದೆ. ಆದರೆ ಭೌಗೋಳಿಕ ಸಾಂದ್ರತೆಯು ಅತ್ಯವಶ್ಯವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ದೇಶದ ಸಾಂದ್ರತೆಯು ಕೇಂದ್ರ ಸರ್ಕಾರದ ಸಂಘಟನೆ ಮತ್ತು ಸಂಪರ್ಕಕ್ಕೆ ಅನುಕೂಲವಾಗಿರಬೇಕು ಅಥವಾ ಕನಿಷ್ಟಪಕ್ಷ ನಿಭಾಯಿಸಲು ಕಷ್ಟ ಸಾಧ್ಯವಾಗಿರಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/304**

## ಸ್ವದೇಶವೇ ತಳಹದಿ

ಆದ್ದರಿಂದ ನಮ್ಮ ಆದರ್ಶವು ಭಾರತೀಯ ರಾಷ್ಟ್ರೀಯತೆ, ತನ್ನ ಭಾವ ಮತ್ತು ಸಂಪ್ರದಾಯದಲ್ಲಿ ಧಾರಾಳವಾಗಿ ಹಿಂದೂವಾಗಿರಬೇಕು. ಏಕೆಂದರೆ ಈ ಭೂಮಿಯು ಹಿಂದೂಗಳಿಂದಲೇ ಮಾಡಲ್ಪಟ್ಟಿದೆ ಮತ್ತು ಅವರ ಗತಕಾಲದ ವೈಭವ, ನಾಗರಿಕತೆ, ಸಂಸ್ಕೃತಿ ಹಾಗೂ ಅವರ ಅಜೇಯ ವೀರತ್ವದಿಂದ ತಮ್ಮ ಅಸ್ಥಿತ್ವವನ್ನು ಕಾಪಾಡಿಕೊಂಡಿದ್ದಾರೆ. ಹೀಗಾಗಿ ತಮ್ಮ ವಿಶಾಲತೆಯಿಂದ ತಮ್ಮ ಅಸ್ಥಿತ್ವವನ್ನಷ್ಟೇ ಅಲ್ಲದೇ, ಮುಸ್ಲೀಂ ಮತ್ತು ಅವರ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಒಳ ಸೇರಿಸಿಕೊಂಡು ತಮ್ಮೊಳಗೊಂದಾಗಿಸಿಕೊಳ್ಳುತ್ತಾರೆ. ಈ ಅನಿವಾರ್ಯ ಭವಿಷ್ಯದತ್ತ ಹೋಗುವ ಸಾಧ್ಯತೆಯನ್ನು ಮುಸ್ಲಿಂರು ಅರಿಯದೇ ಇದಕ್ಕೆ ಪ್ರತಿರೋಧಿಸುವ ಸಾಧ್ಯತೆಯಿದೆ. ಹೀಗಾದರೆ, ಹಿಂದುಗಳು ಮುಸ್ಲಿಂರ ಅಲ್ಪ ಸಹಾಯ ಸಿಕ್ಕರೂ, ಖಂಡಿತವಾಗಿ ಎಲ್ಲಾ ಪ್ರತಿರೋಧದ ನಡುವೆಯೂ ತಮಗಾಗಿ ಮತ್ತು ಅವರಿಗಾಗಿ ಸ್ವರಾಜ್ಯವನ್ನು ಸ್ಥಾಪಿಸಲೇಬೇಕಾಗುತ್ತದೆ. ಇದಕ್ಕಿಂತ ಶ್ರೇಷ್ಠವಾದ ಕಾರ್ಯವನ್ನು ಮಾಡಲು ನಮ್ಮಲ್ಲಿ ಸಾಮರ್ಥ್ಯ ಮತ್ತು ಸಾಕಷ್ಟು ಶಕ್ತಿ ಹುದುಗಿದೆ. ಆದರೆ ನಮ್ಮಲ್ಲಿ ಐಕ್ಯತೆ, ಭ್ರಾತೃತ್ವ, ಏಕನಿಷ್ಠ ತೀವ್ರತೆಯ ಕೊರತೆಯಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/305–06 – ಶ್ರೀ ಅರವಿಂದರು**

# "ಕರ್ಮಯೋಗಿನ್" ಲೇಖನಗಳು

– ಅನುವಾದ: ಡಾ॥ ಮಹಾದೇವ ಸಕ್ರಿ

## ನಾವು ಮತ್ತು ನಮ್ಮ ಸ್ಥಿತಿ

ಅಲ್ಲಿ ಭಾರತೀಯತೆಯ ಭಾವನೆ ಇದೆ, ಆದಾಗ್ಯೂ ಅದರ ಪರಿಚಯ ಇಲ್ಲ. ಅಲ್ಲಿ ಅಸ್ಪಷ್ಟ ಕಲ್ಪನೆಯಿದೆ, ಒಂದು ನಿರ್ದಿಷ್ಟ ಭಾವನೆ ಅಥವಾ ಆಳವಾದ ಒಳನೋಟ ಅಲ್ಲಿ ಇಲ್ಲ. ನಾವು ಯಾರಿದ್ದೇವು, ಯಾರಿದ್ದೇವೆ ಮತ್ತು ಇದ್ದಿರಬಹುದು; ನಾವು ಭೂತದಲ್ಲಿ ಏನು ಮಾಡಿದ್ದೇವೆ ಮತ್ತು ಭವಿಷ್ಯದಲ್ಲಿ ನಾವು ಏನನ್ನು ಮಾಡುವ ಯೋಗ್ಯತೆ ಇದೆ; ನಮ್ಮ ಇತಿಹಾಸ ಮತ್ತು ಗುರಿ ಎಲ್ಲವನ್ನು ನಾವು ಇನ್ನೂ ತಿಳಿದುಕೊಳ್ಳಬೇಕಾಗಿದೆ. ಈ ಜ್ಞಾನವನ್ನು ಜನಪ್ರಿಯಗೊಳಿಸಲಿಕ್ಕಾಗಿ "ಕರ್ಮಯೋಗಿನ್" ತನಗೆ ತಾನು ವಹಿಸಿಕೊಂಡ ಮೊದಲ ಮತ್ತು ಬಹುಮುಖ್ಯ ಕಾರ್ಯವಾಗಿದೆ. ವೇದಾಂತ ಅಥವಾ ಸೂಫಿ,

ಮಂದಿರ ಅಥವಾ ಮಸೀದಿ, ನಾನಕ, ಕಬೀರ, ರಾಮದಾಸ, ಚೈತನ್ಯ ಅಥವಾ ಗುರು ಗೋವಿಂದ, ಬ್ರಾಹ್ಮಣ ಅಥವಾ ಕಾಯಸ್ಥ ಅಥವಾ ನಾಮಶೂದ್ರ, ನಮ್ಮಲ್ಲಿ ಯಾವುದೇ ರಾಷ್ಟ್ರೀಯ ಸೊತ್ತಿರಲಿ, ದೇಶೀಯ ಅಥವಾ ಹೊಂದಿಸಿದ ಎಲ್ಲವನ್ನೂ ತಿಳಿದುಕೊಳ್ಳುವಂತೆ ಮಾಡಲು, ತನ್ನ ಸರಿಯಾದ ಸ್ಥಳದಲ್ಲಿರಿಸಲು, ಮತ್ತು ಶ್ಲಾಘಿಸಲು 'ಕರ್ಮಯೋಗಿನ್' ಪ್ರಯತ್ನಿಸುತ್ತದೆ. ಈ ಎಲ್ಲ ಸ್ವತ್ತನ್ನು (ಆಸ್ತಿಯನ್ನು), ಒಟ್ಟು ರಾಷ್ಟ್ರೀಯ ಜೀವನವನ್ನು ಹೆಚ್ಚಿಸಲು ಮತ್ತು ಭವಿಷ್ಯತ್ತನ್ನು ರೂಪಿಸಲು ಹೇಗೆ ಉಪಯೋಗಿಸಬೇಕೆಂಬುದು ಎರಡನೆಯ ಸಂಗತಿಯಾಗಿದೆ. ಅವುಗಳ ಸಂಬಂಧವನ್ನು ಭೂತಕಾಲದೊಂದಿಗೆ ಬೆಲೆಕಟ್ಟುವುದು ಸುಲಭ; ಅವುಗಳಿಗೆ ಭವಿಷ್ಯದಲ್ಲಿ ಸ್ಥಾನ ದೊರಕಿಸಿಕೊಡುವುದು ಇನ್ನೂ ಕಷ್ಟದ ಕೆಲಸ. ಹೊರ ಜಗತ್ತನ್ನು ಅರಿತುಕೊಳ್ಳುವುದು ಮತ್ತು ನಮಗೆ ಅದರ ಸಂಬಂಧ ಮತ್ತು ಅದರೊಡನೆ ವ್ಯವಹಾರ ಮಾಡುವುದು ಮೂರನೆಯ ಸಂಗತಿ. ಸದ್ಯಕ್ಕೆ ಅತ್ಯಂತ ಕಷ್ಟದ ಮತ್ತು ಆಗ್ರಹದ ಸಮಸ್ಯೆ ಅದಾಗಿದೆ. ಆದರೆ, ಅದರ ಸಮಾಧಾನವು ಬೇರೆಯ ಸಮಾಧಾನದ ಮೇಲೆ ಅವಲಂಬಿಸಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/20–21**

## ಇವತ್ತು ಭಾರತದಲ್ಲಿ ಒಂದು ರಾಷ್ಟ್ರ ನಿರ್ಮಾಣವಾಗುತ್ತಿದೆ

ಜಗತ್ತಿನ ಕಣ್ಣುಗಳ ಮುಂದೆ ಕ್ಷಿಪ್ರವಾಗಿ, ಸ್ಥೂಲವಾಗಿ ಭಾರತದಲ್ಲಿಂದು ಒಂದು ರಾಷ್ಟ್ರ ನಿರ್ಮಾಣವಾಗುತ್ತಿದೆ. ಎಲ್ಲರೂ ಆ ಪ್ರಕ್ರಿಯೆಯನ್ನು ಗಮನಿಸಬಹುದಾಗಿದೆ. ಯಾರಲ್ಲಿ ಅನುಕಂಪ ಮತ್ತು ಅಂತರ್ದೃಷ್ಠಿ ಇವೆಯೋ, ಅವರು ಈ ಕಾರ್ಯದಲ್ಲಿನ ಶಕ್ತಿಗಳನ್ನು, ಉಪಯೋಗದಲ್ಲಿರುವ ವಸ್ತುಗಳನ್ನು, ದೈವೀ ಸಂರಚನೆಯ ರೇಖೆಗಳನ್ನು ಗುರುತಿಸುತ್ತಾರೆ. ಈ ರಾಷ್ಟ್ರವು ಪ್ರಕೃತಿಯ ಕಾರ್ಖಾನೆಯಿಂದ ಬಂದ ಕಚ್ಚಾ ಅಥವಾ ಹೊಸ ಜನಾಂಗವಲ್ಲ ಅಥವಾ ಆಧುನಿಕ ಸನ್ನಿವೇಶಗಳಿಂದ ಸೃಷ್ಟಿಸಿದ್ದಲ್ಲ. ಈ ಭೂಮಿಯ ಮೇಲೆ ಅತ್ಯಂತ ಹಳೆಯ ಜನಾಂಗಗಳಲ್ಲಿ ಮತ್ತು ಶ್ರೇಷ್ಠ ನಾಗರೀಕತೆಗಳಲ್ಲಿ ಒಂದಾದ, ಚೈತನ್ಯದಲ್ಲಿ ಅತ್ಯಂತ ಅದಮ್ಯ, ಶ್ರೇಷ್ಠತೆಯಲ್ಲಿ ಅತ್ಯಂತ ಶ್ರೀಮಂತ, ಜೀವನದಲ್ಲಿ ಗಹನವಾದ, ಅಂತಃಸ್ಸತ್ವದಲ್ಲಿ ಅತ್ಯಂತ ಅದ್ಭುತ, ಪರದೇಶದ ರಕ್ತದ ತಳಿಯಿಂದ ಮತ್ತು ಅನ್ಯ ವಿಧದ ಮಾನವ ನಾಗರೀಕತೆಗಳಿಂದ ತನ್ನಷ್ಟಕ್ಕೆ ಶಕ್ತಿಯನ್ನು ಜಮೆ ಮಾಡಿದ ನಂತರ ಈಗ ತನ್ನನ್ನು ತಾನು ಸಂಘಟಿಸಿಕೊಂಡ, ರಾಷ್ಟ್ರೀಯ ಏಕತೆಯಾಗಿ

ಹೊರಹೊಮ್ಮಲು ಬಯಸುತ್ತದೆ. ಒಂದೇ ಜೀವನ ಮತ್ತು ಒಂದೇ ಸಂಸ್ಕೃತಿಯೊಂದಿಗೆ ಮುಖ್ಯವಾದ ಅಭೇದತೆಯ ವಿಧಿಯಿಂದ ಏಕತೆಯ ಕಡೆಗೆ ಒಲವು ತೋರುವ, ಯಾವಾಗಲೂ ತನ್ನ ಹೆಚ್ಚಿನ ಉತ್ಪಾದಕತೆಯಿಂದ ಹೊಸ ವೈವಿಧ್ಯತೆಗಳನ್ನು ಮತ್ತು ವಿಭಾಗಗಳನ್ನು ಜನ್ಮಕೊಡುವ, ಪೂರ್ವದಲ್ಲಿ ಒಂದೇ ವಂಶದ ದೇಶಗಳ ಸಮೂಹವು ಯಾವತ್ತಿಗೂ ಪರಿಹರಿಸಲಾಗದ ಅಡೆತಡೆಗಳಿಂದ, ಶಾಶ್ವತವಾಗಿ ಜಯಿಸಿ ಒಂದು ಖಂಡವನ್ನು ಸಂಘಟಿಸಲು ಸಾಧ್ಯವಾಗಿಲ್ಲ. ಈ ಎಲ್ಲ ಅಡೆತಡೆಗಳನ್ನು ಜಯಿಸುವ ಸಮಯ ಈಗ ಬಂದಿದೆ. ನಮ್ಮ ಜನಾಂಗವು ದೀರ್ಘವಾದ ಇತಿಹಾಸದುದ್ದಕ್ಕೂ ಮಾಡುತ್ತಿದ್ದ ಪ್ರಯತ್ನವನ್ನು, ಈಗ ಸಂಪೂರ್ಣವಾಗಿ ಹೊಸ ವಾತಾವರಣಗಳಲ್ಲಿ ಮಾಡಲಾಗುವುದು. ಒಬ್ಬ ತೀಕ್ಷ್ಣ ವೀಕ್ಷಕ ಅದರ ಯಶಸ್ಸನ್ನು ಊಹಿಸಬಹುದು. ಯಾಕೆಂದರೆ, ಅತಿ ಮುಖ್ಯವಾದ ಅಡೆತಡೆಗಳನ್ನು ತೆಗೆಯಲಾಗಿದೆ ಅಥವಾ ತೆಗೆಯುವ ಪ್ರಕ್ರಿಯೆಯಲ್ಲಿದೆ. ಆದರೆ, ನಾವು ಇನ್ನೂ ಮುಂದಕ್ಕೆ ಹೋಗುತ್ತೇವೆ ಮತ್ತು ಭಾರತದ ಸ್ವತಂತ್ರತೆಯು, ಏಕತೆಯು ಮತ್ತು ಶ್ರೇಷ್ಠತೆಯು ಸದ್ಯಕ್ಕೆ ಜಗತ್ತಿಗೆ ಅವಶ್ಯವಾಗಿ ಬೇಕಾದ ಕಾರಣಗಳಿಂದ ಅದು ಖಚಿತವಾಗಿ ಯಶಸ್ಸನ್ನು ಕಾಣುತ್ತದೆ ಎಂದು ನಂಬುತ್ತೇವೆ.

ಕರ್ಮಯೋಗಿನ್, ಎಷ್ಟೇ ಅಗಾಧವಾದ ಮತ್ತು ಮೇಲ್ನೋಟಕ್ಕೆ ದುಸ್ತರವಾದ ಅಡಚಣೆಗಳಿದ್ದಾಗಲೂ, ಎದೆಗುಂದಲು ನಿರಾಕರಿಸಿ, ಪಟ್ಟುಹಿಡಿದು ತನ್ನ ಕೈಗಳನ್ನು ಈ ಕಾರ್ಯಕ್ಕಾಗಿ ತೊಡಗಿಸಿಕೊಂಡಿದೆ. ದೇವರು ನಮ್ಮ ಜೊತೆಗಿದ್ದಾನೆ ಎಂದು ನಾವು ನಂಬಿದ್ದೇವೆ, ಮತ್ತು ಆ ನಂಬಿಕೆಯಿಂದ ನಾವು ಜಯಿಸುವೆವು. ಮಾನವ ಕುಲವು ನಮ್ಮನ್ನು ಕೇಳುತ್ತದೆ ಎಂದು ನಂಬಿದ್ದೇವೆ. ಪ್ರೀತಿ ಮತ್ತು ಮಾನವ ಕುಲದ, ನಮ್ಮ ದೇಶದ, ಜನಾಂಗದ, ನಮ್ಮ ಧರ್ಮದ ಸೇವೆಯು ನಮ್ಮ ಹೃದಯವನ್ನು ಶುದ್ಧ ಮಾಡುತ್ತವೆ ಮತ್ತು ಹೋರಾಟದಲ್ಲಿ ನಮ್ಮ ಕ್ರಮವನ್ನು ಪ್ರೇರಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/23–24**

**ನಮ್ಮ ಮುಂದಿರುವ ಕಾರ್ಯ**

ನಮ್ಮಷ್ಟಕ್ಕೆ ನಾವು ಸ್ಥಾಪಿಸುವ ಕಾರ್ಯವು ನೈತಿಕ ಮತ್ತು ಪವಿತ್ರ, ಆದರೆ ಯಾಂತ್ರಿಕವಲ್ಲ. ನಮ್ಮ ಗುರಿ ಸರ್ಕಾರದ ರೂಪವನ್ನು ಬದಲಾಯಿಸುವುದಕ್ಕೆ ಅಲ್ಲ, ಆದರೆ ಒಂದು ರಾಷ್ಟ್ರದ ನಿರ್ಮಾಣಕ್ಕೆ. ರಾಜಕೀಯವು ಆ ಕಾರ್ಯದ ಒಂದು ಭಾಗ, ಬರೀ ಭಾಗ ಮಾತ್ರ.. ನಾವು, ನಮ್ಮನ್ನು ರಾಜಕೀಯಕ್ಕೆ, ಸಾಮಾಜಿಕ

ಪ್ರಶ್ನೆಗಳಿಗೆ ಮಾತ್ರವಲ್ಲದೆ ವೇದಾಂತಕ್ಕೂ ಅಥವಾ ಆಧ್ಯಾತ್ಮಕ್ಕೂ ಅಥವಾ ಸಾಹಿತ್ಯಕ್ಕೂ ಅಥವಾ ವಿಜ್ಞಾನಕ್ಕೂ ಸಮರ್ಪಿಸಿಕೊಳ್ಳುವುದು ಬೇಡ. ಆದರೆ, ನಾವು ಇವುಗಳೆಲ್ಲವನ್ನೂ ಒಂದೇ ಘಟಕದಲ್ಲಿ ಸೇರಿಸೋಣ. ಆ ಘಟಕವು (ವಸ್ತುವು) ಸರ್ವ ಪ್ರಮುಖವಾಗಿದೆ, ಧರ್ಮವಾಗಿದೆ, ವಿಶ್ವವ್ಯಾಪಿ ರಾಷ್ಟ್ರಧರ್ಮವಾಗಿದೆ ಎಂದು ನಾವು ನಂಬಿದ್ದೇವೆ. ಅಲ್ಲಿ ಒಂದು ಬಲಶಾಲಿಯಾದ ಜೀವನದ ನಿಯಮವಿದೆ, ಮಾನವ ವಿಕಾಸದ ಒಂದು ಶ್ರೇಷ್ಠ ತತ್ವವಿದೆ, ಆಧ್ಯಾತ್ಮಿಕ ಜ್ಞಾನದ ಮತ್ತು ಅನುಭವಗಳ ಒಂದು ಸಂಸ್ಥೆಯಿದೆ. ಆದರ್ಶಪ್ರಾಯವಾದ ಮತ್ತು ಸಿದ್ಧಾಂತ ಪ್ರತಿಪಾದಕವಾದ ಭಾರತವು ಇವುಗಳ ಗೊತ್ತುಪಡಿಸಿದ ರಕ್ಷಕನಾಗಿದೆ. ಇದು ಸನಾತನ ಧರ್ಮ. ಬಾಹ್ಯ ಒತ್ತಡಗಳ ಪ್ರಭಾವದಿಂದ ಅವಳು ಜೀವನ ಶೈಲಿಯ ಸತ್ಯದ ಮೇಲೆ ಬಹುತೇಕ ತನ್ನ ಹಿಡಿತವನ್ನು ಕಳೆದುಕೊಂಡಿದ್ದಾಳೆ, ಆದರೆ ಧರ್ಮದ ಸ್ವರೂಪವನ್ನಲ್ಲ.

ಭಾರತದ ಧರ್ಮವು ಜೀವಂತಿಕೆಯಿಂದ ಇರದಿದ್ದರೆ ಅದು ಏನೂ ಅಲ್ಲ. ಅದು ಜೀವನಕ್ಕೆ ಮಾತ್ರ ಅನ್ವಯಿಸಪಡಬೇಕಾಗಿಲ್ಲ, ಆದರೆ ಸಮಗ್ರ ಜೀವನಕ್ಕೆ ಅನ್ವಯಿಸಲ್ಪಡಬೇಕು. ಅದರ ಚೈತನ್ಯ ನಮ್ಮ ಸಮಾಜದಲ್ಲಿ, ನಮ್ಮ ರಾಜಕೀಯದಲ್ಲಿ, ನಮ್ಮ ಸಾಹಿತ್ಯದಲ್ಲಿ, ನಮ್ಮ ವಿಜ್ಞಾನದಲ್ಲಿ, ನಮ್ಮ ವ್ಯಕ್ತಿಗತ ನಡತೆಯಲ್ಲಿ, ವಿಶ್ವಾಸದಲ್ಲಿ ಮತ್ತು ಆಕಾಂಕ್ಷೆಗಳಲ್ಲಿ ಹೊಕ್ಕು ಅವುಗಳನ್ನು ರೂಪಿಸಬೇಕು.

ಧರ್ಮದ ಹೃದಯವನ್ನು ಅರ್ಥಮಾಡಿಕೊಳ್ಳುವುದು, ಅದನ್ನು ಸತ್ಯವನ್ನಾಗಿ ಅನುಭವಿಸುವುದು, ಉದಾತ್ತ ಭಾವಗಳ ಹೆಚ್ಚಳವನ್ನು ಅನುಭವಿಸುವುದು ಮತ್ತು ಅದನ್ನು ಜೀವನದಲ್ಲಿ ಪ್ರಕಟಪಡಿಸುವುದು ಮತ್ತು ಜಾರೀ ಮಾಡುವುದನ್ನು ನಾವು ಕರ್ಮಯೋಗವೆಂದು ತಿಳಿದಿದ್ದೇವೆ. ಇವತ್ತು ಭಾರತವು ಮೇಲೇರಬೇಕಾದರೆ ಯೋಗವು ಮಾನವ ಜೀವನದ ಆದರ್ಶವಾಗಬೇಕೆಂದು ನಾವು ನಂಬಿದ್ದೇವೆ. ಯೋಗದಿಂದ ಭಾರತಮಾತೆಯು ಸ್ವಾತಂತ್ರ್ಯವನ್ನು, ಏಕತೆಯನ್ನು ಮತ್ತು ಶ್ರೇಷ್ಠತೆಯನ್ನು ನನಸಾಗಿಸಿಕೊಳ್ಳಲು ಬೇಕಾದ ಬಲವನ್ನು ಪಡೆಯುತ್ತಾಳೆ. ಯೋಗದಿಂದ ಅವಳು ಅವುಗಳನ್ನು ಕಾಪಾಡಲು ಬಲವನ್ನು ಉಳಿಸಿಕೊಳ್ಳುತ್ತಾಳೆ. ನಾವು ಒಂದು ಆಧ್ಯಾತ್ಮಿಕ ಕ್ರಾಂತಿಯನ್ನು ಮುಂಗಾಣುತ್ತೇವೆ. ಪ್ರಪಂಚವು ಅದರ ನೆರಳು ಮತ್ತು ಪ್ರತಿಫಲನವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/24**

## ಭಾರತ ನಿರ್ಮಾಣದಲ್ಲಿ ನಮ್ಮ ಗುರಿ ಮತ್ತು ಮುಂದಿನ ದಾರಿ

ನಮ್ಮ ಉದ್ದೇಶ ಮಾನವ ಕುಲದ ಒಳಿತಿಗಾಗಿ ಭಾರತವನ್ನು ನಿರ್ಮಾಣ ಮಾಡುವುದಕ್ಕಾಗಿ ಸಹಾಯ ಮಾಡುವುದು – ನಾವು ಬಹಿರಂಗವಾಗಿ ತೋರಿಸಿಕೊಳ್ಳುವ ಮತ್ತು ಅನುಸರಿಸುವ ರಾಷ್ಟ್ರೀಯ ಭಾವನೆ ಇದಾಗಿದೆ. "ಪ್ರಾಪಂಚಿಕ ಉಪಸ್ಥಿತಿಯಿಂದ ಎದ್ದು, ಉನ್ನತವಾದ, ಗಹನವಾದ ಮತ್ತು ವಿಶಾಲವಾದ ಜೀವನದೆಡೆಗೆ ಸಾಗುವ ಮಾನವಕೋಟಿಗೆ, ನೀವುಗಳು ದಿಟ್ಟ ಹೆಜ್ಜೆಯನ್ನು ತೆಗೆದುಕೊಳ್ಳಲೇಬೇಕಾದ ಸಮಯ ಬಂದಿದೆ" ಎಂದು ಹೇಳಬೇಕಾಗಿದೆ. ಮಾನವಕುಲವನ್ನು ತೊಂದರೆಗೀಡು ಮಾಡಿದ ಸಮಸ್ಯೆಗಳನ್ನು – ಅಂತರಂಗದ ಸಾಮ್ರಾಜ್ಯವನ್ನು ಬಯಸುವುದರಿಂದ, ಬುದ್ಧಿಶಕ್ತಿಯ ಮತ್ತು ಪ್ರಾಣದ ಬಲಗಳನ್ನು ಅಧೀನ ಪಡಿಸಿಕೊಳ್ಳುವುದರಿಂದ, ಮೀರದ, ಹಾಗೆಯೇ ಮೀರಿದ ಮನುಷ್ಯನ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದರಿಂದ, ಮತ್ತು ಮೀರಿದ ಬಾಹ್ಯ ಪ್ರಕೃತಿಯಿಂದ ಜಯಿಸುವುದರಿಂದ ಬಗೆ ಹರಿಸಬಹುದು. ಆ ಕೆಲಸಕ್ಕಾಗಿ ಏಷಿಯಾ ಖಂಡದ ಪುನರುತ್ಥಾನ ಅವಶ್ಯಕವಾಗಿದೆ; ಆದ್ದರಿಂದ ಏಷಿಯಾ ಉದಯಿಸುತ್ತದೆ. ಆ ಕಾರ್ಯಕ್ಕಾಗಿ ಭಾರತದ ಸ್ವಾತಂತ್ರ್ಯ ಮತ್ತು ಶ್ರೇಷ್ಠತೆ ಅಗತ್ಯವಾಗಿದೆ, ಆದುದರಿಂದ ಭಾರತಮಾತೆಯು ತನ್ನ ವಿಧಿಲಿಖಿತ ಸ್ವಾತಂತ್ರ್ಯವನ್ನು ಮತ್ತು ಉದಾರತೆಯನ್ನು ಮಾನವತೆಯ ಒಳಿತಿಗಾಗಿ (ಇಂಗ್ಲೆಂಡನ್ನು ಹೊರಗಿಡದೆ) ಹಕ್ಕಿನಿಂದ ಕೇಳುತ್ತಾಳೆ. ಭಾರತಮಾತೆಯು ತನ್ನ ಅಧಿಕಾರವನ್ನು ಸಮಗ್ರವಾಗಿ ಸ್ಥಾಪಿಸುತ್ತಾಳೆ.

"ನಾವುಗಳು ನಾವಾಗಿರಬೇಕೆ ಹೊರತು ಯುರೋಪಿಯನ್‌ರಾಗಿ ಅಲ್ಲ ಎನ್ನುವುದು ದೇವರ ಬಯಕೆ ಎಂಬ ಸಂಗತಿಯನ್ನು ದೇಶಕ್ಕೆ ಹೇಳಬೇಕಾಗಿದೆ. ನಮ್ಮ ಸ್ವಂತಕ್ಕಿಂತ ಇನ್ನೊಬ್ಬರ ನಿಯಮಗಳನ್ನು ಅನುಸರಿಸಿ ಜೀವನವನ್ನು ಮರಳಿ ಪಡೆಯಲು ಬಯಸಿದ್ದೇವೆ. ನಮ್ಮಲ್ಲಿರುವ ಸಾಮರ್ಥ್ಯವನ್ನು ಮತ್ತು ಜೀವನದ ಸಂಪನ್ಮೂಲಗಳನ್ನು ನಮಗಾಗಿಯೇ ಕೇಳಲು ನಾವು ಹಿಂದಿರುಗಲೇಬೇಕಾಗಿದೆ.

ನಾವು ನಮ್ಮ ಭೂತವನ್ನು ತಿಳಿದುಕೊಂಡು, ಮತ್ತು ಅದನ್ನು, ಭವಿಷ್ಯತ್ತಿನ ಸಲುವಾಗಿ ಮರಳಿ ಪಡೆಯಲೇಬೇಕಾಗಿದೆ. ಮೊದಲು ನಮ್ಮನ್ನು ಅರಿತುಕೊಂಡು ಮತ್ತು ಎಲ್ಲವನ್ನೂ ಭಾರತದ ಅನಂತ ಜೀವನದ ಮತ್ತು ಪ್ರಕೃತಿಯ ನಿಯಮಗಳಿಗಾಗಿ ರೂಪಕೊಡುವುದು ನಮ್ಮೆಲ್ಲರ ಕೆಲಸವಾಗಿದೆ. ನಮ್ಮದಾಗಿದ್ದ ಮತ್ತು ನಮ್ಮದಾದ ಎಲ್ಲವೂ, ನಮ್ಮ ಧರ್ಮದ, ನಮ್ಮ ಸಮಾಜದ, ನಮ್ಮ

ತತ್ವಶಾಸ್ತ್ರದ, ರಾಜಕೀಯದ, ಸಾಹಿತ್ಯದ, ಕಲೆಯ ವಿಜ್ಞಾನದ, ವಿಚಾರಗಳ, ನ್ಯಾಯಶಾಸ್ತ್ರದ ಹೃದಯವನ್ನು ಅರ್ಥೈಸುವುದು ಮತ್ತು ಇದು ನಮ್ಮ ಧರ್ಮ ಎಂದು ರಾಷ್ಟ್ರಕ್ಕೆ ಹೇಳುವುದು 'ಕರ್ಮಯೋಗಿನ್' ಉದ್ದೇಶವಾಗಿದೆ. ನಾವು ಯುರೋಪಿನ ನಾಗರೀಕತೆಯನ್ನು, ಭಾರತದ ವಿಚಾರಧಾರೆಯ ಮತ್ತು ಜ್ಞಾನದ ದೃಷ್ಟಿಕೋನದಿಂದ ಪರಿಶೀಲನೆ ಮಾಡುವೆವು ಮತ್ತು ಪಾಶ್ಚಿಮಾತ್ಯ ಪ್ರಭಾವದ ಮುದ್ರೆಯನ್ನು ಕಿತ್ತೆಸೆಯಲು ಹವಣಿಸುತ್ತೇವೆ; ನಾವು ಭಾರತೀಯರಾಗಿ ಪಶ್ಚಿಮದಿಂದ ಏನನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು.

ಒಂದು ಸಲ ಧರ್ಮವನ್ನು ಅರಿತರೆ, ಅದನ್ನು ನಮ್ಮ ವೈಯಕ್ತಿಕ ಕ್ರಿಯೆಗಳಲ್ಲಿ, ನಮ್ಮ ಸಾಮಾಜಿಕ ಜೀವನದಲ್ಲಿ, ನಮ್ಮ ರಾಜಕೀಯ ಪ್ರಯತ್ನಗಳಲ್ಲಿ ತೋರ್ಪಡಿಸಲಷ್ಟೇ ಅಲ್ಲ, ಹಾಗೆ ಬಾಳಲು ನಾವು ಹೆಚ್ಚು ಹೆಚ್ಚು ಶ್ರಮಿಸುವೆವು."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/26–27**

**ಆರ್ಯ ಧರ್ಮವನ್ನು ಮರುಚೈತನ್ಯಗೊಳಿಸುವುದು**

ವ್ಯಕ್ತಿಗೆ ಮತ್ತು ವಿಶೇಷವಾಗಿ ಯಾರು ಭಾರತದ ಕಾರ್ಯಕ್ಕಾಗಿ, ಜಗತ್ತಿನ ಕಾರ್ಯಕ್ಕಾಗಿ, ದೇವರ ಕಾರ್ಯಕ್ಕಾಗಿ ಜಾಗೃತರಾಗುತ್ತಿದ್ದಾರೋ ಅವರಿಗೆ "ನೀವು ನಿಮ್ಮ ಮನಸ್ಸುಗಳನ್ನು ಯುರೋಪಿನ ಆದರ್ಶಗಳಿಗೆ ಅಧೀನಪಡಿಸಿಕೊಂಡರೆ ಅಥವಾ ಪ್ರಾಪಂಚಿಕ ದೃಷ್ಟಿಕೋನದಿಂದ ಜೀವನದತ್ತ ನೋಡಿದರೆ ನೀವು ಈ ಆದರ್ಶಗಳನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ, ಅಷ್ಟೇ ಅಲ್ಲ ಅವುಗಳನ್ನು ನೆರವೇರಿಸಲು ಆಗುವುದಿಲ್ಲ." ನೀವು ಪ್ರಾಪಂಚಿಕವಾಗಿ ಏನೂ ಅಲ್ಲ, ಆಧ್ಯಾತ್ಮಿಕವಾಗಿ ಎಲ್ಲವೂ. ಒಬ್ಬ ಭಾರತೀಯ ಎಲ್ಲವನ್ನೂ ನಂಬಬಲ್ಲ, ಎಲ್ಲವನ್ನೂ ಎದುರಿಸಬಲ್ಲ, ಎಲ್ಲವನ್ನೂ ತ್ಯಾಗ ಮಾಡಬಲ್ಲ. ಆದ್ದರಿಂದ ಮೊದಲು ಭಾರತೀಯರಾಗಿ.

ಪೂರ್ವಜರಿಂದ ಬಳುವಳಿಯಾಗಿ ಬಂದ ಆಸ್ತಿಯನ್ನು ಹಿಂಪಡೆಯಿರಿ. ಆರ್ಯರ ವಿಚಾರ, ಆರ್ಯರ ಶಿಸ್ತು, ಆರ್ಯರ ನಡತೆ, ಆರ್ಯರ ಜೀವನ, ಎಲ್ಲವನ್ನೂ ಹಿಂಪಡೆಯಿರಿ. ವೇದಾಂತವನ್ನು ಗೀತೆಯನ್ನು, ಯೋಗವನ್ನು ಮರಳಿ ಪಡೆಯಿರಿ. ಅವುಗಳನ್ನು ನಿಮ್ಮ ಬುದ್ಧಿಶಕ್ತಿಯಲ್ಲಿ ಅಥವಾ ಭಾವನೆಗಳಲ್ಲಿ ಮಾತ್ರ ಅಷ್ಟೇ ಅಲ್ಲ ನಿಮ್ಮ ಜೀವನಗಳಲ್ಲಿ ಹಿಂಪಡೆಯಿರಿ. ಅವುಗಳನ್ನು ಅನುಭವಿಸಿದಾಗ ನೀವು ಶ್ರೇಷ್ಠ ಮತ್ತು ಬಲಶಾಲಿಗಳಾಗುವಿರಿ, ಶಕ್ತಿಶಾಲಿಗಳಾಗುವಿರಿ ಮತ್ತು

ಅಭಯರಾಗುವಿರಿ. ಜೀವನವಾಗಲಿ ಅಥವಾ ಮರಣವಾಗಲಿ ನಿಮಗೆ ಭಯವನ್ನಂಟುಮಾಡುವುದಿಲ್ಲ.

ತೊಂದರೆಗಳು ಮತ್ತು ಅಸಾಧ್ಯತೆಗಳು ನಿಮ್ಮ ಶಬ್ದಕೋಶದಿಂದ ಮಾಯವಾಗುವವು. ನೀವು ನಿಮ್ಮ ಹೊರ ಸಾಮ್ರಾಜ್ಯವನ್ನು ಗೆಲ್ಲುವುದಕ್ಕಿಂತ ಮೊದಲು ನೀವು ನಿಮ್ಮ ರಾಜ್ಯವನ್ನು – ಆಂತರಿಕ ಸ್ವರಾಜವನ್ನು – ಆ ಬಲವು ಶಾಶ್ವತವಾಗಿದೆ ಎಂಬ ಸ್ಫೂರ್ತಿಯಿಂದ – ಮರಳಿ ಗೆಲ್ಲಲೇಬೇಕು. ಶ್ರೀಮಾತೆಯವರು ಅಲ್ಲಿ ನೆಲೆಸಿದ್ದಾರೆ ಮತ್ತು ಬಲವನ್ನು ಕೊಡಲು ಅರ್ಚನೆಗಾಗಿ ಕಾಯುತ್ತಿದ್ದಾರೆ. ಅವಳಲ್ಲಿ ನಂಬಿಕೆಯಿಡಿ, ಅವಳ ಸೇವೆ ಮಾಡಿ, ಅವಳಲ್ಲಿ ನಿಮ್ಮ ಇಚ್ಛೆಗಳನ್ನು, ನಿಮ್ಮ ಅಹಂಭಾವನ್ನು ರಾಷ್ಟ್ರೀಯ ಉನ್ನತ ಪ್ರತಿಷ್ಠೆಯಲ್ಲಿ, ನಿಮ್ಮ ಪ್ರತ್ಯೇಕ ಸ್ವಾರ್ಥವನ್ನು ಮಾನವತೆಯ ಸೇವೆಯಲ್ಲಿ ಕಳೆದುಕೊಳ್ಳಿ. ಎಲ್ಲ ಶಕ್ತಿಗಳ ಮೂಲಗಳನ್ನು ನಿಮ್ಮಲ್ಲಿ ಹಿಂಪಡೆಯಿರಿ ಮತ್ತು ಸಾಮಾಜಿಕ ಸ್ವಾಸ್ಥ್ಯ, ಬೌದ್ಧಿಕ ಪ್ರಾಮುಖ್ಯತೆ, ರಾಜಕೀಯ ಸ್ವಾತಂತ್ರ್ಯ, ಮಾನವ ವಿಚಾರಗಳ ಪಾಂಡಿತ್ಯ, ಜಗತ್ತಿನ ಪ್ರಾಬಲ್ಯ ನಿಮಗೆ ಸೇರಿಸಲ್ಪಡುವವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/27–28 – ಶ್ರೀ ಅರವಿಂದರು**

## "ಧರ್ಮ" ಲೇಖನಗಳು

– ಅನುವಾದ: ಡಾ॥ ಬಿ.ಆರ್. ಭೀಡ

### ಕ್ಷಾತ್ರ ತೇಜದ ಅವಶ್ಯಕತೆ

ರಾಷ್ಟ್ರದ ಘನತೆಯನ್ನು ಕೇವಲ ಕ್ಷತ್ರಿಯ ಬಲದ ಮೇಲೆ ಕಟ್ಟಲು ಸಾಧ್ಯವಿಲ್ಲ. ಸಮಾಜದ ಚಾತುರ್ವರ್ಣ್ಯದ ವ್ಯವಸ್ಥೆಯ ಮೇಲೆ ಆ ಘನತೆಯನ್ನು ನಿಲ್ಲಿಸಲು ಸಾಧ್ಯವಿದೆ. ರಾಜಸಿಕವಾಗಿರುವ ಕ್ಷಾತ್ರ ಬಲವನ್ನು ಸಾತ್ವಿಕವಾದ ಬ್ರಹ್ಮಬಲದ, ಜ್ಞಾನಾಮೃತದ, ನಮ್ರತೆಯ, ಸರ್ವಜನ ಹಿತಾಯವೆಂಬ ಉದಾತ್ತ ಪರಿಕಲ್ಪನೆಯ ಮೂಲಕ ಜೀವಂತವಾಗಿರಸಲು ಸಾಧ್ಯ. ಬ್ರಹ್ಮಬಲಕ್ಕೆ ಕ್ಷಾತ್ರ ಬಲವು ರಕ್ಷಣೆಯನ್ನು ನೀಡುವುದು. ಕ್ಷಾತ್ರಬಲದ ಸಹಾಯವಿಲ್ಲದೆ ಹೋದರೆ ಬ್ರಹ್ಮಬಲವು ತಾಮಸಿಕ ಮನೋವೃತ್ತಿಯಿಂದ ಬಾಧಿತವಾಗಿ ಶೂದ್ರದ ಅಜ್ಞಾನದ ಗುಣಗಳಿಗೆ ಆಶ್ರಯ ನೀಡುವುದು. ಆದ್ದರಿಂದಲೇ ಕ್ಷತ್ರಿಯರಿಲ್ಲದ ದೇಶದಲ್ಲಿ ವಾಸ ಮಾಡಬಾರದೆಂದು ಬ್ರಾಹ್ಮಣರಿಗೆ ವಿಧಿಸಲಾಗಿದೆ. ಕ್ಷತ್ರಿಯ ಕುಲವು ಒಂದೊಮ್ಮೆ ನಾಶವಾದರೆ, ಕ್ಷತ್ರಿಯ

ಕುಲವನ್ನು ಪುನಃ ಹೊಸದಾಗಿ ನಿರ್ಮಿಸುವ ಬಾಧ್ಯತೆ ಕೂಡ ಬ್ರಾಹ್ಮಣರ ಮೇಲೆಯೇ ಇರುತ್ತದೆ. ಅದೇ ರೀತಿ ಬ್ರಹ್ಮ ಶಕ್ತಿಯ ನೆರವಿಲ್ಲದೆ ಹೋದರೆ ಕ್ಷತ್ರಿಯರ ಬಲವು ಅನಿಯಂತ್ರಿತವಾದ ಉಗ್ರ ರಾಕ್ಷಸೀ ಪ್ರವೃತ್ತಿಯಾಗಿ ಬದಲಾಗುತ್ತದೆ. ಅದು ಮೊದಲು, ಅನ್ಯರ ಹಿತವನ್ನು ಹಾಳು ಮಾಡಿ, ನಂತರ ತನ್ನ ನಾಶಕ್ಕೆ ಕಾರಣವಾಗುತ್ತದೆ. ರಾಕ್ಷಸೀ ಪ್ರವೃತ್ತಿಯ ಜನರು ಯಾವಾಗಲೂ ತಮ್ಮ ವರ್ಧಿತ ಬಲದ ಭಾರದಲ್ಲಿಯೇ ನಾಶವಾಗುತ್ತಾರೆ ಎಂದು ರೋಮನ್ ಕವಿಯೊಬ್ಬನು ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಸತ್ವಗುಣವು ರಜೋಗುಣವನ್ನು ಸೃಷ್ಟಿಸಬೇಕು, ರಜೋಗುಣವು ಸತ್ವಗುಣವನ್ನು ರಕ್ಷಿಸಬೇಕು, ಸ್ವಾತ್ವಿಕ ಕಾರ್ಯಗಳಲ್ಲಿ ತೊಡಗಬೇಕು. ಆದ್ದರಿಂದ ವ್ಯಕ್ತಿಯ ಕಲ್ಯಾಣವು ಆಗುವುದು, ರಾಷ್ಟ್ರದ ಕಲ್ಯಾಣವು ಆಗುವುದು. ಸತ್ವಗುಣವು ರಜೋಗುಣವನ್ನು ನುಂಗಿ ಹಾಕಿದರೆ, ರಾಜನ ಗುಣವು ಸತ್ವಗುಣವನ್ನು ಅಪೋಶನಗೈದರೆ ಆಗ ತಾಮಸ ಗುಣವು ವಿಜೃಂಭಿಸುವುದು. ತಮೋಗುಣದ ಆಡಳಿತವೇ ಮೊದಲಾಗುವುದು. ಬ್ರಾಹ್ಮಣರು ಎಂದಿಗೂ ರಾಜಲಾಗಲಾರರು. ಕ್ಷತ್ರಿಯರು ನಾಶವಾದರೆ ಶೂದ್ರರು ರಾಜರಾಗುತ್ತಾರೆ. ಬ್ರಾಹ್ಮಣರು ತಾಮಸಿಕರಾದರೆ ಅವರ ಜ್ಞಾನವು ಸಂಪತ್ತಿನಾ ಆಮಿಷದಲ್ಲಿ ದೂಷಿತವಾಗುವುದು. ಆಗ ಬ್ರಾಹ್ಮಣರು ಶೂದ್ರರ ಸೇವಕರಾಗುವುರು. ಆಧ್ಯಾತ್ಮಿಕವು ನಿಷ್ಕ್ರಿಯತೆಯನ್ನು ಬೋಧಿಸಿದರೆ ಅದು ತಾನೇ ತನ್ನ ನಾಶಕ್ಕೆ ಕಾರಣವಾಗುವುದು. ಸರಿಯಾದ ಆಡಳಿತ ನಾಶವಾಗುವುದು. ಕ್ಷತ್ರಿಯರಿಲ್ಲದ ರಾಷ್ಟ್ರವು ಶೂದ್ರರಿಗೆ ಶರಣಾದರೆ ಅದು ಅವನತಿ ಹೊಂದುವುದು. ಭಾರತದಲ್ಲಿ ಆಗಿರುವುದು ಇದೇ.

**ಬಂಗಾಲಿ ಬರಹಗಳು: 146–47**

## ದೇಶಭಕ್ತಿ ಮತ್ತು ರಾಷ್ಟ್ರೀಯತೆ

ದೇಶಭಕ್ತಿ ಮತ್ತು ರಾಷ್ಟ್ರೀಯತೆ ಎರಡೂ ಬೇರೆ ಬೇರೆ – ದೇಶಭಕ್ತನು ಮಾತೃಭೂಮಿಯ ಸೇವೆಯಲ್ಲಿ ಸಂತೋಷ ಕಾಣುತ್ತಾನೆ. ಅವನಿಗೆ ಎಲ್ಲೆಲ್ಲೂ ಆಕೆಯೇ ಕಾಣುತ್ತಾಳೆ, ಆಕೆಯನ್ನು ಅವನು ದೇವತೆಯಂತೆ ಆರಾಧಿಸುತ್ತಾನೆ. ಎಲ್ಲವನ್ನೂ ಆ ತಾಯಿಗಾಗಿಯೇ ಮಾಡುತ್ತ, ಮಾಡಿದುದೆಲ್ಲವನ್ನು ಯಜ್ಞದಂತೆ ಆಕೆಗೇ ಅರ್ಪಿಸುತ್ತಾನೆ, ಏನೇ ಮಾಡಿದರೂ ತಾಯ್ನೆಲದ ಒಳಿತಿಗಾಗಿಯೇ ಮಾಡುತ್ತಾನೆ. ಅವನ ಸತ್ವದ ಹಿತಾರ್ಥಗಳೆಲ್ಲ ದೇಶದ ಹಿತಾರ್ಥಗಳಲ್ಲಿಯೇ ಕರಗಿ

ಹೋಗುತ್ತವೆ. ಹದಿನೆಂಟನೆಯ ಶತಮಾನದಲ್ಲಿ ಯಾವೊಬ್ಬ ಇಂಗ್ಲೀಷ ವ್ಯಕ್ತಿಗೂ ಈ ಭಾವನೆ ಇರಲಿಲ್ಲ. ಮತ್ತು ಪಾಶ್ಚಿಮಾತ್ಯ ಭೌತಿಕವಾದಿ ರಾಷ್ಟ್ರಗಳ ಯಾವೊಬ್ಬ ಪ್ರಜೆಗೂ ಹೃದಯದಾಳದಲ್ಲಿ ಈ ಭಾವನೆ ಇರುವುದಿಲ್ಲ. ಇಂಗ್ಲೀಷರು ಭಾರತಕ್ಕೆ ಬಂದದ್ದು ತಮ್ಮ ತಾಯ್ನಾಡಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದಲ್ಲ, ಅವರಿಲ್ಲಿ ವ್ಯಾಪಾರ ಮಾಡಲು ಬಂದಿದ್ದರು. ತಮ್ಮ ತಾಯ್ನಾಡಿನ ಪ್ರೇಮದಿಂದ ಈ ಭಾರತವನ್ನು ಅವರು ಗೆಲ್ಲಲಿಲ್ಲ. ಅಥವಾ ಒಳ ನುಸುಳಲಿಲ್ಲ. ಬದಲಾಗಿ ತಮ್ಮ ವ್ಯಕ್ತಿಗತ ಹಿತಾರ್ಥದಿಂದ ಹಾಗೆ ಮಾಡಿದರು. ಆದರೆ, ಏನೇ ಆಗಲಿ, ದೇಶಭಕ್ತರಾಗಿರದೇ ಹೋದರು ಅವರಲ್ಲಿ ರಾಷ್ಟ್ರೀಯತ್ವದ ಭಾವನೆ ಇತ್ತು. "ತಮ್ಮ ದೇಶ ಮಹೋನ್ನತವಾದುದು, ಅಲ್ಲಿನ ರೀತಿ, ನೀತಿ, ಸಂಪ್ರದಾಯ, ಧರ್ಮ, ಆಚಾರ, ನೈತಿಕತೆ, ಬಲ, ಬುದ್ಧಿಮತ್ತೆ, ಅಭಿರುಚಿ ಮುಂತಾದವೆಲ್ಲವೂ ಮಹೋನ್ನತ. ಬೇರಾರು ಅದನ್ನು ಅನುಕರಿಸಲಾರರು. ಅವು ಅಷ್ಟು ಪರಿಪೂರ್ಣವಾಗಿವೆ, ಬೇರಾರು ಅವುಗಳನ್ನು ಸಾಧಿಸಲಾರರು" ಎಂಬ ಹೆಮ್ಮೆ ಅವರಲ್ಲಿತ್ತು. "ನನ್ನ ದೇಶದ ಹಿತವೇ ನನ್ನ ಹಿತ, ನನ್ನ ದೇಶದ ಘನತೆಯೇ ನನ್ನ ಘನತೆ, ನನ್ನ ದೇಶಭಾಂದವರ ಅಭಿವೃದ್ಧಿಯೇ ನನ್ನ ಅಭಿವೃದ್ಧಿ. ನನ್ನ ವೈಯಕ್ತಿಕ ಲಾಭವನ್ನು ತ್ಯಜಿಸಿ ನನ್ನ ದೇಶಕ್ಕಾಗಿ ನಾನು ದುಡಿಯುತ್ತೇನೆ. ಹೋರಾಡುವ ಪ್ರಸಂಗ ಬಂದರೆ ಹೋರಾಡುತ್ತೇನೆ, ಆ ಹೋರಾಟದಲ್ಲಿ ಜೀವ ಹೋದರೂ ಲಕ್ಷಿಸುವುದಿಲ್ಲ. ಇದು ಪ್ರತಿಯೊಬ್ಬರ ಕರ್ತವ್ಯ, ಪ್ರತಿಯೊಬ್ಬರ ಧರ್ಮ" ಎಂಬ ಅಚಲ ನಂಬಿಕೆ ಅವರಲ್ಲಿತ್ತು. ಈ ರೀತಿಯ ಕರ್ತವ್ಯ ಪ್ರಜೆಯೇ ರಾಷ್ಟ್ರೀಯ ಪ್ರಜೆಯ ಮುಖ್ಯ ಲಕ್ಷಣ. ರಾಷ್ಟ್ರ ಪ್ರೇಮವು ಸಾತ್ವಿಕವಾಗಿದ್ದರೆ ರಾಷ್ಟ್ರ ಪ್ರಜೆಯು ರಾಜಸಿಕವಾಗಿರುತ್ತದೆ. ದೇಶದ ಅಸ್ಮಿತೆಯಲ್ಲಿ ತನ್ನ ವೈಯಕ್ತಿಕ ಅಹಂನ್ನು ಕಳೆದುಕೊಳ್ಳುವುದು ರಾಷ್ಟ್ರಪ್ರೇಮಿಯ ಆದರ್ಶ. ದೇಶದ ಅಸ್ಮಿತೆಯ ಜೊತೆಗೆ ತನ್ನ ಅಹಂ ಕೂಡ ಬೆಳೆಸುವವನು, ಕಾಪಾಡಿಕೊಳ್ಳುವನು ರಾಷ್ಟ್ರೀಯ ಪ್ರಜೆಯುಳ್ಳ ವ್ಯಕ್ತಿಯು. ಆ ಕಾಲದ ಭಾರತೀಯರಲ್ಲಿ ಇಂಥ ರಾಷ್ಟ್ರಪ್ರಜೆಯ ಕೊರತೆ ಇತ್ತು. ಅಂದರೆ ತಮ್ಮ ದೇಶದ ಒಳಿತಿಗಾಗಿ ಅವರು ಎಂದಿಗೂ ಕಾಳಜಿ ಮಾಡಲಿಲ್ಲ ಅಂತ ಅರ್ಥವಲ್ಲ. ಆದರೆ ಅವರ ವೈಯಕ್ತಿಕ ಲಾಭ ಹಾಗೂ ರಾಷ್ಟ್ರದ ಹಿತ ಎರಡರ ನಡುವೆ ತುಸು ತಾಕಲಾಟ ಬಂದರೂ ಸಾಕು, ತಮ್ಮ ವೈಯಕ್ತಿಕ ಹಿತಕ್ಕಾಗಿ ದೇಶದ ಹಿತವನ್ನು ಬಲಿ ಕೊಡಲು ಅವರ ಹಿಂದೆ ಮುಂದೆ ನೋಡುತ್ತಿರಲಿಲ್ಲ. ನಮ್ಮ ಮಟ್ಟಿಗೆ ಹೇಳುವುದಾದರೆ ಏಕತೆಯ ಭಾವನೆ ಇಲ್ಲದೇ ಹೋದುದಕ್ಕಿಂತ ಈ ರಾಷ್ಟ್ರೀಯ ಪ್ರಜ್ಞೆ ಇಲ್ಲದಿರುವುದೇ ನಮಗೆ ಹೆಚ್ಚು ಮಾರಕವಾಗಿ ಸಿದ್ಧವಾಯಿತು. ರಾಷ್ಟ್ರೀಯ

ಪ್ರಶ್ನೆಯೊಂದು ರಾಷ್ಟ್ರದಲ್ಲಿ ಎಲ್ಲೆಡೆಯಲ್ಲೂ ತುಂಬಿತೆಂದರೆ, ಈ ರೀತಿ ಕೆಟ್ಟದಾಗಿ ವಿಭಜಿತವಾಗಿರುವ ದೇಶದಲ್ಲಿ ಕೂಡ ಏಕತೆಯನ್ನು ಸಾಧಿಸಬಹುದು.

**ಬಂಗಾಲಿ ಬರಹಗಳು: 217–18**

**ಜ್ಞಾನದ ಸಾತ್ವಿಕ ಶಕ್ತಿಯ ಕ್ಷೀಣತೆ**

ಭಾರತೀಯರು ಮೂಲತಃ ತುಂಬ ಸಾತ್ವಿಕರು, ತುಂಬ ಸಾತ್ವಿಕ ದೇಶ. ಈ ಸಾತ್ವಿಕ ಬಲದಿಂದಾಗಿಯೇ ಅವರು ಜ್ಞಾನದಲ್ಲಿ, ಧೈರ್ಯದಲ್ಲಿ ಅನುಪಮರಾಗಿದ್ದರು, ತಮ್ಮತಮ್ಮಲ್ಲಿ ಎಷ್ಟೇ ಒಡಕು ಇದ್ದರೂ ಸಹ ವಿದೇಶಿಯರು ಆಕ್ರಮಣಗಳನ್ನು ಸಾವಿರಾರು ವರ್ಷಗಳವರೆಗೆ ಪ್ರತಿರೋಧಿಸಿದರು ಹಾಗೂ ಹಿಮ್ಮೆಟ್ಟುವಂತೆ ಮಾಡಿದರು. ಮುಂದೆ ನಿಧಾನವಾಗಿ ರಾಜಸಿಕಗುಣ ಹೆಚ್ಚಾಗುತ್ತ ಸಾತ್ವಿಕಗುಣ ಹ್ರಾಸವಾಗತೊಡಗಿತು. ಮುಸಲ್ಮಾನರು ಬಂದಾಗ ಅದಾಗಲೇ ವಿಶಾಲವಾಗಿ ಹಬ್ಬಿದ್ದ ಜ್ಞಾನವು ಕ್ಷೀಣಸಲಾರಂಭವಾಗಿತ್ತು. ಹಾಗೂ ರಾಜಸಿಕ ಗುಣ ಪ್ರಾಬಲ್ಯವುಳ್ಳ ರಾಜಪೂತರು ಸಿಂಹಾಸನದ ಮೇಲೆ ಕುಳಿತರು. ಉತ್ತರ ಭಾರತವು ಆಗ ಬರೀ ಯುದ್ಧಗಳಲ್ಲಿ, ಅಂತಃಕಲಹಗಳಲ್ಲಿ ಮುಳುಗಿ ಹೋಗಿತ್ತು. ಬೌದ್ಧ ಧರ್ಮದ ಅವನತಿಯಿಂದಾಗಿ ಆಗ ಬಂಗಾಲದಲ್ಲಿ ತಮಸ್ಸು ವಿಜೃಂಭಿಸುತ್ತಿತ್ತು. ಆಗ ಆಧ್ಯಾತ್ಮಿಕತೆಯು ದಕ್ಷಿಣದಲ್ಲಿ ಆಶ್ರಯವನ್ನು ಬಯಸಿತು. ದಕ್ಷಿಣ ಭಾರತವು ತನ್ನ ಸಾತ್ವಿಕ ಬಲದಿಂದಾಗಿ ಬಹುಕಾಲ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿತು. ನಿಧಾನವಾಗಿ ಜ್ಞಾನದಾಹ, ಜ್ಞಾನಾಭಿವೃದ್ಧಿ ಕ್ಷೀಣಿಸತೊಡಗಿದವು. ಬದಲಾಗಿ ಪಾಂಡಿತ್ಯಕ್ಕೆ ಹೆಚ್ಚಿನ ಗೌರವ ದಕ್ಕಲಾರಂಭಿಸಿತು. ಆಧ್ಯಾತ್ಮಿಕ ಜ್ಞಾನ, ಯೋಗಶಕ್ತಿಯ ಬೆಳವಣಿಗೆ, ಹಾಗೂ ಆಂತರಿಕ ಸಾಕ್ಷಾತ್ಕಾರಗಳ ಸ್ಥಾನದಲ್ಲಿ ತಾಮಸಿಕ ಧಾರ್ಮಿಕ ಆರಾಧನೆ, ರಾಜಸಿಕ ಸಮಾರಂಭಗಳ ಆಯೋಜನೆ ಮುಂತಾದವು ಲೌಕಿಕ ಇಚ್ಛಾಪೂರ್ತಿಯ ಸಾಧನಗಳಾಗಿ ಬೆಳೆದುಬಂದವು. ಸಮಾಜದಲ್ಲಿ ಚಾತುರ್ವರ್ಣ್ಯದ ವ್ಯವಸ್ಥೆ ಕೆಟ್ಟು ಹೋದ ಮೇಲೆ ಜನರು ಕೇವಲ ಬಾಹ್ಯ ಸಂಪ್ರದಾಯಗಳಿಗೆ, ಆಚರಣೆಗಳಿಗಾಗಿ ಮನ್ನಣೆ ನೀಡಲಾರಂಭಿಸಿದರು. ಈ ರೀತಿಯ ರಾಷ್ಟ್ರೀಯ ಧರ್ಮದ ವಿನಾಶವೇ ಗ್ರೀಕ, ರೋಮ, ಈಜಿಪ್ತ, ಅಸ್ಸೀರಿಯಾಗಳ ಸರ್ವನಾಶಕ್ಕೆ ಕಾರಣವಾಯಿತು. ಆದರೆ ಆರ್ಯ ಜನಾಂಗವು ಸನಾತನ ಧರ್ಮವನ್ನು ಬಿಡದೇ ಹೋದ್ದರಿಂದ, ಅಮೃತ ಸಮಾನವಾದ ಸಂಸ್ಕೃತಿಯನ್ನು ಸೇವಿಸುತ್ತ ಕಾಲಕಾಲಕ್ಕೆ ನವೀಕೃತವಾಗುತ್ತ ಬೆಳೆಯುತ್ತ ಬಂದಿತು.

ಶಂಕರರು, ರಾಮಾನುಜರು, ಚೈತನ್ಯ, ನಾನಕ, ರಾಮದಾಸ, ತುಕಾರಾಮ ಮುಂತಾದವರು ಆ ದಿವ್ಯ ಸಂಜೀವಿನಿಯನ್ನು ಚಿಮುಕಿಸುತ್ತ ಮೃತಪ್ರಾಯವಾಗಿದ್ದ ಭಾರತವನ್ನು ಜೀವಂತವಾಗಿರಿಸಿದರು. ಆದರೂ, ರಾಜಸಿಕ ಹಾಗೂ ತಾಮಸಿಕಗಳ ಪ್ರವಾಹ ಎಷ್ಟು ಪ್ರಬಲವಾಗಿತ್ತೆಂದರೆ ಅದರ ಸೆಳವಿನಲ್ಲಿ ಒಳ್ಳೆಯವರೂ ಸಹ ಕೆಟ್ಟವರಾಗಿ ಬದಲಾದರು – ಶಂಕರರ ವಾದ ಸರಣಿಯನ್ನೇ ಅನುಸರಿಸುತ್ತ ಸಾಮಾನ್ಯ ಜನರು ಕೂಡ ತಮ್ಮ ತಾಮಸ ಪ್ರವೃತ್ತಿಯನ್ನು ಸಮರ್ಥಿಸಿಕೊಳ್ಳತೊಡಗಿದರು. ಚೈತನ್ಯರು ನಿರೂಪಿಸಿದ ಭಕ್ತಿ ಪಂಥವು ತೀವ್ರತರ ತಾಮಸಿಕ ನಿಷ್ಕ್ರಿಯತೆಯ ಅಡಗುದಾಣವಾಯಿತು. ಸಮರ್ಥ ರಾಮದಾಸರಿಂದ ದೀಕ್ಷಿತರಾದ ಮರಾಠರು ತಮ್ಮ ಮಹಾರಾಷ್ಟ್ರದ ಧರ್ಮವನ್ನೇ ಮರೆತರು, ತಮ್ಮ ವೈಯಕ್ತಿಕ ಅಧಿಕಾರವನ್ನು ಸ್ವಾರ್ಥ ಸಾಧನೆಗಾಗಿ ಬಳಸುತ್ತ ದುರ್ಬಲರಾಗಿ ಅಂತಃಕಲಹಗಳಿಂದಾಗಿ, ಶಿವಾಜಿ ಮತ್ತು ಬಾಜಿರಾವ ಇವರು ಕಟ್ಟಿದ ಸಾಮ್ರಾಜ್ಯವನ್ನು ನಾಶಗೊಳಿಸಿದರು. ಹದಿನೆಂಟನೆಯ ಶತಮಾನದಲ್ಲಿ ಈ ಪ್ರವಾಹದ ಸೆಳೆತವು ಉತ್ತುಂಗಕ್ಕೇರಿತು. ಸಮಾಜ ಮತ್ತು ಧರ್ಮಗಳು ತೀರ ಸಂಕುಚಿತಗೊಂಡು ಕೆಲವೇ ಕೆಲ ಆಧುನಿಕ ಶಾಸ್ತ್ರಪಂಡಿತರ ವಿಧಿಗಳಿಗೆ ಒಳಪಟ್ಟವು. ಡಂಭಾಚಾರದ ಬಾಹ್ಯ ಸಮಾರಂಭಗಳು, ಆಚರಣೆಗಳು ಇವೇ ಧರ್ಮವೆಂಬಂತಾದವು. ಆರ್ಯರ ಜ್ಞಾನವು ನಾಶವಾಯಿತು, ಆರ್ಯರ ಧರ್ಮವು ನಾಶವಾಯಿತು. ಸನಾತನ ಧರ್ಮವು ಸಮಾಜವನ್ನು ತೊರೆದು ಕಾಡಿಗೆ ತೆರಳಿ ಸನ್ಯಾಸಿಗಳ ಹಾಗೂ ಭಕ್ತರ ಹೃದಯದಲ್ಲಿ ಆಶ್ರಯ ಪಡೆಯಿತು.

ಭಾರತವು ಆಗ ಜನನಿಬಿಡ ತಮಂಧಕಾರದಲ್ಲಿ ಮುಳುಗಿತ್ತು. ಅಂಥದರಲ್ಲೂ ಸಹ ಅತ್ಯದ್ಭುತವಾದ ರಾಜಸಿಕ ಪ್ರವೃತ್ತಿಯು ಬಾಹ್ಯ ಧರ್ಮದ ವೇಷದಲ್ಲಿ ದುಷ್ಟ ಮತ್ತು ಸ್ವಾರ್ಥಗಳ ಸಾಧನೆಗಾಗಿ ಅವಿರತವಾಗಿ ಪ್ರಯತ್ನಿಸುತ್ತಿತ್ತು. ಅದರಿಂದಾಗಿ ರಾಷ್ಟ್ರವೂ ನಾಶವಾಯಿತು. ದೇಶವೂ ಹಾಳಾಯಿತು. ದೇಶದಲ್ಲಿ ಶಕ್ತಿ, ಬಲಗಳಿಗೇನೂ ಕೊರತೆ ಇರಲಿಲ್ಲ. ಆದರೆ ಆರ್ಯ ಧರ್ಮ ಮತ್ತು ಸತ್ವಗಳಿಗೆ ಗ್ರಹಣ ಹಿಡಿದಿದ್ದರಿಂದ, ಆ ಶಕ್ತಿಯು ತನ್ನನ್ನು ತಾನು ಕಾಪಾಡಿಕೊಳ್ಳಲಾರದೇ ಹೋಯಿತು. ತನ್ನ ನಾಶವನ್ನು ತಾನೇ ತಂದುಕೊಂಡಿತು.

**ಬಂಗಾಲಿ ಬರಹಗಳು: 220–21**

ತಾವು ಪುನಃ ಚಟುವಟಿಕೆಯನ್ನು ಕೈಗೆತ್ತಿಕೊಂಡು ರಾಜಕೀಯವನ್ನು ಪ್ರವೇಶಿಸುವುದು ಸಾಧ್ಯವಿಲ್ಲವೆಂದು ಶ್ರೀ ಅರವಿಂದರು ಸ್ಪಷ್ಟವಾಗಿ ಹೇಳುತ್ತಾರೆ, ಏಕೆಂದರೆ ಅದರಿಂದ ಅವರ ಆಧ್ಯಾತ್ಮಿಕ ಕೆಲಸಕ್ಕೆ ತಿಲಾಂಜಲಿಯನ್ನೇ ಕೊಡಬೇಕಾಗುತ್ತದೆ.

ಅವರ ಆಧ್ಯಾತ್ಮಿಕ ನೆರವು ಈ ದೇಶಕ್ಕೆ ಹಾಗೂ ಯಾರು ಅಭೀಪ್ಸೆ ಪಡುತ್ತಾರೋ ಅವರಿಗಾಗಿ ಸದಾ ದೊರೆಯುವುದು. ಅವರು ಈ ಸಹಾಯ ಮಾಡಲು ಸದಾ ಸಿದ್ಧರಿದ್ದಾರೆ ಮತ್ತು ಅವಶ್ಯವೆನಿಸಿದರೆ ಹೆಚ್ಚಿನ ಸಹಾಯ ನೀಡಲೂ ಸಿದ್ಧರಿದ್ದಾರೆ. ಆದರೆ ಅವರಿಗೆ ಖಾತ್ರಿಯಾಗಿರುವುದೇನೆಂದರೆ ಕೇವಲ ಲಿಖಿತ ಸಂದೇಶಗಳು ಶಾಶ್ವತವಾದ ಪ್ರಭಾವ ಬೀರುವುದು ಹಾಗೂ ಸಾಕಷ್ಟು ಪ್ರಮಾಣದಲ್ಲಿ ಪರಿಣಾಮಕಾರಕವಾಗಿರುವುದು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/27 – ಶ್ರೀ ಅರವಿಂದರು**

## ದೇಶ ಮತ್ತು ರಾಷ್ಟ್ರೀಯತೆ

ಒಂದೇ ದೇಶ, ಒಬ್ಬಳೇ ತಾಯಿ – ಒಂದಿಲ್ಲೊಂದು ದಿನ ಏಕತೆ ಸಿದ್ಧಿಸಲೇಬೇಕು. ಅನೇಕ ಜನಾಂಗಗಳು ಏಕತೆಯಿಂದಾಗಿ ಪ್ರಬಲವಾದ, ಅಜೇಯವಾದ ರಾಷ್ಟ್ರ ನಿರ್ಮಾಣವಾಗುವುದು. ನಮ್ಮ ಧಾರ್ಮಿಕ ಅಭಿಪ್ರಾಯಗಳು ಬೇರೆ ಬೇರೆ ಆಗಿರಬಹುದು, ಜಾತಿ ಜಾತಿಗಳ ನಡುವೆ ಅವ್ಯಾಹತವಾಗಿ ಒಳಜಗಳ ನಡೆದಿರಬಹುದು. ನಮ್ಮ ನಮ್ಮ ನಡುವೆ ಹೊಂದಾಣಿಕೆ ಇಲ್ಲ. ಹಾಗೂ ಹೊಂದಾಣಿಕೆ ಆಗುವುದು ಸಾಧ್ಯವೇ ಇಲ್ಲ ಅಂತಲೂ ಅನಿಸಬಹುದು – ಆದರೆ ಯಾರು ತಪ್ಪಾಗಿ ಭಾವಿಸುವ ಅವಶ್ಯಕತೆ ಇಲ್ಲ. ದೇಶದಲ್ಲಿ ಮಾತೆಯು ಮೂರ್ತಿಮಂತಳಾಗಿ ಬಂದಿರುವಾಗ, ಆಕೆಯ ಮಾಂತ್ರಿಕ ಆಕರ್ಷಣೆಯ ಮೂಲಕ

ಒಳ್ಳೆಯ ದಾರಿಗಳಿಂದಲೇ ಆಗಲಿ, ಕೆಟ್ಟ ದಾರಿಗಳಿಂದಲೇ ಆಗಲಿ – ಪರಸ್ಪರ ತಿಳುವಳಿಕೆಯಿಂದಲೇ ಆಗಲಿ ಅಥವಾ ಒತ್ತಾಯ ಪೂರ್ವಕವಾಗಿಯೇ ಆಗಲಿ ಅಥವಾ ಅನುನಯದ ರೀತಿಯಿಂದಲೇ ಆಗಲಿ – ಸಾಮರಸ್ಯ ಸ್ಥಾಪಿತವಾಗುವುದು ನಿಶ್ಚಿತ. ಜಾತೀಯತೆ, ಬೇರೆ ಬೇರೆ ಅನ್ನುವ ಭಾವಗಳು ಕೊನೆಯಾಗಿ ಭ್ರಾತೃತ್ವದ ಭಾವ ನೆಲೆಯೂರುವುದು. ಸಾಮೂಹಿಕ ಪ್ರೇಮ ಮೂಡುವುದು, ಮಾತೆಯೆಡೆಗೆ ಸಾಮೂಹಿಕ ಆರಾಧನೆ ಕಂಡುಬರುವುದು. ಅನೇಕ ಭಾಷೆಗಳಿರುವ ದೇಶದಲ್ಲಿ ಒಬ್ಬರಿಗೊಬ್ಬರ ಭಾವನೆ ಅರ್ಥವಾಗುವುದಿಲ್ಲ, ಮತ್ತೊಬ್ಬರ ಬಗ್ಗೆ ಅನುಕಂಪ ಮೂಡುವುದು ಕಠಿಣ, ಹೃದಯ ಹೃದಯಗಳ ನಡುವೆ ಅನೇಕ ಅಡ್ಡಿಗಳಿರುವುದು ಸಹಜ. ಇವುಗಳನ್ನೆಲ್ಲ ಅಪಾರ ಪರಿಶ್ರಮ, ಪ್ರಯತ್ನದಿಂದ ನಿವಾರಿಸಬೇಕು. ಆದರೆ ಯಾರು ಹೆದರಬೇಕಾಗಿಲ್ಲ. ಒಂದು ದೇಶದ, ಜನರ ಮನಸ್ಸಿನಲ್ಲಿ ಯಾವಾಗಲೂ ಒಂದೇ ರೀತಿಯ ವಿಚಾರಧಾರೆ ಹರಿಯುತ್ತಿರುತ್ತದೆ. ಎಲ್ಲರ ನಡುವೆ ಸಂವಹನಕ್ಕಾಗಿ ಒಂದು ಸಾಮೂಹಿಕ ಭಾಷೆಯ ಅಗತ್ಯದ ಒತ್ತಡ ಹೆಚ್ಚುವುದು. ಆಗ ಒಂದು ಭಾಷೆ ವಿಕಸಿತವಾಗುವುದು, ಈಗ ಪ್ರಚಲಿತದಲ್ಲಿರುವ ಭಾಷೆಗಳಲ್ಲಿಯೇ ಯಾವುದಾದರೊಂದು ಭಾಷೆ ಸ್ವೀಕೃತವಾಗಬಹುದು ಅಥವಾ ಬೇರೆಯದೇ ಹೊಸ ಭಾಷೆಯೇ ನಿರ್ಮಾಣವಾಗಬಹುದು. ತಾಯಿಯ ದೇಗುಲದಲ್ಲಿ ಎಲ್ಲರೂ ಆ ಭಾಷೆಯನ್ನೇ ಆಡುವಂತಾಗುವುದು. ಯಾವ ಅಡ್ಡಿ ಆತಂಕಗಳೂ ಶಾಶ್ವತವಾಗಿ ಉಳಿಯುವುದು ಸಾಧ್ಯವಿಲ್ಲ. ತಾಯಿಯ ಅವಶ್ಯಕತೆ, ಆಕೆಯ ಆಕರ್ಷಣೆ ಹಾಗೂ ಆಳವಾದ ಬಯಕೆ ಇವು ಎಂದಿಗೂ ಸೋಲುವುದಿಲ್ಲ. ನಿರಾಶೆ ಬೇಡ ಅವು ಎಲ್ಲ ಅಡ್ಡಿಗಳನ್ನೂ ಮೀರುವುವು. ಒಂದೇ ತಾಯಿಯ ಮಕ್ಕಳು ನಾವು, ಆಕೆಯ ಮಡಿಲಲ್ಲೇ ಬೆಳೆಯುವವರು, ಆಕೆಯ ಪಂಚಭೂತಗಳಲ್ಲೇ ನಾವು ವಿಲೀನ ಹೊಂದುವವರು, ಸಾವಿರಾರು ನಿಜವಾದ ಅಡೆತಡೆಗಳಿದ್ದರೂ ಚಿಂತೆ ಇಲ್ಲ ಆಕೆಯ ಕರೆ ಬಂದ ತಕ್ಷಣ ನಾವೆಲ್ಲರೂ ಒಂದಾಗುವೆವು. ಇದು ಪ್ರಕೃತಿಯ ನಿಯಮ. ಇದು ಇತಿಹಾಸ ಕಲಿಸುವ ಪಾಠ. ದೇಶವು ರಾಷ್ಟ್ರೀಯತೆಯ ಆಧಾರ, ಅದು ಅನಿವಾರ್ಯವಾದ ಬಂಧ. ತನ್ನದೇ ತಾಯ್ನೆಲ ಇರುವಾಗ ರಾಷ್ಟ್ರೀಯತೆ ಅವಶ್ಯವಾಗಿ ಇದ್ದೇ ಇರುತ್ತದೆ. ಬದಲಾಗಿ, ದೇಶವು ಒಂದೇ ಆಗಿರದೆ, ಕೇವಲ ಜಾತಿ ಜನಾಂಗ ಒಂದೇ ಆಗಿದ್ದರೂ, ಭಾಷೆ ಹಾಗೂ ಧರ್ಮ ಒಂದೇ ಆಗಿದ್ದರೂ ಕೂಡ ಅದರಿಂದೇನೂ ಲಾಭವಾಗುವುದಿಲ್ಲ. ಒಂದಿಲ್ಲೊಂದು ದಿನ ಬೇರೆಯದೇ ಆದ ಜನಾಂಗ ಬರುವುದು ನಿಶ್ಚಿತ. ಅನೇಕ ದೇಶಗಳನ್ನು ಒಂದಾಗಿ ಸೇರಿಸಿ ಬಹು ದೊಡ್ಡ ಸಾಮ್ರಾಜ್ಯವನ್ನೇನೋ ಕಟ್ಟಬಹುದು, ಆದರೆ ಅದರಿಂದಾಗಿ ಘನವಾದ

ರಾಷ್ಟ್ರೀಯತೆ ಏನೂ ಮಾಡುವುದಿಲ್ಲ. ಸಾಮ್ರಾಜ್ಯ ಅವನತಿ ಹೊಂದಿದ್ದರೆ ಪುನಃ ಎಲ್ಲ ದೇಶಗಳು ಬೇರೆ ಬೇರೆ ಆಗಿಬಿಡುವುವು. ಬಹಳ ಸಲ, ಆಂತರಿಕ ಇಂಥ ಪ್ರತ್ಯೇಕತೆಯ ಭಾವನೆಯೇ ಸಾಮ್ರಾಜ್ಯದ ಅವನತಿಗೆ ಕಾರಣವಾಗುವುದು.

**ಬಂಗಾಲಿ ಬರಹಗಳು: 224–25**

## ಪೂರ್ವ ಮತ್ತು ಪಶ್ಚಿಮ

ಪೂರ್ವ (ಪೌರ್ವಾತ್ಯ) ಮತ್ತು ಪಶ್ಚಿಮ (ಪಾಶ್ಚಿಮಾತ್ಯ) ಎರಡನ್ನೂ ಸೇರಿಸುವುದೇ ಇವತ್ತಿನ ಧರ್ಮ. ಆದರೆ ಈ ರೀತಿ ಸಮನ್ವಯಗೊಳಿಸುವಿಕೆಯಲ್ಲಿ ನಾವು ಒಂದು ವೇಳೆ ಪಶ್ಚಿಮವನ್ನು ತಳಹದಿಯಾಗಿ ಅಥವಾ ಮುಖ್ಯ ಆಧಾರವಾಗಿರಿಸಿಕೊಂಡರೆ ಬಹು ದೊಡ್ಡ ತಪ್ಪು ಮಾಡಿದಂತಾಗುತ್ತದೆ. ಪೂರ್ವವೇ ಅದರ ಅಡಿಪಾಯ ಹಾಗೂ ಮುಖ್ಯ ಆಧಾರವಾಗಿ ಇರಬೇಕು. ಬಾಹ್ಯ ಜಗತ್ತು ಆಂತರಿಕದ ಮೇಲೆ ನಿರ್ಬಂಧವಾಗಿರುತ್ತದೆಯೇ ಹೊರತು ಒಳಗಿನವರು ಮೇಲಿನದರ ಮೇಲೆ ನಿರ್ಭರವಾಗಿರುವುದಿಲ್ಲ. ಗೌರವ, ಭಾವ ಅಥವಾ ಅಂತಃಪ್ರವೃತ್ತಿ ಇವೇ ಶಕ್ತಿಯ ಹಾಗೂ ಚಟುವಟಿಕೆಯ ಮೂಲ. ಅಂತರಂಗದ ಭಾವ ಮತ್ತು ಪ್ರವೃತ್ತಿಗೆ ನಾವು ನಿಷ್ಠರಾಗಿರಬೇಕು. ಹಾಗೂ ಗೌರವ ಭಾವನೆಗೆ ಬದ್ಧರಾಗಿರಬೇಕು. ಆದರೆ ಶಕ್ತಿಯ ಪ್ರಯೋಗಕ್ಕೆ ಹಾಗೂ ಬಾಹ್ಯ ಆಕಾರಗಳಿಗೆ ಹಾಗೂ ಚಟುವಟಿಕೆಗಳ ಸಾಧನೆಗಳಿಗೆ ಯಾರು ಅಂಟಿಕೊಂಡಿರಬಾರದು. ಪಾಶ್ಚಿಮಾತ್ಯರು ಯಾವಾಗಲೂ ಬಾಹ್ಯ ಆಕಾರ ಮತ್ತು ಪ್ರಜಾಪ್ರಭುತ್ವದ ಸಾಧನಗಳ ಬಗ್ಗೆ ಮಾತ್ರ ಆಲೋಚಿಸುತ್ತಾರೆ. ಆದರೆ ಬಾಹ್ಯ ಆಕಾರವು ಯಾವಾಗಲೂ ಅಂತಃಪ್ರವೃತ್ತಿಯನ್ನು ಬಾಹ್ಯದಲ್ಲಿ ಪ್ರಕಟಿಸಲೆಂದೇ ಇರುತ್ತದೆ. ಆ ಅಂತರಂಗದಲ್ಲಿನ ಭಾವವೇ ಬಾಹ್ಯ ಆಕಾರವನ್ನು ರೂಪಿಸುತ್ತದೆ. ಹಾಗೂ ವ್ಯಕ್ತಿಯಲ್ಲಿರುವ ಗೌರವ ಭಾವವೋ ಸಾಧನ ಅಥವಾ ಉಪಕರಣಗಳ ಬಗ್ಗೆ ಆಲೋಚಿಸುತ್ತದೆ/ನಿರ್ಧರಿಸುತ್ತದೆ. ಪಾಶ್ಚಿಮಾತ್ಯರು ಕೇವಲ ಬಾಹ್ಯ ಆಕಾರ ಹಾಗೂ ಸಾಧನಗಳಿಗೆ ಎಷ್ಟರ ಮಟ್ಟಿಗೆ ಅಂಟಿಕೊಂಡಿದ್ದಾರೆಂದರೆ, ತಮ್ಮ ಬಾಹ್ಯ ಪ್ರಕಟಣೆಗಳಲ್ಲಿ ಆಂತರಿಕ ಪ್ರವೃತ್ತಿ ಮತ್ತು ಗೌರವ ಸೊರಗುತ್ತಿರುವುದನ್ನು ನೋಡುತ್ತಲೇ ಇಲ್ಲ. ಇತ್ತೀಚಿನ ದಿನಗಳಲ್ಲಿ ಪೌರ್ವಾತ್ಯ ದೇಶಗಳಲ್ಲಿ ಆಂತರಿಕ ಪ್ರವೃತ್ತಿ ಹಾಗೂ ಪ್ರಜಾಪ್ರಭುತ್ವದೆಡೆಗಿನ ಗೌರವ ತೀವ್ರ ಸ್ಪಷ್ಟವಾಗುತ್ತಿದೆ ಹಾಗೂ ಅದರ ಬಾಹ್ಯ ಸ್ವರೂಪ ಮತ್ತು ಸಾಧನಗಳು ಆ ರೀತಿ ನಿರ್ಮಾಣವಾಗುತ್ತಿವೆ. ಆದರೆ ಅದೇ ಪಾಶ್ಚಿಮಾತ್ಯ ದೇಶಗಳಲ್ಲಿ ಮಾತ್ರ ಇಂಥ ಭಾವನೆ ಕ್ಷೀಣಿಸುತ್ತಿದೆ ಹಾಗೂ ಗೌರವ ಕಡಿಮೆಯಾಗುತ್ತದೆ.

ಪೂರ್ವವು ಬರಲಿರುವ ಉಷೆಯೆಡೆಗೆ ಮುಖಮಾಡಿದೆ, ಬೆಳಕಿನತ್ತ ನಡೆಯುತ್ತಿದೆ. ಪಶ್ಚಿಮವು ಹಿನ್ನೆಡೆಯುತ್ತ ಕತ್ತಲೆಯೆಡೆಗೆ ಹೊರಟಿದೆ.

**ಬಂಗಾಲಿ ಬರಹಗಳು: 256**

*1910ರ ಫೆಬ್ರುವರಿಯಲ್ಲಿ ಅವರು (ಶ್ರೀ ಅರವಿಂದರು) ರಹಸ್ಯ ನಿರ್ಗಮನ ತೆಗೆದುಕೊಂಡು ಏಕಾಂತವಾಸಕ್ಕಾಗಿ ಚಂದ್ರನಗರಿಗೆ ಬಂದರು, ಅಲ್ಲಿಂದ ಮುಂದೆ ಎಪ್ರಿಲ್ ತಿಂಗಳ ಆರಂಭದಲ್ಲಿ ಫ್ರೆಂಚ ವಸಾಹತಿನ ಭಾರತದ ಪಾಂಡಿಚೇರಿಗೆ ಬಂದು ನೆಲೆಸಿದರು. ಈ ಅವಧಿಯಲ್ಲಿ ಮೂರನೆಯ ಆಪಾದನೆಯೊಂದನ್ನು ಸಿದ್ಧಪಡಿಸಲಾಗಿತ್ತು – ಕರ್ಮಯೋಗಿ ಎಂಬ ಪತ್ರಿಕೆಯಲ್ಲಿನ ಒಂದು ಲೇಖನವನ್ನು ಸ್ವತಃ ಅವರೇ ಬರೆದಿದ್ದದು, ಅವರ ಹಸ್ತಾಕ್ಷರದ ಅಂಕಿತವಿದೆ ಎಂದು ಆಪಾದಿಸಿ ಅವರ ಗೈರು ಹಾಜರಿಯಲ್ಲಿ ಅವರ ಮೇಲೆ ಒತ್ತಾಯದಿಂದ ಕೇಸು ದಾಖಲು ಮಾಡಲಾಯಿತು. ಆದರೆ ಆ ಕೇಸು ನಿಲ್ಲದೇ, ಕಲ್ಕತ್ತೆ ಹೈಕೋರ್ಟಿನಲ್ಲಿ ಬಿದ್ದುಹೋಯಿತು. ಅವರ ಮೇಲಿನ ಮೂರನೆಯ ಆಪಾದನೆ ಕೂಡ ವಿಫಲವಾಯಿತು. ಮುಂದೊಮ್ಮೆ ಅನುಕೂಲಕರ ಪರಿಸ್ಥಿತಿ ನೋಡಿಕೊಂಡು ರಾಜಕೀಯ ಕ್ಷೇತ್ರಕ್ಕೆ ಮರುಪ್ರವೇಶ ಮಾಡಬೇಕೆಂಬ ಉದ್ದೇಶದಿಂದ ಶ್ರೀ ಅರವಿಂದರು ಬಂಗಾಲದಿಂದ ಹೊರಟುಬಂದರು. ಆದರೆ ಅನತಿ ಕಾಲದಲ್ಲಿ ತಾವು ಕೈಗೆತ್ತಿಕೊಂಡ ಆಧ್ಯಾತ್ಮಿಕ ಕೆಲಸದ ಭಾರದ – ಹೊಣೆಗಾರಿಕೆಯ ಅರಿವು ಅವರಿಗಾಯಿತು ಹಾಗೂ ಅದಕ್ಕಾಗಿ ತಮ್ಮೆಲ್ಲ ಶಕ್ತಿಯನ್ನು ಅದರ ಮೇಲೆಯೇ ಕ್ರೋಢಿಕರಿಸಬೇಕಾದ ತಮ್ಮೆಲ್ಲ ಶಕ್ತಿಯನ್ನು ಅವಶ್ಯಕತೆ ಇದೆ ಎಂಬುದನ್ನು ಅವರು ಮನಗಂಡರು. ಕೊನೆಗೆ ರಾಜಕೀಯದ ಜೊತೆಗಿನ ನಂಟನ್ನು ಸಂಪೂರ್ಣವಾಗಿ ಕಡಿದುಕೊಂಡರು. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ವಹಿಸಿಕೊಳ್ಳಬೇಕೆಂಬ ಮನವಿಯನ್ನು ಅನೇಕ ಬಾರಿ ತಿರಸ್ಕರಿಸಿದರು. ರಾಜಕೀಯದಿಂದ ಸಂಪೂರ್ಣ ನಿವೃತ್ತಿಯನ್ನು ಘೋಷಿಸಿಬಿಟ್ಟರು. 1910 ರಿಂದ ಇವತ್ತಿನವರೆಗಿನ ತಮ್ಮ ಪಾಂಡಿಚೇರಿಯ ನಿವಾಸದ ಅವಧಿಯಲ್ಲಿ ಅವರು ಹೆಚ್ಚು ಹೆಚ್ಚಾಗಿ ತಮ್ಮ ಆಧ್ಯಾತ್ಮಿಕ ಕೆಲಸ ಮತ್ತು ಸಾಧನೆಯಲ್ಲಿಯೇ ನಿರತರಾದರು.*

***CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/9 – ಶ್ರೀ ಅರವಿಂದರು***

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

"ಸ್ಪೆಕ್ಟ್ರಮ್" ವತಿಯಿಂದ ದಿನಾಂಕ 6ನೇ ಜುಲೈ 2019ರ ಶನಿವಾರದಂದು ಡಾ॥ ಆರ್. ಶ್ರೀನಿವಾಸಮೂರ್ತಿ, ನಿವೃತ್ತ ಮನೋವೈದ್ಯರು, ನಿಮ್ಹಾನ್ಸ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "Spirituality & Health" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 13ನೇ ಜುಲೈ 2019ರ ಶನಿವಾರದಂದು ಶ್ರೀ ಸಂಪದಾನಂದ ಮಿಶ್ರ, ಶ್ರೀ ಅರವಿಂದೋ ಸೊಸೈಟಿ, ಪುದುಚೇರಿ ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "Renaissance of Indian Culture" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 20ನೇ ಜುಲೈ 2019ರ ಶನಿವಾರದಂದು ಡಾ॥ ಅರವಿಂದ್ ಬಾಷ್ಯಂ, ಪ್ರೊಫೆಸರ್ ಕ್ರೈಸ್ಟ್ ಯೂನಿವರ್ಸಿಟಿ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "True Love - Just a Currency for Joy" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 27ನೇ ಜುಲೈ 2019ರ ಶನಿವಾರದಂದು ಶ್ರೀ ಗೋವಿಂದ ಶರ್ಮಾ, ಸ್ವಾಮಿ ವಿವೇಕಾನಂದ ಯುವ ಚಳುವಳಿ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "The difficulty of being good" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.



ಶ್ರೀ ಅರವಿಂದರು

(ಫೋಟೋ ಕೃಪೆ: ಜ್ಯೋತಿಸ್ ಜಿ. ಗುರುಮೂರ್ತಿ ಕೆನಡಾ)

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಪಾಪ–ಕರ್ಮಗಳ ಜೊತೆ ಘೋರ ತಪ್ಪುಗಳ ಮೈಲುಗಲ್ಲುಗಳನು
ನೆಡುನೆಡುತ ಸಾಗಿ ಗುರಿ ಸೇರಲೆಂದು ಹಂಬಲವ ಹೊಂದಿ ನಾನು,
ಸರ್ವಾತಿಸರ್ವ ಅನುಭವವು ದೀರ್ಘ–ದೀರ್ಘಾತಿ ಪಯಣದೆಡೆಗೆ
ಪದ–ಪದದಿ ಅರ್ಥ–ಭಾವಗಳು ಅರಳಿ ಚಲನೆಯಿದೆ ಬೆಳಕಿನೆಡೆಗೆ ॥

ಅಚೇನದಾಳದೆದೆಯಿಂದ ನಾನು ಚೇತನವ ರೂಪುಗೊಳಿಸಿ
ಮೃತ್ಯು ಪಥದಲ್ಲಿ ಮುಂದುವರೆಯುತ್ತ ಆಗಲೆನೆ ಗಮ್ಯ–ವಾಸಿ
ಅಮರತ್ವದೆಡೆಗೆ ಸಾಗಲೆನೆ ಬದುಕು, ಸಮರದೊಲು ಯತ್ನ ಸತತ
ತಮದ ನೆಲೆಯಿಂದ ಭೂಮ ಬೆಳಕಿನಡೆ ವಿಕಸನದ ಗಮನ ನಿರತ.

**– ಪುಟ್ಟು ಕುಲಕರ್ಣಿ**

(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 4 ಪುಟ 535)

Photo: Imaging Savitri

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.